ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪ್ರಕಟಣೆ – ೧೬೪
ವಿಚಾರ ಸಾಹಿತ್ಯಮಾಲೆ – ೨೨
ಭಾರತೀಯ ವಿದ್ಯಾ ಭವನದ ಮೈಸೂರು ಕೇಂದ್ರದ
ಸಹಕಾರದೊಂದಿಗೆ

ಪ್ರಧಾನ ಸಂಪಾದಕರು
ಡಾ. ಪ್ರಧಾನ್ ಗುರುದತ್ತ

ಸಂಪಾದಕರು
ಡಾ. ಎ. ವಿ. ನರಸಿಂಹಮೂರ್ತಿ

ಭಾರತದ ಸಂದೇಶ ಮತ್ತು ಗುರಿ

ಭವನದ ಗ್ರಂಥ ವಿಶ್ವವಿದ್ಯಾನಿಲಯ

ಭಾರತದ ಸಂದೇಶ ಮತ್ತು ಗುರಿ

ಆನೋ ಭದ್ರಾಃ ಕ್ರತವೋ ಯನ್ತು ವಿಶ್ವತಃ

(ಎಲ್ಲ ಸದ್ವಿಚಾರಗಳು ಎಲ್ಲೆಡೆಯಿಂದಲೂ ಬರಲಿ)

–ಋಗ್ವೇದ, I ೮೯–೧

ಮೂಲ

ಶ್ರೀ ಅರಬಿಂದೊ

ಅನುವಾದ

ಮನು

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು

ಮತ್ತು

ಭಾರತೀಯ ವಿದ್ಯಾ ಭವನ, ಮೈಸೂರು

Bharatada Sandesha Mattu Guri: Kannada translation of *The Message & Mission of India* : **Sri Aurobindo;** Kannada translation by **Manu;** Editor-in-Chief: **Dr. Pradhan Gurudatta;** Editor of the series: **Dr. A. V. Narasimha Murthy;** Published under the joint auspices of **Kuvempu Bhasha Bharati Pradhikara,** Kalagrama, Jnana Bharathi, Behind Bangalore University Campus, Mallattahalli, Bangalore - 560 056, and **Bharatiya Vidya Bhavana,** Mysore; Published by **P. Narayana Swamy,** Registrar, Kuvempu Bhasha Bharathi Pradhikara; 2013; Pp. xxii + 72. Price : Rs. 10/-

ಮುದ್ರಣ : ೨೦೧೩
ಪುಟಗಳು : xxii + ೭೨
ಬೆಲೆ : ರೂ. ೧೦/-

ಪ್ರಕಾಶಕರು :
ಪಿ. ನಾರಾಯಣಸ್ವಾಮಿ
ರಿಜಿಸ್ಟ್ರಾರ್
ಕುವೆಂಪು ಭಾಷಾ ಭಾರತಿ ಪ್ರಾಧಿಕಾರ
ಕಲಾಗ್ರಾಮ, ಜ್ಞಾನಭಾರತಿ
ಬೆಂಗಳೂರು ವಿಶ್ವವಿದ್ಯಾಲಯ ಆವರಣದ ಹಿಂಭಾಗ
ಮಲ್ಲತ್ತಹಳ್ಳಿ, ಬೆಂಗಳೂರು – ೫೬೦ ೦೫೬
ದೂ. : ೨೩೧೮೩೩೧೧, ೨೩೧೮೩೩೧೨

ಮುಖಪುಟ ವಿನ್ಯಾಸ ಮತ್ತು ಚಿತ್ರ : **ಮಯೂರ ಪ್ರಿಂಟ್ ಆಡ್ಸ್**

ಮುದ್ರಕರು :
ಮೆ॥ ಮಯೂರ ಪ್ರಿಂಟ್ ಆಡ್ಸ್
ನಂ. ೬೯, ಸುಭೇದಾರ್ ಛತ್ರಂ ರೋಡ್
ಬೆಂಗಳೂರು – ೫೬೦೦೨೦ ದೂ : ೨೩೩೪೨೭೨೪

ಕರ್ನಾಟಕ ಸರ್ಕಾರ

ಸಿದ್ದರಾಮಯ್ಯ
ಮುಖ್ಯ ಮಂತ್ರಿಗಳು

ವಿಧಾನಸೌಧ
ಬೆಂಗಳೂರು – ೫೬೦ ೦೦೧

ಮುನ್ನುಡಿ

ಆಧುನಿಕ ಕನ್ನಡ ಸಾಹಿತ್ಯದ ಅತ್ಯುಚ್ಚ ಸಾಹಿತ್ಯಿಕ ಸಾಧನೆಯ ಪ್ರತೀಕವಾಗಿರುವ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಸ್ಥಾಪಿತವಾಗಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಸಾಹಿತ್ಯಿಕ, ಸಾಂಸ್ಕೃತಿಕ, ವೈಜ್ಞಾನಿಕ ಮತ್ತು ತಾಂತ್ರಿಕ ಮಹತ್ವದ ಗ್ರಂಥಗಳನ್ನು ಹೊರತರುವ ದಿಕ್ಕಿನಲ್ಲಿ ಹೊಸ ವಿಕ್ರಮಗಳನ್ನು ಸ್ಥಾಪಿಸುತ್ತ ಮುನ್ನಡೆಯುತ್ತಿರುವುದು ಸಂತೋಷದಾಯಕ ಸಂಗತಿಯಾಗಿದೆ.

ವಿವಿಧ ವಿದೇಶೀ ಮತ್ತು ಭಾರತೀಯ ಭಾಷೆ–ಸಾಹಿತ್ಯಗಳ ಅತ್ಯುತ್ತಮ ಕೃತಿಗಳನ್ನು ಕನ್ನಡದಲ್ಲಿ ಮತ್ತು ಕನ್ನಡದ ಶ್ರೇಷ್ಠ ಕೃತಿಗಳನ್ನು ಇತರ ಭಾಷೆಗಳಲ್ಲಿ ಹೊರತರುತ್ತಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ರಾಷ್ಟ್ರಪ್ರಶಸ್ತಿ ಪುರಸ್ಕೃತ ಲೇಖಕರ ಮತ್ತು ಕನ್ನಡದ ಇತರ ಪ್ರತಿಷ್ಠಿತ ಲೇಖಕರ ಅತ್ಯುತ್ತಮ ಪ್ರಾತಿನಿಧಿಕ ರಚನೆಗಳ 'ಸಂಚಯ'ಗಳನ್ನು ಹೊರತರುತ್ತಿರುವುದು ಶ್ಲಾಘನೀಯವಾಗಿದೆ. ಈಗಾಗಲೇ ಕುವೆಂಪು, ಪುತಿನ ಮತ್ತು ಜಿ.ಎಸ್.ಶಿವರುದ್ರಪ್ಪ ಅವರ ಸಂಚಯಗಳನ್ನು ಪ್ರಕಟಿಸಿರುವ ಪ್ರಾಧಿಕಾರ ಜ್ಞಾನಪೀಠ ಪ್ರಶಸ್ತಿ ಮತ್ತು ಸರಸ್ವತೀ ಸಮ್ಮಾನ್ ಪ್ರಶಸ್ತಿ ಪುರಸ್ಕೃತರ ಸಂಚಯಗಳನ್ನೂ ಸಿದ್ಧಪಡಿಸುತ್ತಿರುವುದು ಹೆಮ್ಮೆಯ ವಿಷಯವಾಗಿದೆ. ಇವುಗಳ ಹಿಂದೀ ಮತ್ತು ಇಂಗ್ಲಿಷ್ ಆವೃತ್ತಿಗಳು ಪ್ರಕಟವಾದಾಗ ಕನ್ನಡದ ಹಿರಿಮೆ–ಗರಿಮೆಗಳು ಸಾರಸ್ವತ ಲೋಕದಲ್ಲಿ ಮತ್ತಷ್ಟು ವೃದ್ಧಿಸಲಿವೆ. ಭಾರತೀಯ ಇತಿಹಾಸ, ಧರ್ಮ ಮತ್ತು ಸಂಸ್ಕೃತಿ–ಸಾಹಿತ್ಯಗಳನ್ನು ಕುರಿತ ಮಹತ್ವದ ಗ್ರಂಥಗಳನ್ನು ಹೊರತಂದಿರುವ ಭಾರತೀಯ ವಿದ್ಯಾ ಭವನದ **'ಪುಸ್ತಕ ವಿಶ್ವವಿದ್ಯಾನಿಲಯ'** ಮಾಲೆಯ ೨೫ ಗ್ರಂಥಗಳು ಈಗಾಗಲೇ ಹೊರಬಂದಿದ್ದು, ಇನ್ನೂ ೨೫ ಗ್ರಂಥಗಳು ಅಚ್ಚಿನಲ್ಲಿರುವುದು ವಿಶೇಷವಾಗಿ ಉಲ್ಲೇಖನೀಯ. ಜ್ಞಾನ–ವಿಜ್ಞಾನ–ತಂತ್ರಜ್ಞಾನ ಕ್ಷೇತ್ರಕ್ಕೂ ಕೊಡುಗೆಯಾಗಿ ನಿಲ್ಲಬಲ್ಲಂತಹ ಮಹತ್ವದ ಮೌಲಿಕ ಕೃತಿಗಳನ್ನು ಪ್ರಾಧಿಕಾರ ಹೊರತರುತ್ತಿರುವುದು ಎಲ್ಲರ ಮೆಚ್ಚಿಕೆಗೆ ಪಾತ್ರವಾಗುತ್ತದೆ.

ವಿಲ್ ಡ್ಯೂರಾಂಟ್ ಅವರ ವಿಶ್ವಕೋಶ ಸದೃಶವಾಗಿರುವ **'ನಾಗರಿಕತೆಯ ಇತಿಹಾಸ'**ದ ಸಂಪುಟಗಳು ಹಾಗೂ ಜೆ.ಡಿ.ಬರ್ನಾಲ್ ಅವರ **'ಇತಿಹಾಸದಲ್ಲಿ ವಿಜ್ಞಾನ'** ಸಂಪುಟಗಳು ಇದೇ ಮೊದಲ ಬಾರಿಗೆ ಭಾರತೀಯ ಭಾಷೆಯಲ್ಲಿ ಪ್ರಕಟವಾಗುತ್ತಿರುವುದು ಮತ್ತು ಆ ಹೆಮ್ಮೆ ಕನ್ನಡದ್ದಾಗಿರುವುದು ವಿಶೇಷತೆಗಳಲ್ಲಿ ವಿಶೇಷತೆಯಾಗಿದೆ. **'ಭಾರತರತ್ನ ಡಾ.ಬಿ.ಆರ್.ಅಂಬೇಡ್ಕರ್'** ಅವರ ಅನುವಾದಿತ ಕೃತಿಗಳ ಪರಿಷ್ಕರಣ ಯೋಜನೆ,

ಇನ್ನೂ ಅನುವಾದಿತವಾಗದಿರುವ ಅವರ ಇತರ ಸಂಪುಟಗಳ ಅನುವಾದದ ಪ್ರಕಟಣೆ, **'ಕನಕದಾಸರ ಕೃತಿ'**ಗಳ ಅನುವಾದ ಯೋಜನೆ, ಮುಂತಾದವು ಪ್ರಾಧಿಕಾರದಲ್ಲಿ ಹೊಸ ಮೈಲಿಗಲ್ಲನ್ನು ಸ್ಥಾಪಿಸಲಿವೆ.

ಪ್ರಾಧಿಕಾರದ ಧ್ಯೇಯೋದ್ದೇಶಗಳನ್ನು ಗಮನಿಸಿ, ನಾಡಿನ ಶ್ರೇಷ್ಠ ವಿದ್ವಾಂಸರು ಸಲಹೆ–ಸೂಚನೆ–ಸಹಕಾರಗಳನ್ನು ನೀಡುತ್ತ, ಪ್ರಾಧಿಕಾರ ಬಹುಮುಖೀ ಸಾಧನೆಗಳನ್ನು ಮಾಡಲು ನೆರವಾಗುತ್ತಿರುವುದೂ, ಪ್ರಾಧಿಕಾರದ ಆಶ್ರಯದಲ್ಲಿ ಅನೇಕ ಶೈಕ್ಷಣಿಕ ಕಾರ್ಯಕ್ರಮಗಳನ್ನು, ತರಬೇತಿ ಶಿಬಿರಗಳನ್ನು, ವಿಚಾರ ಸಂಕಿರಣಗಳನ್ನು ನಡೆಸುತ್ತಿರುವುದು, ಜೊತೆಗೆ ಇಂತಹ ಎಲ್ಲ ಕಾರ್ಯಕ್ರಮಗಳಿಂದಾಗಿ ಪ್ರಾಧಿಕಾರವು 'ಸಂಶೋಧನ ಕೇಂದ್ರ' ಎಂದು ವಿಶ್ವವಿದ್ಯಾನಿಲಯಗಳ ಮಾನ್ಯತೆಯನ್ನು ಪಡೆದುಕೊಂಡಿರುವುದು – ಇವೆಲ್ಲವೂ ನನ್ನಲ್ಲಿ ಹರ್ಷವನ್ನು ಉಂಟುಮಾಡಿದೆ.

ಪ್ರಾಧಿಕಾರದ ಎಲ್ಲ ಚಟುವಟಿಕೆಗಳಲ್ಲಿ ಕನ್ನಡ ನಾಡಿನ ಜನತೆ ಆಸಕ್ತಿಯಿಂದ ಪಾಲ್ಗೊಳ್ಳಲಿ ಹಾಗೂ ಪ್ರಾಧಿಕಾರದ ಪ್ರಕಟಣೆಗಳನ್ನು ಪ್ರೀತಿ–ವಿಶ್ವಾಸಗಳಿಂದ ಸ್ವಾಗತಿಸಲಿ ಎಂದು ಹೃತ್ಪೂರ್ವಕವಾಗಿ ಹಾರೈಸುತ್ತೇನೆ.

(ಸಿದ್ದರಾಮಯ್ಯ)

ಕರ್ನಾಟಕ ಸರ್ಕಾರ

ಉಮಾಶ್ರೀ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ,
ವಿಕಲಚೇತನರ, ಹಿರಿಯ ನಾಗರಿಕರ ಸಬಲೀಕರಣ
ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು

ವಿಧಾನಸೌಧ
ಬೆಂಗಳೂರು – ೫೬೦ ೦೦೧

ಸಂದೇಶ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಕರ್ನಾಟಕ ಸರ್ಕಾರ ಸ್ಥಾಪಿಸಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಇದು ವಿಜ್ಞಾನ – ತಂತ್ರಜ್ಞಾನ ಮತ್ತು ಸಾಹಿತ್ಯ ವಿಷಯಗಳಿಗೆ ಸಂಬಂಧಿಸಿದಂತೆ ನೂರಾರು ಮಹತ್ವದ ಮೌಲಿಕ ಹಾಗೂ ಅನುವಾದಿತ ಗ್ರಂಥಗಳನ್ನು ಹೊರತಂದಿರುವುದು ತುಂಬ ಶ್ಲಾಘನೀಯ ವಿಚಾರವಾಗಿದೆ. ಇದು ಈಗಾಗಲೇ ಹಲವು ವಿಶ್ವವಿದ್ಯಾಲಯಗಳ ಮಾನ್ಯತೆಯನ್ನುಗಳಿಸಿರುವುದು ಹಾಗೂ ಸಂಶೋಧನೆ ಕೇಂದ್ರವೆಂಬ ಹಿರಿಮೆಯೂ ಲಭಿಸಿರುವುದು ಗೌರವಾರ್ಹ ಸಂಗತಿಯಾಗಿದೆ. ಕನ್ನಡ ನೆಲ–ಜಲಗಳ ವಿಷಯದಲ್ಲಿ ಆಸಕ್ತವಾಗಿರುವ ಈ ಪ್ರಾಧಿಕಾರ ಈಗಾಗಲೇ 'ಕಾವೇರಿ ನ್ಯಾಯಾಧಿಕರಣದ ತೀರ್ಪಿ'ನ ಕನ್ನಡ ಆವೃತ್ತಿಯನ್ನು ಹೊರತಂದಿದ್ದು, ಈಗ 'ಕೃಷ್ಣಾ ನ್ಯಾಯಾಧಿಕರಣದ ತೀರ್ಪಿನ' ಕನ್ನಡ ಆವೃತ್ತಿಯನ್ನು ಹೊರತರಲು ಮುಂದಾಗಿರುವುದು ಪ್ರಶಂಸನೀಯ ವಿಚಾರವಾಗಿದೆ. ಕನ್ನಡಿಗರಿಗೆ ಭಾರತೀಯ ಸಾಹಿತ್ಯದ ಮತ್ತು ವಿಶ್ವ ಸಾಹಿತ್ಯದ ಮಹತ್ವದ ಕೃತಿಗಳನ್ನು ಪರಿಚಯಿಸಿ ಕೊಡುವ ಕಾರ್ಯಗಳ ಜೊತೆಗೆ ರಾಷ್ಟ್ರೀಯ ಪ್ರಶಸ್ತಿ–ಪುರಸ್ಕಾರಗಳನ್ನು ಗಳಿಸಿರುವ ನಮ್ಮ ಲೇಖಕರ ಪ್ರಾತಿನಿಧಿಕ ಸಂಕಲನಗಳನ್ನು ಹೊರತಂದು, ಅವುಗಳನ್ನು ಬೇರೆ ಭಾಷೆಗಳಲ್ಲಿ ಪ್ರಕಟಿಸುತ್ತಿರುವುದು ತುಂಬ ಮಹತ್ವದ ಕಾರ್ಯವಾಗಿದೆ.

ಈ ರೀತಿಯ ಉತ್ತಮ ಕಾರ್ಯಚಟುವಟಿಕೆಗಳನ್ನು ನಡೆಸುತ್ತಿರುವ ಪ್ರಾಧಿಕಾರವು ಮುಂದಿನ ದಿನಗಳಲ್ಲಿ ರಾಷ್ಟ್ರೀಯ, ಅಂತರರಾಷ್ಟ್ರೀಯ ಸಂಸ್ಥೆಯಾಗಿ ಬೆಳೆಯಲೆಂದು ಹಾರೈಸುತ್ತೇನೆ.

(ಉಮಾಶ್ರೀ)

ಕರ್ನಾಟಕ ಸರ್ಕಾರ

ಬಸವರಾಜು, ಭಾ.ಆ.ಸೇ.
ಸರ್ಕಾರದ ಕಾರ್ಯದರ್ಶಿಗಳು
ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಇಲಾಖೆ

ವಿಧಾನಸೌಧ
ಬೆಂಗಳೂರು – ೫೬೦ ೦೦೧

ಹಾರೈಕೆ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಸ್ಥಾಪಿತವಾಗಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಕುವೆಂಪು ಅವರ ಆಶಯದಂತೆ ಸಾಹಿತ್ಯ, ಸಂಸ್ಕೃತಿ ಮತ್ತು ಜ್ಞಾನ–ವಿಜ್ಞಾನ ಕ್ಷೇತ್ರಗಳಿಗೆ ಮಹತ್ವದ ಕೊಡುಗೆಯಾಗಬಲ್ಲಂಥ ಗ್ರಂಥಗಳನ್ನು ಹೊರತರುತ್ತಿರುವುದು ತುಂಬ ಮಹತ್ವದ ಸಂಗತಿಯೇ ಆಗಿದೆ. ಇತರ ಯಾವ ಭಾಷೆಗಳಲ್ಲೂ ಇನ್ನೂ ಹೊರಬರದೇ ಇರುವ ವಿಲ್ ಡ್ಯೂರಾಂಟ್ ಅವರ 'ನಾಗರಿಕತೆಯ ಕಥೆ', ಜೆ.ಡಿ. ಬರ್ನಾಲ್ ಅವರ 'ಇತಿಹಾಸದಲ್ಲಿ ವಿಜ್ಞಾನ'ದಂಥ ಮಹತ್ವದ ಸಂಪುಟಗಳನ್ನೂ, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರ ಮಹತ್ವದ ರಚನೆಗಳನ್ನು ಒಳಗೊಂಡ ಸಂಚಯಗಳನ್ನೂ ಹೊರತರುತ್ತಿರುವುದೂ, ನಾಡಿನ ಇತರ ಪ್ರತಿಷ್ಠಿತ ಸಂಸ್ಥೆಗಳೊಂದಿಗೆ ಸಂಬಂಧವನ್ನು ಏರ್ಪಡಿಸಿಕೊಂಡು ಮಹತ್ವದ ಕೃತಿಗಳನ್ನು ಬೆಳಕಿಗೆ ತರುತ್ತಿರುವುದೂ ಕರ್ನಾಟಕ ಸರ್ಕಾರಕ್ಕೆ ಮಾತ್ರವಲ್ಲದೆ, ಕನ್ನಡ ಜನತೆಗೆ ಹೆಮ್ಮೆಯನ್ನು ತರುವಂಥ ಸಂಗತಿಗಳಾಗುತ್ತವೆ ಎಂದು ನಂಬಿದ್ದೇವೆ.

ಇದುವರೆಗೆ ಪ್ರಕಟವಾಗಿರುವ ಡಾ. ಬಿ.ಆರ್. ಅಂಬೇಡ್ಕರ್ ಅವರ ಕೃತಿಗಳ ಆಂಶಿಕ ಪರಿಷ್ಕರಣ ಯೋಜನೆಯನ್ನು ಕೈಗೊಂಡು, ಅವುಗಳನ್ನು ಹೊಸ ರೂಪದಲ್ಲಿ ಹೊರತರುತ್ತಿರುವುದು ಹಾಗೂ ಇದುವರೆಗೆ ಪ್ರಕಟವಾಗದಿರುವ ಅಂಬೇಡ್ಕರ್ ಅವರ ಚಿಂತನೆಗಳನ್ನೊಳಗೊಂಡ ಇತರ ಸಂಪುಟಗಳನ್ನು ಹೊರತರುವ ಕಾರ್ಯವನ್ನು ಹಮ್ಮಿಕೊಂಡಿರುವುದು ವಿಶೇಷವಾಗಿ ಸ್ತುತ್ಯರ್ಹವಾದ ಕಾರ್ಯವಾಗಿದೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಪ್ರಕಟಣೆಗಳಿಗೆ ಮಾತ್ರವೇ ತನ್ನನ್ನು ಸೀಮಿತಗೊಳಿಸಿಕೊಳ್ಳದೆ, ಭಾರತೀಯ ಭಾಷೆಗಳ ಮತ್ತು ವಿದೇಶಿ ಭಾಷೆಗಳ ಅನುವಾದ ಶಿಕ್ಷಣಕ್ಕೆ ಮತ್ತು ಸಂಶೋಧನೆಗೆ ಇಂಬುಕೊಡಲಿರುವ ಶೈಕ್ಷಣಿಕ ಕಾರ್ಯಕ್ರಮಗಳನ್ನು, ಸಂಶೋಧನ ಚಟುವಟಿಕೆಗಳನ್ನು ಕೈಗೊಳ್ಳಲು ಮುಂದಾಗುತ್ತಿರುವುದು ಮತ್ತು ವಿಶ್ವವಿದ್ಯಾನಿಲಯಗಳ ಮಾನ್ಯತೆಯನ್ನು ಗಳಿಸಿಕೊಳ್ಳುತ್ತಿರುವುದು ವೈಯಕ್ತಿಕವಾಗಿಯೂ ನನಗೆ ವಿಶೇಷ ಸಂತೋಷವನ್ನುಂಟುಮಾಡುತ್ತಿದೆ.

ಒಟ್ಟಿನಲ್ಲಿ ಸಾಹಿತ್ಯ–ಸಂಸ್ಕೃತಿ–ವಿಜ್ಞಾನ–ತಂತ್ರಜ್ಞಾನಗಳ ಬೆಳವಣಿಗೆಯೊಂದಿಗೆ ಆದರ್ಶ ರೀತಿಯಲ್ಲಿ ಪ್ರಾಧಿಕಾರ ಹೆಜ್ಜೆಹಾಕುತ್ತಾ ಮುನ್ನಡೆಯಲೆಂದೂ, ಹೊಸ–ಹೊಸ ವಿಕ್ರಮಗಳನ್ನು ಸ್ಥಾಪಿಸಲೆಂದೂ ಹಾರೈಸುತ್ತೇನೆ.

16/12/11

(ಬಸವರಾಜು)

ಕರ್ನಾಟಕ ಸರ್ಕಾರ

ಕೆ.ಆರ್. ರಾಮಕೃಷ್ಣ, ಭಾ.ಆ.ಸೇ.
ಆಯುಕ್ತರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು – ೫೬೦ ೦೦೨

ಪ್ರಾಸ್ತಾವಿಕ ನುಡಿ

ಕರ್ನಾಟಕ ಸರ್ಕಾರ 2005ರಲ್ಲಿ ಸ್ಥಾಪಿಸಿದ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿಯನ್ನು ಕುವೆಂಪು ಭಾಷಾ ಭಾರತಿ ಪ್ರಾಧಿಕಾರದಲ್ಲಿ ವಿಲೀನಗೊಳಿಸಿ, ಸಾಹಿತ್ಯಿಕ–ಸಾಂಸ್ಕೃತಿಕ ಚಟುವಟಿಕೆಗಳಿಗೆ ಹೊಸ ಆಯಾಮಗಳನ್ನು ನೀಡಿದೆ. ಭಾರತೀಯ ಮತ್ತು ವಿದೇಶಿಯ ಭಾಷೆಗಳ ನಡುವಣ ಸಂಬಂಧಗಳನ್ನು ಬೆಳೆಸಿಕೊಂಡು ಬರುವುದರ ಹಾಗೂ ಆ ಭಾಷೆಗಳ ಶ್ರೇಷ್ಠ ಕೃತಿಗಳನ್ನು ಕನ್ನಡಕ್ಕೆ ತರುವುದರ ಮೂಲಕ ಕನ್ನಡ ಸಾಹಿತ್ಯವನ್ನು ಸಂವೃದ್ಧಿಗೊಳಿಸುವುದು ಮತ್ತು ಕನ್ನಡ ಸಾಹಿತ್ಯದ ಶ್ರೇಷ್ಠ ಕೃತಿಗಳನ್ನು ಇತರ ಭಾಷೆಗಳಿಗೆ ಕೊಂಡೊಯ್ಯುವುದು ಹಾಗೂ ಮಾನವಿಕ, ವೈಜ್ಞಾನಿಕ ಮತ್ತು ತಾಂತ್ರಿಕ ಕ್ಷೇತ್ರಗಳಲ್ಲಿ ಕನ್ನಡದ ಬಳಕೆಗೆ ಪ್ರೋತ್ಸಾಹ ನೀಡುವಂಥ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು, ಪ್ರಕಟಣೆಗಳನ್ನು ಹೊರತರುವುದು ಈ ಪ್ರಾಧಿಕಾರದ ಮುಖ್ಯ ಧ್ಯೇಯೋದ್ದೇಶವಾಗಿರುತ್ತದೆ. ಇದಕ್ಕೆ ಪೂರಕವಾಗಿ ಮತ್ತು ಪೋಷಕವಾಗಿ ರಾಷ್ಟ್ರೀಯ, ಪ್ರಾದೇಶಿಕ ವಿಚಾರಗೋಷ್ಠಿಗಳನ್ನು ಏರ್ಪಡಿಸುವುದು, ಭಾಷಾಂತರದ ವಿವಿಧ ಮುಖಗಳಿಗೆ ಸಂಬಂಧಿಸಿದಂತೆ ಶಿಕ್ಷಣ ಮತ್ತು ತರಬೇತಿಯ ಕಾರ್ಯಕ್ರಮಗಳನ್ನು ಏರ್ಪಡಿಸುವುದು ಈ ಧ್ಯೇಯಗಳ ಅಂಗವೇ ಆಗಿದೆ. ಇಂತಹ ಕಾರ್ಯಕ್ರಮಗಳನ್ನು ಯೋಜಿಸುತ್ತಿರುವ ಹಾಗೂ ವಿಶ್ವವಿದ್ಯಾಲಯಗಳ ಮಾನ್ಯತೆಯನ್ನು ಪಡೆದುಕೊಂಡು ಈ ಶೈಕ್ಷಣಿಕ ಕಾರ್ಯಕ್ರಮಗಳನ್ನು ಮುಂದುವರಿಸಿಕೊಂಡು ಹೋಗುತ್ತಿರುವ ವಿಚಾರ ನನಗೆ ವೈಯಕ್ತಿಕವಾಗಿಯೂ ತುಂಬ ಸಂತೋಷವನ್ನುಂಟುಮಾಡಿದೆ.

ಈ ಕೆಲವೇ ವರ್ಷಗಳಲ್ಲಿ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ ಮತ್ತು ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಹೊರತಂದಿರುವ ಪ್ರಕಟಣೆಗಳು ತುಂಬ ಮಹತ್ವದವೇ ಆಗಿವೆ. ವಿಲ್ ಡ್ಯೂರಾಂಟ್ ಅವರ 'ನಾಗರಿಕತೆಯ ಕಥೆ', ಜೆ.ಡಿ.ಬರ್ನಾಲ್ ಅವರ 'ಇತಿಹಾಸದಲ್ಲಿ ವಿಜ್ಞಾನ' ಸಂಪುಟಗಳು ಯಾವುದೇ ಭಾಷೆಗೆ ಗೌರವಪ್ರಾಯವಾದ ಕೃತಿಗಳೇ ಆಗುತ್ತವೆ. ಅಂಥ ಸಾಹಸವನ್ನು ಭಾರತೀಯಭಾಷೆಗಳಲ್ಲಿ ಮೊದಲ ಬಾರಿಗೆ ಆಗುಮಾಡುತ್ತಿರುವುದು ವಿಶೇಷವಾಗಿ ಅಭಿನಂದನೀಯವಾದ ಕಾರ್ಯವಾಗಿದೆ. ಭಾರತರತ್ನ ಡಾ.ಬಿ.ಆರ್.ಅಂಬೇಡ್ಕರ್ ಅವರ ಅನುವಾದಿತ ಕೃತಿಗಳ ಪರಿಷ್ಕರಣ ಯೋಜನೆ ಮತ್ತು ಅವರ ಇತರ ಸಂಪುಟಗಳ ಹೊಸ ಅನುವಾದದ ಪ್ರಕಟಣೆ ಯೋಜನೆ, ಕನಕದಾಸರ ಕೃತಿಗಳ ಅನುವಾದ ಯೋಜನೆ, ಪಂಡಿತ್ ದೀನ್ ದಯಾಳ್ ಉಪಾಧ್ಯಾಯ ಅವರ ಸಮಗ್ರ ಕೃತಿಗಳ ಕನ್ನಡದ ಅನುವಾದದ

ಯೋಜನೆ, ಕೃಷ್ಣಾ ಐತೀರ್ಪಿನ ಕನ್ನಡ ಅನುವಾದ ಯೋಜನೆ ಮುಂತಾದವು ಹೊಸ ವಿಕ್ರಮವನ್ನು ಸ್ಥಾಪಿಸಲಿವೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ಭಾರತೀಯ ವಿದ್ಯಾಭವನದಂತಹ ಸಂಸ್ಥೆಗಳೊಂದಿಗೆ ಮತ್ತು ಇತರ ವಿಶ್ವವಿದ್ಯಾಲಯಗಳೊಡನೆ ಜಂಟಿ ಪ್ರಕಟಣ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿರುವುದು, ಇಂಥ ಕಾರ್ಯಕ್ರಮಗಳಲ್ಲಿ ನಾಡಿನ ಖ್ಯಾತ ವಿದ್ವಾಂಸರು ಪಾಲ್ಗೊಳ್ಳುತ್ತಿರುವುದು ಕನ್ನಡಿಗರೆಲ್ಲ ಹೆಮ್ಮೆಪಟ್ಟುಕೊಳ್ಳಬಹುದಾದ ಬೆಳವಣಿಗೆಗಳೇ ಆಗಿವೆ ಎಂದು ನಂಬಿದ್ದೇನೆ. ಮುಂದೆಯೂ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಇಂಥ ವಿಶಿಷ್ಟ ಕಾರ್ಯಕ್ರಮಗಳನ್ನು, ಮಹತ್ವದ ಪ್ರಕಟಣೆಗಳನ್ನು ಹೊರತರುವ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಿಕೊಂಡು ಬರಲಿ, ಕನ್ನಡ ನಾಡಿನ ಮೆಚ್ಚಿನ ಸಾಹಿತ್ಯಿಕ–ಸಾಂಸ್ಕೃತಿಕ ಸಂಸ್ಥೆಯಾಗಿ ಬೆಳೆಯಲಿ ಎಂದು ಹಾರೈಸುತ್ತೇನೆ.



(ಕೆ. ಆರ್. ರಾಮಕೃಷ್ಣ)

ಪೀಠಿಕೆ

ಶ್ರೀ ಕುವೆಂಪು ಅವರು ಕನ್ನಡ ನಾಡಿನ ಹೆಮ್ಮೆಯ ರಾಷ್ಟ್ರಕವಿ. ಕನ್ನಡದ ಇನ್ನೊಬ್ಬ ವರಕವಿಗಳಾದ ಬೇಂದ್ರೆಯವರಿಂದಲೇ ಯುಗದ ಕವಿ, ಜಗದ ಕವಿ ಎಂದು ಕೀರ್ತಿತರಾಗಿದ್ದಂಥವರು. ಕನ್ನಡದ ಹಿರಿಮೆಯನ್ನು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸ್ತರಗಳಲ್ಲಿ ಎತ್ತಿ ಹಿಡಿದ ಮಹಾಚೇತನವೂ ಅವರಾಗಿದ್ದರು. ಸಾಹಿತ್ಯದ ಅನೇಕ ಪ್ರಕಾರಗಳಿಗೆ ಮಹತ್ವಪೂರ್ಣ ಕೊಡುಗೆಗಳನ್ನು ನೀಡಿರುವ ಹಿರಿಮೆಯೂ ಅವರದಾಗಿದೆ. ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯಿಂದ ಹಿಡಿದು ಜ್ಞಾನಪೀಠ ಪ್ರಶಸ್ತಿಯವರೆಗೆ ರಾಷ್ಟ್ರಮಟ್ಟದ ಬಹುತೇಕ ಗೌರವ ಪ್ರಶಸ್ತಿಗಳೆಲ್ಲ ಅವರದಾಗಿವೆ. ರಾಷ್ಟ್ರಮಟ್ಟದ ಈ ಗೌರವ ಪ್ರಶಸ್ತಿಗಳೆಲ್ಲ ಕನ್ನಡದಲ್ಲಿ ಮೊದಲ ಬಾರಿಗೆ ಅವರನ್ನು ಅರಸಿಬಂದುವು. ದೇಶ–ವಿದೇಶಗಳ ವಿಶ್ವವಿದ್ಯಾನಿಲಯಗಳ ಹಾಗೂ ಪ್ರತಿಷ್ಠಿತ ಸಾಹಿತ್ಯಿಕ ಸಂಸ್ಥೆಗಳ ಗೌರವಾದರಗಳಿಗೂ ಅವರು ಪಾತ್ರರಾಗಿದ್ದರು.

ಶ್ರೀ ಕುವೆಂಪು ಅವರ ಶೈಕ್ಷಣಿಕ–ಸಾಹಿತ್ಯಿಕ ಹಿರಿಮೆ ಸಾಧನೆಗಳನ್ನು ಗುರುತಿಸಿ, ಅವರ ಹೆಸರಿನಲ್ಲಿ ಅಧ್ಯಯನ ಸಂಸ್ಥೆಗಳನ್ನು ಮಾತ್ರವಲ್ಲದೆ, ವಿಶ್ವವಿದ್ಯಾನಿಲಯವೊಂದನ್ನೂ ಸ್ಥಾಪಿಸಲಾಗಿದೆ. ಶ್ರೀ ಕುವೆಂಪು ಅವರ ಮಹಾಕಾವ್ಯವಾದ 'ಶ್ರೀ ರಾಮಾಯಣ ದರ್ಶನಂ' ಸೇರಿದಂತೆ ಅವರ ಸಾಹಿತ್ಯದ ಬಹ್ವಂಶ ಇಂಗ್ಲಿಷ್‌ನಂಥ ವಿದೇಶಿ ಭಾಷೆಗೆ ಮಾತ್ರವಲ್ಲದೆ ಹಿಂದಿಯಂಥ ಇತರ ಭಾರತೀಯ ಭಾಷೆಗಳಿಗೂ ಅನುವಾದಗೊಂಡಿದೆ ಎಂಬುದು ಗಮನಾರ್ಹವಾದ ಸಂಗತಿಯಾಗಿದೆ. ಶ್ರೀ ಕುವೆಂಪು ಅವರ ಈ ಹೈಮಾಚಲೋಪಮ ಸಾಧನೆಗೆ ಯೋಗ್ಯವಾದ ರಾಷ್ಟ್ರೀಯ ಮಹತ್ವದ ಸಾಹಿತ್ಯಿಕ–ಸಾಂಸ್ಕೃತಿಕ ಸಂಸ್ಥೆಯೊಂದನ್ನು ಸ್ಥಾಪಿಸಬೇಕೆಂಬುದು ಮತ್ತು ಅದು ಭಾರತೀಯ ಸಾಹಿತ್ಯಿಕ ಸಾಂಸ್ಕೃತಿಕ ಲೋಕದ ಹೆಮ್ಮೆಯ ಪ್ರತೀಕವಾದ ಸಂಸ್ಥೆಯಾಗಬೇಕೆಂಬುದು ಕರ್ನಾಟಕ ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆಯಾಗಿದೆ. ಈ ಯೋಜನೆಯ ಮೂಲ ರೂವಾರಿ ಪ್ರೊ. ದೇ. ಜವರೇಗೌಡ ಅವರು. 'ಕುವೆಂಪು ಭಾಷಾ ಭಾರತಿ'ಯ ಅಂಗವಾಗಿ ಆರಂಭಿಸಲಾಗಿದ್ದ ಅನುವಾದ ಸಾಹಿತ್ಯ ಅಕಾಡೆಮಿಯನ್ನು ಈಗ ವಿಧ್ಯುಕ್ತವಾಗಿ 'ಕುವೆಂಪು ಭಾಷಾ ಭಾರತಿ ಪ್ರಾಧಿಕಾರ'ದಲ್ಲಿ ವಿಲೀನಗೊಳಿಸಲಾಗಿದ್ದು, ಅದರ ಎಲ್ಲ ಕಾರ್ಯಚಟುವಟಿಕೆಗಳೂ ಇನ್ನಷ್ಟು ವ್ಯಾಪ್ತಿ–ವೈವಿಧ್ಯಗಳೊಂದಿಗೆ ಮುಂದುವರಿಯಲಿವೆ. 'ಕುವೆಂಪು ಭಾಷಾ ಭಾರತಿ' ಕುವೆಂಪು ಸಾಹಿತ್ಯದ ಪ್ರಚಾರ–ಪ್ರಸಾರಗಳಿಗೆ ಮಾತ್ರವೇ ಮೀಸಲಾದ ಸಂಸ್ಥೆಯಾಗಿರದೆ, ಕನ್ನಡ ಸಾಹಿತ್ಯದ ಹಿರಿಮೆ–ಗರಿಮೆಗಳನ್ನು ರಾಷ್ಟ್ರೀಯ–ಅಂತರರಾಷ್ಟ್ರೀಯ ಮಟ್ಟದಲ್ಲಿ ಮೆರೆಸುವ, ಭಾರತೀಯ ಸಾಹಿತ್ಯದ ಮತ್ತು ವಿಶ್ವಸಾಹಿತ್ಯದ ಉತ್ಕೃಷ್ಟ ಕೃತಿಗಳಿಂದ ಕನ್ನಡ ಸಾಹಿತ್ಯವನ್ನು ಸಮೃದ್ಧಗೊಳಿಸುವ ಮಹದಾಶಯವನ್ನು ಹೊಂದಿದೆ.

ವಿಲ್ ಡ್ಯೂರಾಂಟ್ ಅವರ **'ನಾಗರಿಕತೆಯ ಕಥೆ'** ಹಾಗೂ ಜೆ.ಡಿ. ಬರ್ನಾಲ್ ಅವರ **'ಇತಿಹಾಸದಲ್ಲಿ ವಿಜ್ಞಾನ'**ದಂಥ ಕೃತಿಗಳ ಕನ್ನಡ ಆವೃತ್ತಿಗಳನ್ನು ಹೊರತರುತ್ತಿರುವುದಲ್ಲದೆ,

ಭಾರತೀಯ ವಿದ್ಯಾಭವನ ಮತ್ತು ಕರ್ನಾಟಕ ಜಾನಪದ ವಿಶ್ವವಿದ್ಯಾನಿಲಯದಂಥ ಸಂಸ್ಥೆಗಳ ಸಹಯೋಗದೊಂದಿಗೆ ಮಹತ್ವದ ಕೃತಿಗಳ ಅನುವಾದದ ಯೋಜನೆಗಳನ್ನೂ ಹಮ್ಮಿಕೊಂಡಿದೆ. ಹೀಗೆ ಸಾಹಿತ್ಯಿಕ, ಸಾಂಸ್ಕೃತಿಕ ವೈಜ್ಞಾನಿಕ ಮತ್ತು ತಾಂತ್ರಿಕ ಕಾರ್ಯ ಚಟುವಟಿಕೆಗಳ ಜೊತೆಗೆ ಅನುವಾದಕ್ಕೆ ಸಂಬಂಧಿಸಿದ ವಿವಿಧ ಶಿಕ್ಷಣ ಕ್ರಮಗಳನ್ನೂ ಏರ್ಪಡಿಸಲಾಗಿದೆ. ಅನುವಾದಿತ ಕೃತಿಗಳಿಗೆ ಮತ್ತು ಅನುವಾದ ಕ್ಷೇತ್ರದಲ್ಲಿ ಮಹತ್ತರ ಸೇವೆಯನ್ನು ಸಲ್ಲಿಸಿರುವ ವ್ಯಕ್ತಿಗಳಿಗೆ ಪುರಸ್ಕಾರ, ಪ್ರಶಸ್ತಿಗಳನ್ನು ನೀಡುವ ಕಾರ್ಯವನ್ನೂ ಮಾಡಲಾಗುತ್ತಿದೆ. ಅನುವಾದ ಕಾರ್ಯಗಳಿಗೆ ಪೂರಕವಾಗುವಂಥ ವಿಚಾರ–ಸಂಕಿರಣಗಳನ್ನೂ, ಕಾರ್ಯಶಿಬಿರಗಳನ್ನೂ ನಡೆಸಿಕೊಂಡು ಬರಲಾಗುತ್ತಿದೆ.

ಕರ್ನಾಟಕ ಸರ್ಕಾರ, ಪ್ರಾಧಿಕಾರಕ್ಕೆ ಹೊಸ ಹೊಸ ಯೋಜನೆಗಳನ್ನೂ ವಹಿಸಿಕೊಡುತ್ತಿದೆ. ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಸಮಗ್ರ ಕೃತಿಗಳ ಅನುವಾದದ ಪರಿಷ್ಕರಣೆ (ಸಂಪುಟ ೧ ರಿಂದ ೧೪) ಮತ್ತು ಉಳಿದ ಕೃತಿಗಳ (ಸಂಪುಟ ೧೫ ರಿಂದ ೨೨) ಕನ್ನಡ ಅನುವಾದದ ಪ್ರಕಟಣೆ, ಕನಕದಾಸರ ಕೃತಿಗಳ ಅನುವಾದ, ಕಾವೇರಿ ಮತ್ತು ಕೃಷ್ಣ ಜಲವಿವಾದದ ಐತೀರ್ಪುಗಳ ಕನ್ನಡ ಅನುವಾದ, ಜ್ಞಾನಪೀಠ ಮತ್ತು ಇತರ ರಾಷ್ಟ್ರೀಯ ಪ್ರಶಸ್ತಿ ಪುರಸ್ಕೃತರ ಆಯ್ದ (ಸಂಚಯ) ಕೃತಿಗಳ ಪ್ರಕಟಣೆ ಮತ್ತು ಅನುವಾದ – ಇವುಗಳನ್ನು ಇಲ್ಲಿ ಮುಖ್ಯವಾಗಿ ಹೆಸರಿಸಬಹುದಾಗಿದೆ.

ಭಾರತೀಯ ವಿದ್ಯಾ ಭವನದ ಮೈಸೂರು ಕೇಂದ್ರ ಡಾ. ಎ. ವಿ. ನರಸಿಂಹ ಮೂರ್ತಿ ಅವರ ದಕ್ಷ ಮಾರ್ಗದರ್ಶನದಲ್ಲಿ ಮಹತ್ವದ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವ ಮೂಲಕ ಕನ್ನಡ ನಾಡಿನ ವಿದ್ವತ್ ಸಮುದಾಯದ ಹಾಗೂ ಸಾಹಿತ್ಯ ಸಂಸ್ಕೃತಿ ಇತಿಹಾಸ ಪ್ರಿಯರ ಮೆಚ್ಚುಗೆಯನ್ನು ಸೂರೆಗೊಂಡಿದೆ. ಕನ್ನಡ ಸಾಹಿತ್ಯ ಲೋಕದ ಹಿರಿಯ ಚೇತನಗಳನ್ನು ಪರಿಚಯಿಸಿಕೊಡುವ ಅದರ ಮಾಲಿಕೆ ಪ್ರಾದೇಶಿಕ ಭಾಷಾ ಸಂಸ್ಕೃತಿ–ಸಾಹಿತ್ಯಗಳ ಬಗೆಗಿನ ಅದರ ಬದ್ಧತೆಗೂ ಸಾಕ್ಷಿಯಾಗಿದೆ. 'ಭವನ್ಸ್ ಬುಕ್ ಯೂನಿವರ್ಸಿಟಿ' ಮಾಲೆಯಲ್ಲಿ ಶ್ರೀಸಾಮಾನ್ಯರಿಗೆ ಮಾತ್ರವಲ್ಲದೆ, ಸಾಹಿತ್ಯ ಸಂಸ್ಕೃತಿ ಇತಿಹಾಸಗಳ ಬಗ್ಗೆ ಆಸಕ್ತರಾಗಿರುವ ಎಲ್ಲರಿಗೂ ಬೋಧಪ್ರದವಾಗಿರುವಂಥ ಕಿರುಹೊತ್ತಿಗೆಗಳನ್ನು ಹೊರತರಲಾಗಿದೆ. ಆಕಾರದಲ್ಲಿ ಕಿರಿದಾದರೂ ಮಹತ್ವದಲ್ಲಿ ಏನೂ ಕಡಿಮೆ ಇಲ್ಲದ ಈ ಪುಸ್ತಕಗಳನ್ನು ಕನ್ನಡದಲ್ಲೂ ಹೊರತರುವ ಯೋಜನೆಯಲ್ಲಿ ಭಾಗಿಯಾಗುವುದು ಕುವೆಂಪು ಭಾಷಾ ಭಾರತಿ ಪ್ರಾಧಿಕಾರಕ್ಕೆ ಹೆಮ್ಮೆಯ ವಿಷಯವಾಗಿದೆ. ಭಾಗೀದಾರಿಕೆಯ ಈ ಸಲಹೆಗೆ ವ್ಯಾವಹಾರಿಕವೂ, ಕಾರ್ಯಾತ್ಮಕವೂ ಆದ ರೂಪವನ್ನು ನೀಡುವಲ್ಲಿ ಪ್ರಧಾನ ಪಾತ್ರ ವಹಿಸಿರುವ ಭಾರತೀಯ ವಿದ್ಯಾ ಭವನದ ಮೈಸೂರು ಕೇಂದ್ರದ ಅಧ್ಯಕ್ಷರಾಗಿರುವ ಡಾ. ಎ. ವಿ. ನರಸಿಂಹಮೂರ್ತಿ ಅವರಿಗೂ, ಕನ್ನಡ ಪ್ರಕಾಶನದ ಕಾರ್ಯಕಾರಿ ಮಂಡಳಿಯ ಅಧ್ಯಕ್ಷರಾಗಿರುವ ಶ್ರೀ ಎನ್. ರಾಮಾನುಜ ಅವರಿಗೂ, ಭಾರತೀಯ ವಿದ್ಯಾ ಭವನದ ಬೆಂಗಳೂರು ಶಾಖೆಯ ನಿರ್ದೇಶಕರಾಗಿರುವ ಶ್ರೀ ಎಚ್.ಎನ್. ಸುರೇಶ್ ಅವರಿಗೂ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪರವಾಗಿ ಕೃತಜ್ಞತೆಗಳನ್ನು ಸಲ್ಲಿಸಬಯಸುತ್ತದೆ.

ಈ ಮಾಲೆಯ ಮೊದಲ ೨೫ ಪುಸ್ತಕಗಳನ್ನು ಕಳೆದ ವರ್ಷ ಬಿಡುಗಡೆ ಮಾಡಲಾಯಿತು. ಈ ವರ್ಷ ಇನ್ನೂ ೨೫ ಪುಸ್ತಕಗಳನ್ನು ಹೊರತರಲು

ಸಾಧ್ಯವಾಗಿರುವುದು ಪ್ರಾಧಿಕಾರಕ್ಕೆ ತುಂಬ ಸಂತೋಷವನ್ನು ತಂದಿದೆ. ಕನ್ನಡದ ಸಹೃದಯರಿಗೆ ಇವು ತುಂಬ ಉಪಯುಕ್ತವಾಗುತ್ತದೆಂದು ನಂಬಿದ್ದೇವೆ. ಅನುವಾದ ಕಾರ್ಯದಲ್ಲಿ ನೆರವಾಗಿರುವ ನಾಡಿನ ಹಿರಿ–ಕಿರಿಯ ವಿದ್ವಾಂಸರಿಗೆ, ಸಂಪಾದಕರಾದ ಡಾ. ಎ. ವಿ. ನರಸಿಂಹಮೂರ್ತಿ ಅವರಿಗೆ, ಕರಡು ಪರಿಶೀಲನೆಯಲ್ಲಿ ಸಹಕರಿಸಿರುವ ಮಿತ್ರರಿಗೆ ನಮ್ಮ ವಂದನೆಗಳು.

ಪ್ರಾಧಿಕಾರದ ಕೆಲಸ–ಕಾರ್ಯಗಳಲ್ಲಿ ಹಾಗೂ ಪ್ರಕಟಣೆಯ ವಿಚಾರದಲ್ಲಿ ಹೃತ್ಪೂರ್ವಕವಾಗಿ ತಮ್ಮನ್ನು ತೊಡಗಿಸಿಕೊಂಡಿರುವ ಪ್ರಾಧಿಕಾರದ ರಿಜಿಸ್ಟ್ರಾರ್ ಪಿ. ನಾರಾಯಣಸ್ವಾಮಿ ಮತ್ತು ಇತರ ಸಿಬ್ಬಂದಿ ವರ್ಗದವರಿಗೂ, ಸುಂದರವಾಗಿ ಮುದ್ರಿಸುವಲ್ಲಿ ಸಹಕರಿಸಿರುವ ಮೆ॥ ಮಯೂರ ಪ್ರಿಂಟ್ ಆಡ್ಸ್‌ನ ಶ್ರೀ ಬಿ. ಎಲ್. ಶ್ರೀನಿವಾಸ ಮತ್ತು ಅವರ ಸಿಬ್ಬಂದಿ ವರ್ಗದವರಿಗೂ ನಮ್ಮ ವಂದನೆಗಳು.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ
ಬೆಂಗಳೂರು – ೫೬

ಪ್ರಧಾನ್ ಗುರುದತ್ತ
ಅಧ್ಯಕ್ಷ

ಅರಿಕೆ

ಭಾರತೀಯ ವಿದ್ಯಾಭವನದ ಸ್ಥಾಪಕರಾದ ಕುಲಪತಿ ಡಾ. ಕೆ. ಎಂ. ಮುನ್ಷಿಯವರು ಜನಸಾಮಾನ್ಯರಲ್ಲಿ ಭಾರತೀಯ ಸಂಸ್ಕೃತಿಯ ವಿವಿಧ ಮುಖಗಳನ್ನು ಪರಿಚಯಿಸುವ ದೃಷ್ಟಿಯಿಂದ ಭವನ್ಸ್ ಬುಕ್ ಯೂನಿವರ್ಸಿಟಿ ಹಾಗೂ ಅದರಲ್ಲೇ ಸೇರಿಕೊಂಡಿರುವಂತೆ ಒಂದು ರೂಪಾಯಿ ಪುಸ್ತಕ ಮಾಲಿಕೆಯನ್ನು ಆರಂಭಿಸಿದರು. ಇವು ಜನಪ್ರಿಯವಾಗಿ ಅನೇಕ ಶ್ರೇಷ್ಠ ಲೇಖಕರ ಕೃತಿಗಳು ಈ ಮಾಲಿಕೆಯಲ್ಲಿ ಪ್ರಕಟಗೊಂಡಿವೆ. ಅನೇಕ ಈ ಪುಸ್ತಕಗಳು ನಾಲ್ಕಾರು ಮುದ್ರಣಗಳನ್ನು ಕಂಡಿವೆ.

ಇಂತಹ ಶ್ರೇಷ್ಠ ಪುಸ್ತಕಗಳು ಕನ್ನಡ ಭಾಷೆಯಲ್ಲಿ ಲಭ್ಯವಿಲ್ಲದುದನ್ನು ಗಮನಿಸಿದ ಭಾರತೀಯ ವಿದ್ಯಾಭವನ, ಇದಕ್ಕಾಗಿ ಒಂದು ಯೋಜನೆಯನ್ನು ಹಾಕಿಕೊಂಡಿದೆ. ಇದರಲ್ಲಿ ಈಗ (ದಿವಂಗತ) ಡಾ. ಮತ್ತೂರು ಕೃಷ್ಣಮೂರ್ತಿಗಳ ಪಾತ್ರ ಹಿರಿದಾದುದು; ಅವರು ಅನೇಕ ಸೂಚನೆ, ಸಲಹೆಗಳನ್ನು ನೀಡಿದ್ದಾರೆ. ಇದರಿಂದಾಗಿ ಶ್ರೇಷ್ಠ ಲೇಖಕರ ಚಿಂತನೆಗಳು ಕನ್ನಡ ಜನಗಳಿಗೆ ದೊರಕುವ ಹಾಗೂ ಭಾರತೀಯ ಸಂಸ್ಕೃತಿಯ ವಿವಿಧ ಮುಖಗಳ ಪರಿಚಯ ಕರ್ನಾಟಕದ ಓದುಗರಿಗೆ ಆಗುವಂತೆಯೂ ಆಯಿತು. ಭಾರತೀಯ ವಿದ್ಯಾಭವನದ ಮುಂಬಯಿ ಪ್ರಧಾನ ಕೇಂದ್ರದ ಎಕ್ಸಿಕ್ಯುಟಿವ್ ಸೆಕ್ರೆಟರಿ ಹಾಗೂ ಡೈರೆಕ್ಟರ್ ಜನರಲ್ ಆಗಿರುವ ಶ್ರೀ ಎಚ್. ಎನ್. ದಸ್ತೂರ್ ಅವರು ಈ ಯೋಜನೆಗೆ ಅನುಮತಿ ನೀಡಿ ಸಹಕರಿಸಿದ್ದಾರೆ. ಅವರಿಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ. ಬೆಂಗಳೂರು ಮತ್ತು ಮೈಸೂರಿನ ಭಾರತೀಯ ವಿದ್ಯಾಭವನಗಳ ಎಲ್ಲ ಪದಾಧಿಕಾರಿಗಳೂ ವಿಶೇಷವಾಗಿ ಶ್ರೀ ಎಚ್.ಎನ್. ಸುರೇಶ್ ಅವರು ಈ ಯೋಜನೆಯಲ್ಲಿ ಆಸಕ್ತಿ ವಹಿಸಿದ್ದಾರೆ. ಕರ್ನಾಟಕದ ಖ್ಯಾತ ಲೇಖಕರು ಈ ಕನ್ನಡ ಕೈಂಕರ್ಯದಲ್ಲಿ ಸಕ್ರಿಯವಾಗಿ ಭಾಗವಹಿಸಿ, ಭಾಷಾಂತರಗಳನ್ನು ಮಾಡಿ ಕೊಟ್ಟಿದ್ದಾರೆ.

ಖ್ಯಾತ ಕನ್ನಡ ವಿದ್ವಾಂಸರೂ, ಕುವೆಂಪು ಕನ್ನಡ ಭಾಷಾ ಭಾರತಿ ಪ್ರಾಧಿಕಾರದ ಅಧ್ಯಕ್ಷರೂ ಆಗಿರುವ ಡಾ. ಪ್ರಧಾನ್ ಗುರುದತ್ತ ಅವರು ಈ ಪುಸ್ತಕಗಳ ಪ್ರಕಟಣೆಯ ಭಾರವನ್ನು ವಹಿಸಿಕೊಂಡು ನಮಗೆ ಕಳೆದ ವರ್ಷ ೨೫ ಪುಸ್ತಕಗಳನ್ನು ಹೊರತಂದಿದ್ದಲ್ಲದೆ, ಈ ವರ್ಷ ಇನ್ನೂ ೨೫ ಪುಸ್ತಕಗಳನ್ನು ಪ್ರಕಟಿಸಿ ನಮ್ಮನ್ನು ಉಪಕರಿಸಿದ್ದಾರೆ. ಇಷ್ಟು ಶೀಘ್ರದಲ್ಲಿ ಈ ಪುಸ್ತಕಗಳು ಪ್ರಕಟವಾಗುತ್ತಿರುವುದಕ್ಕೆ ಅವರ ಆಸಕ್ತಿ ಮತ್ತು ಕಾರ್ಯಶೀಲತೆಯೇ ಮುಖ್ಯ ಕಾರಣ. ಅವರಿಗೆ ಭಾರತೀಯ ವಿದ್ಯಾಭವನದ ಪರವಾಗಿ ಕೃತಜ್ಞತೆಗಳನ್ನು ಅರ್ಪಿಸುತ್ತೇವೆ.

ಇದು ಶ್ರೀ ಅರವಿಂದರ *The Message & Mission of India* ಪುಸ್ತಕದ ಕನ್ನಡ ಅನುವಾದ. 'ಭಾರತದ ಸಂದೇಶ ಮತ್ತು ಗುರಿ' ಎಂಬ ಹೆಸರಿನಲ್ಲಿ ಮನು ಅವರು ಇದನ್ನು ಅನುವಾದಿಸಿದ್ದಾರೆ. ಅವರಿಗೆ ನಮ್ಮ ಕೃತಜ್ಞತೆಗಳು. ಈ ಪುಸ್ತಕವನ್ನು ಕನ್ನಡಿಗರು ಆದರದಿಂದ ಬರಮಾಡಿಕೊಳ್ಳುತ್ತಾರೆಂದು ನಾವು ಆಶಿಸುತ್ತೇವೆ.

ಎನ್. ರಾಮಾನುಜ
ಅಧ್ಯಕ್ಷರು
ವಿದ್ಯಾಭವನ, ಕರ್ನಾಟಕ

ಎ. ವಿ. ನರಸಿಂಹಮೂರ್ತಿ
ಅಧ್ಯಕ್ಷರು, ವಿದ್ಯಾಭವನ, ಮೈಸೂರು
ಪ್ರಧಾನ ಸಂಪಾದಕ

ಕುಲಪತಿಗಳ ಪ್ರಸ್ತಾವನೆ

ಮುಂಬಯಿಯಲ್ಲಿರುವ ಭಾರತೀಯ ಸಂಸ್ಕೃತಿ ಅಧ್ಯಯನ ಸಂಸ್ಥೆ ಅಂದರೆ, ಭಾರತೀಯ ವಿದ್ಯಾಭವನಕ್ಕೆ ಒಂದು ಬುಕ್ ಯೂನಿವರ್ಸಿಟಿಯ ಅವಶ್ಯಕತೆ ಇತ್ತು. ಇದು ಪ್ರಕಟಿಸಿರುವ ಗ್ರಂಥಗಳನ್ನು ಅಧ್ಯಯನ ಮಾಡಿದರೆ, ಉನ್ನತ ಶಿಕ್ಷಣವನ್ನು ಹೊಂದಿದಂತೆ ಆಗಬೇಕೆನ್ನುವುದೇ ಮುಖ್ಯ ಉದ್ದೇಶ. ಭಾರತೀಯ ಸಂಸ್ಕೃತಿಯ ಆಳವಾದ ಬೇರುಗಳನ್ನು ಜನಗಳಿಗೆ ತಿಳಿಸುವ ಉದ್ದೇಶವೇ ಇದರ ಮುಖ್ಯ ಗುರಿ. ಮೊದಲನೆಯ ಹಂತದಲ್ಲಿ ಒಂದು ನೂರು ಪುಸ್ತಕಗಳನ್ನು ಕೈಗೆತ್ತಿಕೊಂಡು ಅದರಲ್ಲಿಯೂ ೫೦ ಪುಸ್ತಕಗಳನ್ನು ತಕ್ಷಣವೇ ಪ್ರಕಟಿಸುವ ತೀರ್ಮಾನ ತೆಗೆದುಕೊಳ್ಳಲಾಯಿತು. ಪ್ರತಿ ಪುಸ್ತಕವೂ ೨೦೦ರಿಂದ ೨೫೦ ಪುಟಗಳಷ್ಟಿದ್ದು, ಇದರ ಬೆಲೆ ಎರಡು ರೂಪಾಯಿಗಳೆಂದು ನಿರ್ಧರಿಸಲಾಯಿತು.

ಈ ಪುಸ್ತಕಗಳನ್ನು ಇಂಗ್ಲಿಷಿನಲ್ಲಿ ಮಾತ್ರವಲ್ಲದೆ, ಇತರ ಭಾರತೀಯ ಭಾಷೆಗಳಾದ ಹಿಂದಿ, ಬಂಗಾಳಿ, ಗುಜರಾತಿ, ಮರಾಠಿ, ತಮಿಳು, ತೆಲುಗು, ಕನ್ನಡ ಮತ್ತು ಮಲಯಾಳಂಗಳಲ್ಲಿಯೂ ಪ್ರಕಟಿಸುವುದೆಂದು ತೀರ್ಮಾನಿಸಲಾಯಿತು.

ಈ ರೀತಿಯ ೯೦೦ ಪುಸ್ತಕಗಳ ಪ್ರಕಟನೆಗೆ ಸಾಕಷ್ಟು ಧನ ಹಾಗೂ ಅಖಿಲ ಭಾರತ ಸಂಸ್ಥೆಯ ಅವಶ್ಯಕತೆ ಇದೆ. ವಿದ್ಯಾಭವನವು ಇದನ್ನು ಸಫಲಗೊಳಿಸುವಲ್ಲಿ ಸಾಕಷ್ಟು ಶ್ರಮ ವಹಿಸುತ್ತಿದೆ.

ಆಧುನಿಕ ಜ್ಞಾನದಡಿಯಲ್ಲಿ ಹಾಗೂ ನಮ್ಮ ಇಂದಿನ ಅವಶ್ಯಕತೆಗನುಗುಣವಾಗಿ ಭಾರತೀಯ ಸಂಸ್ಕೃತಿಯನ್ನು ಸಮಗ್ರವಾಗಿ ತಿಳಿಸುವುದೇ ಭಾರತೀಯ ವಿದ್ಯಾಭವನದ ಮೂಲ ಗುರಿ. ಇದರಿಂದ ನಮ್ಮ ಸಂಸ್ಕೃತಿಯ ನಿಜವಾದ ಕ್ರಿಯಾಶೀಲ ರೂಪ ಹಾಗೂ ಮೌಲ್ಯಗಳನ್ನು ತಿಳಿಸುವುದು ಸಾಧ್ಯವಾಗುತ್ತದೆ.

ನಮ್ಮ ಗುರಿಯನ್ನು ಇನ್ನೂ ವಿಶದವಾಗಿ ತಿಳಿಸಲು ಯತ್ನಿಸುತ್ತೇನೆ. ಪ್ರತಿಯೊಬ್ಬನಿಗೂ ತನ್ನ ಶಕ್ತಿ ಮತ್ತು ಗುಣಗಳಿಗನುಗುಣವಾಗಿ ತನ್ನ ಘನತೆಗೆ ತಕ್ಕಂತೆ ಸಾಮಾಜಿಕ ಸ್ಥಿತಿಗಳನ್ನು ಕಂಡುಕೊಳ್ಳುವುದನ್ನು ನಾವು ಬಯಸುತ್ತೇವೆ; ವೈಯಕ್ತಿಕ ಪ್ರಯತ್ನ ಹಾಗೂ ಸಾಮಾಜಿಕ ಸಂಬಂಧಗಳನ್ನು ನಮ್ಮ ಮೌಲ್ಯದಡಿಯಲ್ಲಿ ನಿರಂತರವಾಗಿ ಸಾಧಿಸುವುದನ್ನು ನಾವು ಆಶಿಸುತ್ತೇವೆ; ಜೀವನ ಕಲೆಯನ್ನು ನಮ್ಮ ಪರಿಮಿತಿಯನ್ನು ದಾಟಿ ಸಾಧಿಸುವುದರ ಮೂಲಕ ಮಾನವನು ದೈವದ ಸಾಧನವಾಗಿ, ಅವನನ್ನು ಎಲ್ಲರಲ್ಲಿಯೂ ಎಲ್ಲವನ್ನೂ ಅವನಲ್ಲಿಯೂ ಕಾಣುವಂತೆ ಮಾಡುವುದೇ ನಮ್ಮ ಗುರಿ.

ಪ್ರಪಂಚ ನಮ್ಮ ಜೊತೆ ವಿಶೇಷವಾಗಿದೆ. ಪುಸ್ತಕಗಳು ನಮಗೆ ಬೋಧಿಸುವಂತೆ, ಇನ್ನಾವುದೂ ನಮಗೆ ಸುಂದರ ಹಾಗೂ ಆಕಾಂಕ್ಷೆಯ ಜೀವನವನ್ನು ತೋರಲಾರರು.

ಆದುದರಿಂದ, ಈ ಮಾಲಿಕೆಯಲ್ಲಿ, ಪ್ರಾಚೀನ ಹಾಗೂ ಆಧುನಿಕ ಸಾಹಿತ್ಯವನ್ನು ಪ್ರತಿಬಿಂಬಿಸುವ ಕೃತಿಗಳನ್ನು, ಎಲ್ಲರಿಗೂ ಸುಲಭವಾಗಿ ದೊರಕುವಂತೆ ಪ್ರಕಟಿಸಲು ಉದ್ದೇಶಿಸಲಾಗಿದೆ. ಪ್ರಪಂಚದ ಇತರ ಸಾಹಿತ್ಯಗಳಲ್ಲಿ ನಾವು ಗೌರವಿಸುವ ಮೌಲ್ಯಗಳ ಈ ಗುಣಗಳು ಕಂಡುಬಂದರೆ ಅವುಗಳನ್ನೂ ಇದರಲ್ಲಿ ಸೇರಿಸಿಕೊಳ್ಳಲಾಗುವುದು.

ಈ ರೀತಿಯ ಸಾಹಿತ್ಯ ವಾಹಿನಿಯು ಬೇರೆ ಬೇರೆ ಭಾಷೆಗಳ ಮೂಲಕ ಹರಿದು ಬಂದರೂ, ಅವುಗಳಲ್ಲಿ ಒಂದೇ ಗುರಿ ಮತ್ತು ಆಕಾಂಕ್ಷೆ ಕಾಣಬರುತ್ತದೆ. ಆದುದರಿಂದ ಇದು ಪೌರ್ವಾತ್ಯ ಅಥವಾ ಪಾಶ್ಚಿಮಾತ್ಯ ಓದುಗರಿಗೆ ಭಾರತದ ಆಂತರ್ಯವನ್ನು ತಿಳಿಯುವ ಹಾಗೂ ಪ್ರಪಂಚದ ಚಿಂತನೆಯನ್ನು ತಿಳಿಸುವ ಸಾಧನವಾಗುತ್ತದೆ ಎಂದು ಭಾವಿಸಲಾಗಿದೆ.

ಇದಕ್ಕನುಗುಣವಾಗಿ ಬುಕ್ ಯೂನಿವರ್ಸಿಟಿಯ ಮೊದಲನೆಯ ಪುಸ್ತಕ, ಅತ್ಯಂತ ಶ್ರೇಷ್ಠ ವಿದ್ವಾಂಸರಾದ ಶ್ರೀ ರಾಜಗೋಪಾಲಾಚಾರಿಯವರ 'ಮಹಾಭಾರತ' ಪ್ರಕಟವಾಗಿರುವುದು ನಮ್ಮ ಸುಯೋಗ; ಎರಡನೆಯ ಪುಸ್ತಕ ಇದರ ಒಂದು ಭಾಗವಾದ, ಖ್ಯಾತ ನ್ಯಾಯವಾದಿಗಳೂ ತತ್ವಶಾಸ್ತ್ರವಿದರೂ ಆದ ಎಚ್. ವಿ. ದವೆಯವರಿಂದ ರಚಿತವಾದ ಭಗವದ್ಗೀತೆ. ಇಲ್ಲಿ ಇಲ್ಲದ್ದು ಇನ್ನೆಲ್ಲಿಯೂ ಇರದು ಎಂದು ಮಹಾಭಾರತವನ್ನು ಕುರಿತು ಹೇಳಲಾಗಿತ್ತು. ಇಪ್ಪತ್ತೈದು ಶತಮಾನಗಳಾದ ನಂತರವೂ ನಾವು ಇದೇ ಮಾತನ್ನು ಪುನರುಚ್ಚರಿಸಬಹುದು. ಯಾರಿಗೆ ಮಹಾಭಾರತವು ಗೊತ್ತಿಲ್ಲವೋ, ಅವರಿಗೆ ಆತ್ಮದ ಆಳ ಮತ್ತು ಎತ್ತರ ತಿಳಿದಿಲ್ಲ; ಅಂತಹವರು ಜೀವನದ ಕಷ್ಟ–ಸುಖಗಳಿಂದ ಹಾಗೂ ವೈಭವದಿಂದ ವಂಚಿತರಾಗಿರುತ್ತಾರೆ.

ಮಹಾಭಾರತವು ಕೇವಲ ಒಂದು ಮಹಾಕಾವ್ಯವಲ್ಲ; ವೀರ ರಮಣಿಯರ ಹಾಗೂ ಪುರುಷರ, ಅದರಲ್ಲಿಯೂ ದೈವಾಂಶ ಸಂಭೂತರಾದ ಕೆಲವರ ಮಹಾಗಾಥೆ, ಜೀವನದ ಗುರಿಯನ್ನು ತೋರಿಸುವ ಪೂರ್ಣ ಸಾಹಿತ್ಯವದು; ಸಾಮಾಜಿಕ ಹಾಗೂ ಮೌಲಿಕ ಸಂಬಂಧಗಳ ತಾತ್ವಿಕ ಚಿಂತನೆ; ಅದೊಂದು ಸರಿಸಾಟಿಯಿಲ್ಲದ ಮಾನವನ ಸಮಸ್ಯೆಗಳ ಕುರಿತಾದ ಚಿಂತನೆ; ಇವೆಲ್ಲವುಗಳಿಗಿಂತ ಮಿಗಿಲಾಗಿ ಅದರ ಮುಖ್ಯ ತಿರುಳು ಗೀತೆ. ಇದೊಂದು ಅತ್ಯಂತ ಉದಾತ್ತವಾದ ಪವಿತ್ರಗ್ರಂಥ: ಇದರ ಹನ್ನೊಂದನೆಯ ಅಧ್ಯಾಯದಲ್ಲಿ ಅದ್ಭುತವಾಗಿ ಭವಿಷ್ಯದ ದರ್ಶನವೇ ಆಗುತ್ತದೆ ಎಂಬುದನ್ನು ಇತ್ತೀಚೆಗೆ ವಿಶ್ವದ ಜನ ತಿಳಿಯಲು ಆರಂಭಿಸಿದ್ದಾರೆ.

ಇಂತಹ ಉತ್ತಮ ಪುಸ್ತಕಗಳಿಂದ ಮಾತ್ರ ನಮ್ಮ ನಿಜವಾದ ಸಂಸ್ಕೃತಿಯ ನೆಲೆ ತಿಳಿಯಬರುತ್ತದೆ ಮತ್ತು ನಮ್ಮ ಆಧುನಿಕ ಜೀವನದ ಸಂಘರ್ಷಗಳಿಗೆ ಒಂದು ದಿನ ಸಾಮರಸ್ಯವನ್ನು ಒದಗಿಸುತ್ತದೆ.

ಭವನದ ಈ ಕಾರ್ಯವನ್ನು ಸಫಲಗೊಳಿಸುವಲ್ಲಿ ಸಹಾಯ ಹಸ್ತ ನೀಡಿರುವ ಎಲ್ಲರನ್ನೂ ನಾನು ಮನಸಾರೆ ವಂದಿಸುತ್ತೇನೆ.

ಕೆ. ಎಂ. ಮುನ್ಷಿ

ಪ್ರಸ್ತಾವನೆ

ಭಾರತ ಮತ್ತು ಭಾರತೀಯ ಸಂಸ್ಕೃತಿಯನ್ನು ಕುರಿತಾದ ಅರಬಿಂದೊ ಅವರ ಇಂತಹ ಒಂದು ಸಂಕಲನದಲ್ಲಿ, ಓದುಗನು ಹೊಸ ಆಯಾಮ ಮತ್ತು ಮೂಲಭೂತ ತತ್ವಗಳನ್ನು ಕಾಣುತ್ತಾನೆ. ಅದು ಶುಷ್ಕವಾದ ಇತಿಹಾಸದ ಆಕಾರಗಳನ್ನು ಆಧರಿಸಿದ ಮೌಲ್ಯಮಾಪನೆಯಲ್ಲ. ಏಕೆಂದರೆ ಪ್ರಗತಿಪರ ಇತಿಹಾಸಕಾರರು ಇವೆಲ್ಲವೂ ಅವರು ಇವರು ಹೇಳಿದ ಮಾತುಗಳು ಮತ್ತು ಊಹಾಪೋಹಗಳ ಮಿಶ್ರಣವೆಂದು ಭಾವಿಸಿದ್ದಾರೆ. ಆದರೆ ಇಂತಹ ಆಕರಗಳ ಮೇಲೆ ಆಧಾರಿತವಾದ ವಿಷಯಗಳಿಗೆ ಹೊರತಾದ ಯೋಗದ ಬೆಳಕಿನಲ್ಲಿ ಈ ವಿಷಯವನ್ನು ಅರಬಿಂದೊ ವಿವರಿಸಿದ್ದಾರೆ. ಭಾರತದ ಭವಿಷ್ಯತ್ತನ್ನು ಕುರಿತಾದ ದರ್ಶನವನ್ನು ನೀಡಿದ ಶ್ರೀರಾಮಕೃಷ್ಣ ಪರಮಹಂಸ ಮತ್ತು ವಿವೇಕಾನಂದರಂತೆಯಾ ಅರಬಿಂದೊ ಅದೇ ರೀತಿಯ ದರ್ಶನವನ್ನು ನೀಡಿದ್ದಾರೆ.

ಭಾರತೀಯ ಸಂಸ್ಕೃತಿಯ ಐಕ್ಯತೆಯನ್ನು ಪ್ರಾಚೀನ ಕಾಲದ ವೇದ, ಉಪನಿಷತ್ತುಗಳು, ಅವುಗಳಿಂದ ಹೊರಹೊಮ್ಮಿದ ಇತರ ವಿಷಯಗಳ ಉಗಮದಿಂದ ಆರಂಭವಾಗಿ, ಅವೆಲ್ಲವೂ ಇದನ್ನು ಸ್ಥಿರೀಕರಣಗೊಳಿಸುತ್ತವೆ. ಇದು ಭಾರತೀಯ ಸಂಸ್ಕೃತಿ ಅಂದರೆ ಅದರ ಆತ್ಮವನ್ನು ಪ್ರಕಟಗೊಳಿಸುವ ಮಾರ್ಗ; ಅದು ಯಾವ ರೀತಿ ತನ್ನ ಉತ್ತಮಿಕೆಯಿಂದ ವಿವಿಧ ಮಜಲುಗಳನ್ನು ತೋರಿಸುತ್ತದೆ; ಇದು ಏಳು ಬೀಳುಗಳ ವಿಕಾಸದಿಂದ ಹೊರಬಂದು ಇಡೀ ವಿಶ್ವವನ್ನು ಕತ್ತಲೆಯಿಂದ ಬೆಳಕಿಗೆ ಹಾಗೂ ಮಸಕಾದ ಐಕ್ಯತೆ, ಸಂತೋಷ ಹಾಗೂ ಪ್ರತಿಭೆಗಳ ಕಡೆಗೆ ಕೊಂಡೊಯ್ಯುವ ಕಾರ್ಯ ಆರಂಭವಾಗಲಿರುವುದು ಸಂತೋಷದ ವಿಷಯವೇ ಸರಿ. ಇದು ಭಾರತದ ಆತ್ಮವು ಎಣಿಸಲಾಗದಷ್ಟು ಶತಮಾನಗಳಿಂದ ಯಾವ ರೀತಿ ಹೊರಹೊಮ್ಮುತ್ತಿದೆ ಎಂಬುದರ ಪ್ರಕಾಶಮಾನವಾದ ವ್ಯಾಖ್ಯಾನವೇ ಆಗಿದೆ.

ಇತಿಹಾಸದ ಅನೇಕ ಸಮಸ್ಯೆಗಳನ್ನು ಈಗಾಗಲೇ ಬಿಡಿಸಲಾಗಿದೆ. ಅದರ ಮೂಲಭೂತ ಸತ್ಯಗಳು ಹಾಗೂ ಅದರ ವಿವಿಧ ಆಯಾಮಗಳು ಹಾಗೂ ಸಾಮಾಜಿಕ ಮತ್ತು ರಾಜಕೀಯ ಸಂಸ್ಥೆಗಳನ್ನು ಈ ಬೆಳಕಿನಲ್ಲಿ ವಿಶ್ಲೇಷಿಸಲಾಗಿದೆ. ಇವೆಲ್ಲವನ್ನೂ ಭಾರತೀಯ ನೆಲೆಗಟ್ಟಿನಲ್ಲಿಯೇ ಮಾಡಲಾಗಿದೆ. ಕಂದಾಚಾರದ ಅನೇಕ ವಿಷಯಗಳ ಜೇಡರ ಬಲೆಯನ್ನು ನಾವು ತೊಡೆದು ಹಾಕಿದ್ದೇವೆ. ಇದರಿಂದಾಗಿ ನಮ್ಮ ಆಶ್ಚರ್ಯದ ಕಣ್ಣುಗಳ ಮುಂದೆ ಇಡೀ ಭಾರತೀಯ ಸಂಸ್ಕೃತಿಯ ಇಡೀ ದರ್ಶನವು ಬರುತ್ತದೆ. "ಪ್ರಪಂಚಕ್ಕೆ ಭಾರತದ ಆಧ್ಯಾತ್ಮದ ಕೊಡುಗೆ ಆಗಲೇ ಆರಂಬವಾಗಿದೆ. ಭಾರತೀಯ ಸಂಸ್ಕೃತಿಯು ಯೂರೋಪ್ ಮತ್ತು ಅಮೆರಿಕಗಳನ್ನು ಹೆಚ್ಚು ಹೆಚ್ಚಾಗಿ ಪ್ರವೇಶಿಸುತ್ತವೆ. ಈ ಆಂದೋಲನವು ಇನ್ನೂ ಹೆಚ್ಚು ಕ್ರಿಯಾಶೀಲವಾಗುತ್ತದೆ; ಈಗಿರುವ ಸಂಕಷ್ಟಗಳನ್ನು ಅದು ಎದುರಿಸಿತ್ತ, ಇನ್ನೂ ಅನೇಕಾನೇಕ ಜನಗಳು ಇದರ ಆಕರ್ಷಣೆಗೆ, ಇದರ ಬೋಧನೆಗೆ ಹಾಗೂ ಆಧ್ಯಾತ್ಮಿಕ ಪದ್ಧತಿಗಳಿಗೆ ಒಳಗಾಗುತ್ತಿದ್ದಾರೆ. ಇದುವರೆಗೂ

ನಮ್ಮ ಜನಾಂಗವು ಮಾಡುತ್ತಿರುವ ಯಾತ್ರೆ ಅನಂತವಾದುದು; ಇನ್ನು ಮುಂದೆ ಇದು ಹೊಸ ರೀತಿಯಲ್ಲಿ ಸಾಗುತ್ತದೆ. ಇದುವರೆಗೂ ಇದ್ದ ಮುಖ್ಯ ಅಡಚಣೆಗು ನಾಶವಾಗಿವೆ ಅಥವಾ ನಾಶವಾಗುವ ಸ್ಥಿತಿಯಲ್ಲಿವೆ. ನಾವು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಇದು ಖಂಡಿತವಾಗಿಯೂ ಸಫಲವಾಗುತ್ತದೆ ಎಂದು ಭಾವಿಸುತ್ತೇವೆ. ಇದರಲ್ಲಿರುವ ಸ್ವಾತಂತ್ರ್ಯ ಹಾಗೂ ಐಕ್ಯತೆಯ ಸಂಕೇತಗಳು ವಿಶ್ವಕ್ಕೆ ಅತಿಜರೂರಾಗಿ ಅವಶ್ಯಕವಾಗಿವೆ. ದೇವರು ನಮ್ಮೊಂದಿಗಿದ್ದಾನೆ ಮತ್ತು ಆ ನಂಬಿಕೆಯಿಂದ ನಾವು ವಿಜಯಶಾಲಿಗಳಾಗುತ್ತೇವೆ. ವಿಶ್ವಕ್ಕೆ ನಮ್ಮ ಅವಶ್ಯಕತೆಯಿದೆ: ನಮ್ಮಲ್ಲಿರುವ ಪ್ರೀತಿ, ಮಾನವ ಸೇವೆ, ನಮ್ಮ ದೇಶ, ನಮ್ಮ ಜನ ಮತ್ತು ಧರ್ಮ ಎಲ್ಲ ಜನಗಳು ಹೃದಯಗಳನ್ನು ಪರಿಶುದ್ಧಗೊಳಿಸಿ, ನಮ್ಮ ಆಂದೋಲನಕ್ಕೆ ನಮಗೆ ಸ್ಫೂರ್ತಿ ನೀಡುತ್ತದೆ ಎಂದು ನಂಬಿದ್ದೇವೆ."*

ರಿಷಭ್ ಚಂದ್

* ಭಾರತೀಯ ಸಂಸ್ಕೃತಿಯನ್ನು ವಿಶದವಾಗಿ ತಿಳಿಯಲು ಕಾತುರ ಹೊಂದಿರುವ ಓದುಗರಿಗೆ ನಾನು ಈ ಕೆಳಕಂಡ ಅರಬಿಂದೊ ರಚಿಸಿರುವ ಪುಸ್ತಕಗಳನ್ನು ಓದಲು ಶಿಫಾರಸು ಮಾಡುತ್ತೇನೆ:– ದಿ ಫೌಂಡೇಷನ್ ಆಫ್ ಇಂಡಿಯನ್ ಕಲ್ಚರ್; ದಿ ಹ್ಯೂಮನ್ ಸೈಕಲ್; ದಿ ರೆನೆಸಾನ್ಸ್ ಆಫ್ ಇಂಡಿಯ ಮತ್ತು ದಿ ಐಡಿಯಲ್ ಆಫ್ ಕರ್ಮಯೋಗ.

ಪರಿವಿಡಿ

Blank

ಭಾರತದ ಸಂದೇಶ ಮತ್ತು ಗುರಿ

೧. ಸಂಸ್ಕೃತಿ ಹಾಗೂ ನಾಗರಿಕತೆ

ಈ ಜಗತ್ತಿನಲ್ಲಿ ಮಾನವ ಜನಾಂಗದ ಗುರಿ ನಿಜವಾದ ಸಂತೋಷವನ್ನು ಪಡೆಯುವುದೇ ಆಗಿದೆ. ನಿಜವಾದ ಸಂತೋಷ ಎಂದರೆ ಆತ್ಮ, ಮನಸ್ಸು ಮತ್ತು ದೇಹಗಳ ಸಹಜ ಸೌಹಾರ್ದವನ್ನು ಉಳಿಸಿಕೊಳ್ಳುವುದು. ಸಂಸ್ಕೃತಿಯ ಮೌಲ್ಯವನ್ನು ನಿರ್ಧರಿಸಬೇಕಾದರೆ ಅದು ಈ ಸೌಹಾರ್ದತೆಗೆ ತೆರೆದುಕೊಂಡ ಸರಿಯಾದ ಕೀಲಿಕೈ ಆಗಿದೆ. ಈ ಕೀಲಿಕೈ ಸೌಹಾರ್ದತೆಯ ಸಾಂಘಿಕ ಉದ್ದೇಶಗಳನ್ನು, ಚಟುವಟಿಕೆಗಳನ್ನು ನೆರವೇರಿಸುವಂತಿರಬೇಕು. ಮತ್ತೆ ನಾಗರಿಕತೆಯನ್ನು ಅದರ ಎಲ್ಲಾ ತತ್ತ್ವಗಳನ್ನು, ಭಾವನೆಗಳನ್ನು, ರೂಪರೇಷೆಗಳನ್ನು, ಕೆಲಸ ಮಾಡುವ ರೀತಿಯನ್ನು ಅದು ಈ ಸೌಹಾರ್ದತೆಗೆ ಎಷ್ಟರಮಟ್ಟಿಗೆ ಸಹಕಾರಿಯಾಗಿರುತ್ತದೆ ಎಂಬುದರ ಮೇಲೆ ನಿರ್ಧರಿಸಬೇಕಾಗುತ್ತದೆ. ಹಾಗೆಯೇ ಲಯಬದ್ಧವಾದ ಜೀವನ ಹಾಗೂ ಅದರ ಉದ್ದೇಶಗಳನ್ನು ಮುಂದುವರೆಸಲು ಬೇಕಾದ ಶಕ್ತಿಯ ಮೇಲೆ ನಿರ್ಧರಿಸಬೇಕಾಗುತ್ತದೆ. ಈ ಉದ್ದೇಶದ ಆಧಾರದ ಮೇಲೆ ನೆಲೆನಿಲ್ಲುವ ನಾಗರಿಕತೆ ಬಹುಪಾಲು ಇಂದು ನಾವು ಯೂರೋಪಿನ ಸಂಸ್ಕೃತಿಯಲ್ಲಿ ಕಾಣುವ ಭೌತಿಕವಾದ ಆಧಾರದ ಮೇಲೆ ಇರುತ್ತದೆ. ಮಾನಸಿಕವಾಗಿ, ಬೌದ್ಧಿಕವಾಗಿ ಗ್ರೀಕೋ–ರೋಮನ್ ಮಾದರಿಯಲ್ಲಿ ಇರುತ್ತದೆ ಅಥವಾ ಆಧ್ಯಾತ್ಮಿಕವಾಗಿ ಭಾರತೀಯ ಮಾದರಿಯಲ್ಲಿ ಇರುತ್ತದೆ. ಭಾರತದ ಕೇಂದ್ರ ಕಲ್ಪನೆ ಅನಂತಕ್ಕೆ ಸಂಬಂಧಿಸಿದ್ದು. ಆತ್ಮ ಎಂಬುದು ಭೌತಿಕ ವಸ್ತುವಿನ ಮಧ್ಯೆ, ಭೌತಿಕ ಸ್ತರದಲ್ಲಿ ಕ್ರಿಯಾತ್ಮಕವಾಗಿ ಸೇರಿಕೊಂಡು, ಭೌತಿಕ ಸ್ತರದಿಂದ ಮೇಲೆದ್ದು, ಪುನರ್ಜನ್ಮ ಪಡೆದು ಮಾನಸಿಕವಾಗಿ ಮೇಲೆದ್ದು, ಪ್ರಜ್ಞೆಯ ಹಂತದಲ್ಲಿ ಧರ್ಮವನ್ನು ಸ್ವೀಕರಿಸುವಂತಿರುತ್ತದೆ. ಈ ಸಾಧನೆ, ಈ ಜಯವು ಪ್ರಜ್ಞೆಯಿಲ್ಲದ ವಸ್ತುವಿನ ಆಧಾರವಾಗಿ ತನ್ನ ಉದ್ದೇಶವನ್ನು ವಿಶಾಲಗೊಳಿಸುವ ಮನಸ್ಸಿನ ಸಾತ್ತ್ವಿಕ ನೆಲೆಯನ್ನು ಮೇಲೆತ್ತುವ ಮನಸ್ಸಿನಿಂದ ಪರವಾದ ಆಧ್ಯಾತ್ಮ ಪ್ರಜ್ಞೆಯನ್ನು ವೈಯಕ್ತಿಕವಾಗಿ ಮೇಲೆತ್ತುವ ಸಾಧನೆಯಾಗಿರುತ್ತದೆ. ಭಾರತದ ಸಾಮಾಜಿಕ ವ್ಯವಸ್ಥೆ ಈ ತತ್ತ್ವದ ಆಧಾರದ ಮೇಲೆ ನಿಂತಿದೆ. ಅದರ ತತ್ತ್ವಜ್ಞಾನ ಅದನ್ನು ಸಮೀಕರಿಸುತ್ತದೆ. ಅದರ ಧರ್ಮ ಆಧ್ಯಾತ್ಮಿಕ ಪ್ರಜ್ಞೆ ಹಾಗೂ ಅದರ ಫಲದ ಅನುಭೂತಿಯಾಗಿರುತ್ತದೆ. ಅದರ ಕಲೆ ಹಾಗೂ ಸಾಹಿತ್ಯ ಇದೇ ಮಾದರಿಯ ಉನ್ನತ ದೃಷ್ಟಿಯಿಂದ ಪ್ರೇರಿತವಾಗುತ್ತದೆ. ಅದರ ಇಡೀ ಧರ್ಮವು, ಜೀವಿಗಳ ನ್ಯಾಯವು ಇದೇ ತತ್ತ್ವದ

ಮೇಲೆ ನಿಂತಿರುತ್ತದೆ. ಪ್ರಗತಿಯನ್ನು ಭಾರತ ಒಪ್ಪಿಕೊಳ್ಳುತ್ತದೆ. ಆದರೆ ಅದು ಆಧ್ಯಾತ್ಮಿಕ ಪ್ರಗತಿಯಾಗಿರಬೇಕು. ಹೊರಾಂಗಣದಲ್ಲಿ ನಡೆಯುವ ಭೌತಿಕ ವಸ್ತುಗಳನ್ನು ಆಧರಿಸಿದ ಮತ್ತಷ್ಟು ಮತ್ತಷ್ಟು ಶ್ರೀಮಂತಿಕೆಯನ್ನು ಬಯಸುವ ಭೌತಿಕ ಪ್ರಗತಿಯನ್ನಲ್ಲ. ಈ ಉನ್ನತ ನೀತಿಯ ಮೇಲೆ ಭಾರತದ ಜೀವನ ಮೌಲ್ಯ ನಿಂತಿದೆ. ಅದು ಆಧ್ಯಾತ್ಮಿಕವಾದದ್ದಾಗಿ, ಅದರ ನಾಗರಿಕತೆಯ ಅನಂತದ ಚಿತ್ರವನ್ನು ಒಡಗೂಡಿದೆ. ಮಾನವೀಯ ದೌರ್ಬಲ್ಯಗಳು ಏನಾದರೂ ಇದ್ದರೆ ಅವುಗಳನ್ನು ಪರಿಗಣಿಸುವ ಶಕ್ತಿಯನ್ನು ಅದು ಹೊಂದಿದ್ದು, ಈ ಮಾನವೀಯ ಜಗತ್ತಿನಲ್ಲಿ ತನ್ನದೇ ಛಾಪನ್ನು ಮೂಡಿಸಬಲ್ಲ ಶಕ್ತಿ. ಹಾಗಾಗಿ ಅದಕ್ಕೆ ಒಂದು ರಾಷ್ಟ್ರವಾಗಿ ಮೂಡಿದೆ.

...ಪ್ರತಿ ರಾಷ್ಟ್ರವೂ ಮಾನವೀಯ ಮೌಲ್ಯಗಳನ್ನು ಆಧರಿಸಿ ತನ್ನ ಆತ್ಮಶಕ್ತಿಯನ್ನು ಹೆಚ್ಚಿಸಿಕೊಳ್ಳಬಲ್ಲದು. ಇಂಡಿಯ ಎಂಬುದು ಭಾರತದ ಶಕ್ತಿ. ಅಗಾಧ ಆಧ್ಯಾತ್ಮ ಶಕ್ತಿಯ ಜೀವಂತ ಶಕ್ತಿ. ಎಲ್ಲದಕ್ಕೂ ಹೊಂದಿಕೊಂಡು ಹೋಗುವುದು ಈ ರಾಷ್ಟ್ರದ ಮೂಲಾಧಾರ ಶಕ್ತಿ. ತನ್ನ ಗುಣದಿಂದಾಗಿ ಅದೊಂದು ಅಮರ ರಾಷ್ಟ್ರವಾಗಿದೆ. ಇದೊಂದೇ ಸಾಕು, ಅದರ ನಿತಾಂತ ಶಕ್ತಿಯ ಗೂಢ ರಹಸ್ಯವನ್ನು ಅರಿಯಲು, ಅದು ಮತ್ತೆ ಮತ್ತೆ ತಲೆಯೆತ್ತಿ ನಿಲ್ಲಬಲ್ಲ ಪುನರುಜ್ಜೀವನಗೊಳ್ಳುವ ಶಕ್ತಿಯನ್ನು ಪ್ರದರ್ಶಿಸಲು.

ಆಧ್ಯಾತ್ಮವು ಮೂಲ ಉದ್ದೇಶ ಹಾಗೂ ಜೀವನಶಕ್ತಿಯ ನಿರ್ಧಾರ

ಆಧ್ಯಾತ್ಮವು ಭಾರತದ್ದೊಂದೇ ಸ್ವತ್ತಲ್ಲ. ಆದರೆ ಅದು ತನ್ನ ಬುದ್ಧಿವಂತಿಕೆಯಲ್ಲಿ ತನ್ನ ಮುಖಕ್ಕೆ ಪರದೆ ಹಾಕಿರಬಹುದು. ಮತ್ತಾವುದೋ ಪರದೆಯ ಹಿಂದೆ ಮುಖ ಮರೆಸಿಕೊಂಡಿರಬಹುದು. ಅದು ಮಾನವ ಪ್ರಕೃತಿಯ ಸಹಜವಾದ ಮುಖ. ಆದರೆ ವ್ಯತ್ಯಾಸ ಇರುವುದು ಇಲ್ಲಿ. ಆಧ್ಯಾತ್ಮವನ್ನು ಒಳ ಮತ್ತು ಹೊರ ಜೀವನದ ಮೂಲ ಉದ್ದೇಶವನ್ನಾಗಿಸಿದ್ದೇವೆಯೆ, ಅಥವಾ ಆಧ್ಯಾತ್ಮವನ್ನು ದಬ್ಬಿಟ್ಟು ಅದನ್ನು ಅಮುಖ್ಯವಾದ ಶಕ್ತಿಯನ್ನಾಗಿಸಿ, ಅದರ ಔನ್ನತ್ಯವನ್ನು ಕಡೆಗಾಣಿಸಿ, ಬುದ್ಧಿಯಿಂದ ಪ್ರಚೋದಿತವಾದ ಭೌತಿಕ ಆಸೆಗೆ ಶರಣಾಗಿದೆಯೇ ಎಂಬುದಾಗಿದೆ. ಮೊದಲು ಹೇಳಿದ ಜೀವನಶೈಲಿಯ ಪ್ರಪಂಚದ ಪ್ರಾಚೀನ ನಾಗರಿಕತೆಗಳಲ್ಲಿ– ಚೀನಾದಿಂದ ಪೆರುವಿನವರೆಗೆ– ಎದ್ದು ಕಾಣುತ್ತಿದ್ದ ತಿಳಿವಳಿಕೆಯುಳ್ಳ ಜೀವನಶೈಲಿಯಾಗಿತ್ತು. ಆದರೆ ಎಲ್ಲಾ ರಾಷ್ಟ್ರಗಳೂ ಈಗ ಇದನ್ನು ಕಳಚಿಹಾಕಿದೆ. ಯೂರೋಪಿನಲ್ಲಿ ಆದಂತೆ ಅದರಿಂದ ದೂರ ಸರಿದಿವೆ. ಈಗ ಏಷಿಯಾಖಂಡದಲ್ಲಿ ಹೊಸ ಆರ್ಥಿಕ ವ್ಯವಸ್ಥೆಯ ಕಾರಣದಿಂದ, ಕೈಗಾರಿಕಾ ಮೌಲ್ಯಗಳಿಂದಾಗಿ, ಬುದ್ಧಿವಂತಿಕೆಯನ್ನು ಅಡ ಇಟ್ಟು ಭೌತಿಕ ವಸ್ತುಗಳ ಹೆಚ್ಚಳಕ್ಕೆ ಕಾರಣವಾಗುವ ಮೌಲ್ಯಗಳಿಂದಾಗಿ ಈ ದಾರಿಯನ್ನು ದೂರಸರಿಸುವ ಲಕ್ಷಣಗಳು ಕಾಣುತ್ತಿವೆ. ಭಾರತವೊಂದೇ ಎಲ್ಲಾ

ಜೈವಿಕ ಏರಿಳಿತಗಳನ್ನು ಎದುರಿಸುತ್ತಾ ಆಧ್ಯಾತ್ಮಿಕ ಶಕ್ತಿಗೆ ಗಟ್ಟಿಯಾಗಿ ಅಂಟಿಕೊಂಡಿದೆ. ಭಾರತವೊಂದೇ ತನ್ನ ದಾರಿಯನ್ನು ಬಿಟ್ಟುಕೊಡುವುದಿಲ್ಲ ಎಂದು ಹಠ ಹಿಡಿದಿದೆ. ಕೆಲವು ವಿಮರ್ಶಕರ ಪ್ರಕಾರ ಈ ಮುಠ್ಠಾಳತನದ ಭಾವದಿಂದ ಟರ್ಕಿ, ಚೀನಾ, ಜಪಾನ್ ಹೊರಬಂದಿದೆ. ಅಂದರೆ ಅವು ಚಾರ್ವಾಕ ತತ್ತ್ವವನ್ನು ಅಳವಡಿಸಿಕೊಂಡಿವೆ. ಭಾರತವೊಂದೇ ವೈಯಕ್ತಿಕವಾಗಿ ಯಾರು ಏನು ಮಾಡಿದರೂ ತಾನು ರಾಷ್ಟ್ರವಾಗಿ ತಾನು ಪೂಜಿಸುವ ದೇವೀ ದೇವತೆಗಳನ್ನು ದೂರತಳ್ಳಿಲ್ಲ. ತರ್ಕ ಎಂಬ ಗಡುಸು ದೇವರ ಎದುರು ತನ್ನ ಮಂಡಿಯನ್ನು ಊರಿಲ್ಲ. ವ್ಯಾಪಾರ, ಆರ್ಥಿಕ ಸ್ಥಿತಿ ಎಂಬ ಹೆಸರಿನಲ್ಲಿ ಹುಟ್ಟಿಕೊಂಡಿರುವ ಪಾಶ್ಚಿಮಾತ್ಯ ಯಶಸ್ವೀ ಕಬ್ಬಿಣದ ದೇವರ ಎದುರು ಮಂಡಿ ಊರಿಲ್ಲ. ಈ ದಿಟ್ಟನಲ್ಲಿ ಅದು ಪ್ರಭಾವಿತವಾಗಿದೆ ಎಂದು ಹೇಳಬಹುದಾದರೂ, ಅದನ್ನು ಜಯಿಸಲಾಗಿಲ್ಲ. ಭಾರತದ ಹೊರ ಆವರಣದ ಮನಸ್ಸಿಗೆ ಇದೆಲ್ಲ ಗೋಚರಿಸಿದೆ. ಪಾಶ್ಚಿಮಾತ್ಯ ತತ್ತ್ವಗಳಾದ ಸ್ವಾತಂತ್ರ್ಯ, ಸಮಾನತೆ, ಪ್ರಜಾಪ್ರಭುತ್ವ ಮತ್ತಿತರ ವಿಚಾರಗಳನ್ನು ಅದು ಚರ್ಚಿಸುವಷ್ಟು ವಿಶಾಲ ಮನಸ್ಸನ್ನು ಹೊಂದಿದೆ. ಅವುಗಳನ್ನು ತನ್ನ ವೇದಾಂತದ ಪರಿಧಿಯಲ್ಲಿ ಆಲೋಚಿಸುವ ಪ್ರಜ್ಞೆಯನ್ನು ಪಡೆದಿದೆ. ಆದರೆ ಪಾಶ್ಚಿಮಾತ್ಯ ರೂಪದಲ್ಲಿ ಕಾಣಿಸುವ ಅವುಗಳ ವಿಷಯದಲ್ಲಿ ಭಾರತವು ಅಂತಹ ಸಲಿಗೆಯನ್ನು ಇನ್ನೂ ಹೊಂದಿಲ್ಲ. ಇಂತಹ ಮಾತುಗಳಿಂದ ಪ್ರಭಾವಿತನಾಗುವ ಭಾರತೀಯ ಇಲ್ಲವೇ ಇಲ್ಲ. ಆದರೆ ಇಂಗ್ಲಿಷ್ ಭಾವನೆಗಳು, ಅದರ ಸಂಸ್ಕೃತಿಯನ್ನು ಹೆಗ್ಗಳಿಕೆಯಿಂದ ಹೇಳುವ ಕಾಲ ಆಗಿ ಹೋಗಿದೆ. ಆದರೆ ಅದಕ್ಕಿಂತ ಹೆಚ್ಚಾಗಿ ಮಧ್ಯ ಯೂರೋಪಿನ ಸಂಸ್ಕೃತಿಯನ್ನು ಅಳವಡಿಸಿಕೊಳ್ಳುವ, ಅದರಲ್ಲೂ ಒರಟು ಚಿಂತನೆಯ ಆಂದೋಲನಾಕಾರಿಯ ಪ್ರವೃತ್ತಿಯ ರಷ್ಯಾವನ್ನು ಮಾದರಿಯನ್ನಾಗಿಟ್ಟುಕೊಂಡು ಬದಲಾಗುವ ಮಾತುಗಳ ಧೃತಿಗೆಡಿಸುವಂತಹವು. ಮತ್ತೊಂದು ಕಡೆ ಪ್ರಾಚೀನ ಹಿಂದೂ ಧರ್ಮದ ಪುನರುತ್ಥಾನ ಕಾಣಿಸುತ್ತಿದೆ. ಅದರಿಂದ ಪ್ರೇರಿತರಾಗಿ ಆಧ್ಯಾತ್ಮಿಕವಾಗಿ ಎಚ್ಚೆತ್ತುಕೊಂಡ ಪ್ರಮುಖ ಚಳುವಳಿಗೆ ಕಾರಣರಾಗುವಂತಹವರು ಗೋಚರಿಸುತ್ತಿದ್ದಾರೆ. ಇದರರ್ಥ ಎರಡರಲ್ಲಿ ಒಂದಾಗಬೇಕು. ಅಥವಾ ಭಾರತವು ತರ್ಕದ ಬೆನ್ನು ಹತ್ತಿ ತನ್ನ ರೂಪ ಕಳೆದುಕೊಳ್ಳುವಷ್ಟು ಯಾಂತ್ರೀಕೃತವಾಗಬೇಕು, ಅಥವಾ ಒಂದು ಹೊಸ ಮನ್ವಂತರದ ಹೊಸ್ತಿಲಿನಲ್ಲಿ ನಿಂತ ಪ್ರಪಂಚಕ್ಕೆ ನಾಯಕನಾಗಿ ನಿಂತು, ತನ್ನ ಉದಾಹರಣೆಯ ಮೂಲಕ ಪಾಶ್ಚಿಮಾತ್ಯ ಸಂಸ್ಕೃತಿಯ ಟೊಳ್ಳು ಸತ್ತ್ವವನ್ನು ತೋರಿಸಿ ಮನುಕುಲಕ್ಕೆ ಆಧ್ಯಾತ್ಮದ ದಾರಿದೀಪವಾಗ ಬಲ್ಲುದು. ಇದು ಪ್ರಸ್ತುತ ಇರುವ ಗಂಭೀರ ವಿಷಯ. ಭಾರತ ಪ್ರತಿನಿಧಿಸುವ ಆಧ್ಯಾತ್ಮಿಕ ಉದ್ದೇಶ ಯೂರೋಪಿನ ಮಾದರಿಯನ್ನು ಮೀರಿಸಿ ಅಲ್ಲಿ ಪಶ್ಚಿಮವನ್ನು ಮೀರಿಸುವಂತಹ ಮಾದರಿ ಸೃಷ್ಟಿಯಾಗುತ್ತದೆಯೋ ಅಥವಾ ಯೂರೋಪಿನ

ತರ್ಕ ಹಾಗೂ ವ್ಯವಹಾರ ತತ್ತ್ವ ಭಾರತೀಯ ಮಾದರಿಯ ಸಂಸ್ಕೃತಿಯನ್ನು ಎಂದೆಂದಿಗೂ ನಾಶಗೊಳಿಸುತ್ತದೆಯೋ ಎಂಬುದನ್ನು ನೋಡಬೇಕು.

...ಆತ್ಮ, ಮನಸ್ಸು ಹಾಗೂ ದೇಹದ ಸಾಮರಸ್ಯ ಭೌತಿಕ ಸ್ತರದಲ್ಲಿರುವುದನ್ನು ತಾರ್ಕಿಕವಾಗಿ ನೋಡಿ ಸ್ವಲ್ಪಮಟ್ಟಿಗೆ ಆಧ್ಯಾತ್ಮಿಕ ಹಿನ್ನೆಲೆಯಲ್ಲಿ ನೋಡಲಾಗುತ್ತದೆಯೇ ಅಥವಾ ಆತ್ಮದ ಪರಮಶಕ್ತಿ ವಿಜಯಿಯಾಗಿ ಬುದ್ಧಿ, ಮನಸ್ಸು ಹಾಗೂ ದೇಹವನ್ನು ತನ್ನ ಹಿಡಿತದಲ್ಲಿ ಇಟ್ಟುಕೊಂಡು ಎಂದೆಂದಿಗೂ ಪರಮಾಧಿಕಾರವನ್ನು ಸ್ಥಾಪಿಸುತ್ತದೆಯೇ ಎಂಬುದನ್ನು ನೋಡಬೇಕು. ಭಾರತವು ತನ್ನ ಸಾಂಸ್ಕೃತಿಕ ಹೊರಹುಗಳನ್ನು ಪುನರ್ನವೀಕರಿಸಿ ಮತ್ತಷ್ಟು ಶಕ್ತಿಯುತವಾಗಿ, ಆತ್ಮೀಯವಾಗಿ ಹಾಗೂ ಸ್ಪಷ್ಟವಾಗಿ ತನ್ನ ಪ್ರಾಚೀನ ಆದರ್ಶಗಳನ್ನು ಎತ್ತಿ ತೋರಿಸುವಂತಾಗಬೇಕು. ಭಾರತದ ಈ ಆಕ್ರಮಣಕಾರಿ ಆಧ್ಯಾತ್ಮಿಕ ಧೋರಣೆ ಕ್ರಾಂತಿಯ ಕಿಚ್ಚನ್ನು ಹಚ್ಚಿ ಜಗತ್ತಿನಾದ್ಯಂತ ತನಗೆ ತಾನೇ ಹರಡುವ ಹಿಂದೊಮ್ಮೆ ಪ್ರಪಂಚದಲ್ಲೆಲ್ಲ ಹರಡಿದ್ದ ವಿಜಯಶಾಲೀ ಗುಣವಾಗಬೇಕು. ಕದನ ಕುತೂಹಲವನ್ನು ಈ ಮಟ್ಟದಲ್ಲಿ ಉಳಿಸಿಕೊಳ್ಳಲೇಬೇಕು. ಏಕೆಂದರೆ ಎಲ್ಲಿಯವರೆಗೆ ಬೇರೆಯದೇ ಆದ ವಿರೋಧೀ ಸಂಸ್ಕೃತಿಯ ಪ್ರಹಾರವಾಗುತ್ತಾ ಇರುತ್ತದೊ, ಅಲ್ಲಿಯವರೆಗೆ ಈ ಆಕ್ರಮಣಕಾರಿ ಧೋರಣೆ ಇರಬೇಕು. ಆದರೆ ಅದೊಂದು ಪೌರ್ವಾತ್ಯರ ಉತ್ತಮ ಆಲೋಚನೆಗಳ ಫಲವಾಗಿರುವುದರಿಂದ ಅದೊಂದು ಉನ್ನತ ಸ್ತರದ ಸಂಗೀತ ಸುಧೆಯೇ ಆಗಿದ್ದು, ಏಕತೆಯ ಅನುಭವವನ್ನು ನೀಡುತ್ತದೆ.

ಭಾರತೀಯ ನಾಗರಿಕತೆಯ ಬಹುಮುಖೀ ಶ್ರೇಷ್ಠತೆ

ಮನುಕುಲದ ಇತಿಹಾಸದಲ್ಲಿ ಕಾಣುವ ಎಲ್ಲಾ ನಾಗರಿಕತೆಗಳನ್ನು ನೋಡಿದಾಗ ಭಾರತೀಯ ನಾಗರಿಕತೆಯು ಸಂಸ್ಕೃತಿಯ ಅತ್ಯುನ್ನತ ಅಭಿವ್ಯಕ್ತಿಯಾಗಿ ಕಂಡು ಬರುತ್ತದೆ. ಅದು ಧರ್ಮದಲ್ಲಿ, ತತ್ತ್ವಶಾಸ್ತ್ರದಲ್ಲಿ, ವಿಜ್ಞಾನದಲ್ಲಿ, ಅನೇಕ ವಿಧವಾದ ವಿಚಾರ ಧಾರೆಗಳಲ್ಲಿ, ಸಾಹಿತ್ಯದಲ್ಲಿ, ಕಲೆಯಲ್ಲಿ, ಕಾವ್ಯದಲ್ಲಿ, ಸಾಮಾಜಿಕ ಸಂಘಟನೆಯಲ್ಲಿ, ರಾಜಕಾರಣದಲ್ಲಿ, ಕೈಚಳಕದಲ್ಲಿ, ವ್ಯಾಪಾರ ವ್ಯವಹಾರದಲ್ಲಿ, ಎಲ್ಲದರಲ್ಲೂ ಅದು ಅತ್ಯುನ್ನತವಾಗಿತ್ತು. ಅಲ್ಲಲ್ಲಿ ಕಪ್ಪು ಚುಕ್ಕೆಗಳು ಇದ್ದುದು, ಅಸ್ಪಷ್ಟವಾಗಿದ್ದುದು, ತಪ್ಪು–ಒಪ್ಪುಗಳಿದ್ದುದು ಕಂಡುಬರುತ್ತದೆ. ಯಾವುದೇ ನಾಗರಿಕತೆಯಲ್ಲಿ ತಾನೇ ತಪ್ಪಿಲ್ಲದೆ ಇರುತ್ತದೆ. ಕಪ್ಪು ಚುಕ್ಕೆ ಇಲ್ಲದೆ ಇರಬಲ್ಲದು, ಆಳವಾದ ಗಾಯ ಇಲ್ಲದೆ, ಗಾಯದ ಗುರುತಿಲ್ಲದೆ ಇರಬಹುದೇ? ಸಾಕಷ್ಟು ಕೊರತೆಗಳು, ಕಣ್ಣು–ಕಟ್ಟಿಬಿಟ್ಟ ಗಲ್ಲಿಗಳು, ಅಸಾಂಸ್ಕೃತಿಕವಾದ ಅಥವಾ ವಿಸಾಂಸ್ಕೃತಿಕವಾದ ವಸ್ತುವಿಷಯಗಳು, ಯಾವುದೇ ನಾಗರಿಕತೆಯಲ್ಲಿ ಕಂಡುಬರುವುದಿಲ್ಲ? ಆದರೆ ನಮ್ಮ ಪ್ರಾಚೀನ ಸಭ್ಯತೆಯ ಇನ್ನಿತರ ಪ್ರಾಚೀನ ಅಥವಾ ಮಧ್ಯಕಾಲೀನ ನಾಗರಿಕತೆಗಳ ಜೊತೆ ಅತಿ ಕ್ಲಿಷ್ಟವಾದ

ಹೋಲಿಕೆಯಲ್ಲಿ ಮಹತ್ತ್ವದ್ದಾಗಿ ಎದ್ದುಕಾಣುತ್ತದೆ. ಹೆಚ್ಚು ದೂರಗಾಮಿಯಾಗಿ, ಸೂಕ್ಷ್ಮವಾಗಿ, ಬಹುಮುಖಿಯಾಗಿ, ಗ್ರೀಕರಿಗಿಂತ ಹೆಚ್ಚು ಆಳವಾಗಿ ವಿಶೇಷವಾಗಿ, ರೋಮನ್ನರಿಗಿಂತ ಹೆಚ್ಚು ಮರ್ಯಾದಸ್ತವಾಗಿ ಮಾನನೀಯವಾಗಿ, ಪ್ರಾಚೀನ ಈಜಿಪ್ಷಿಯನ್ನರಿಗಿಂತ ಹೆಚ್ಚು ವಿಶಾಲವಾಗಿ ಹಾಗೂ ಆಧ್ಯಾತ್ಮಿಕವಾಗಿ, ಯಾವುದೇ ಏಷಿಯನ್ ಸಭ್ಯತೆಗಿಂತ ಹೆಚ್ಚು ವಿಶಾಲವಾಗಿ ಹಾಗೂ ಮೂಲಭೂತವಾಗಿ, ೧೮ನೇ ಶತಮಾನದ ಯೂರೋಪಿಯನ್ನರಿಗಿಂತ ಹೆಚ್ಚು ಬುದ್ಧಿವಂತವಾಗಿ, ಈ ಎಲ್ಲಾ ಸಭ್ಯತೆಗಳಿಗಿಂತ ಹೆಚ್ಚಿನದನ್ನು ಹೊಂದಿರುವಂತೆ ಕಂಡು ಬಂದು ಹೆಚ್ಚು ಶಕ್ತಿಯುತವಾಗಿ, ಆತ್ಮಸಮ್ಮಾನದಿಂದ ಕೂಡಿ, ಹೆಚ್ಚು ಪ್ರಭಾವ ಬೀರುವುದಾಗಿ ಕಂಡುಬಂದಿತ್ತು.

ಇಂದಿನ ಕಾಲದ ಚಿತ್ರವನ್ನು ನೋಡಿದಾಗಲೂ ಸಹ, ನಮ್ಮ ಅಧಃಪತನವಾಗಿರುವುದನ್ನು ಗಮನಿಸಿದಾಗಲೂ ಎಲ್ಲವೂ ನಿರಾಶಾದಾಯಕವಾಗಿಲ್ಲ. ನಮ್ಮ ನಾಗರಿಕತೆಯ ಅನೇಕ ರೂಪಗಳು ತಮ್ಮ ಪ್ರಭಾವವನ್ನು ಕಳೆದುಕೊಂಡು, ಪ್ರಸ್ತುತವಾಗಿಲ್ಲ ಹಾಗೂ ಕೆಲವನ್ನು ಮಹತ್ತರವಾಗಿ ಬದಲಾಯಿಸಬೇಕಾಗಿದೆ, ಕೆಲವಕ್ಕೆ ಹೊಸ ರೂಪ ನೀಡಬೇಕಾಗಿದೆ. ಆದರೆ ಇದೇ ಮಾತನ್ನು ಯೂರೋಪಿಯನ್ ಸಭ್ಯತೆಗಳ ವಿಷಯದಲ್ಲೂ ಹೇಳಬಹುದಾಗಿದೆ. ಯೂರೋಪಿಯನ್ ಸಭ್ಯತೆಯ ವಿಷಯದಲ್ಲಂತೂ ಅದು ಇತ್ತೀಚೆಗೆ ಪಡೆದ ಪ್ರಗತಿಪರ ಧೋರಣೆಯಿಂದ ಕೂಡಿಯೂ ಅದರ ಅನೇಕ ಭಾಗಗಳು ಕೊಳೆತುಹೋಗುತ್ತಿವೆ, ಪ್ರಸ್ತುತವಾಗಿಲ್ಲ. ಭಾರತೀಯ ಸಭ್ಯತೆಯಲ್ಲಿ ಅನೇಕ ಲೋಪದೋಷಗಳು ಇದ್ದರೂ, ಅದು ಇಳಿಮುಖವಾಗಿದೆ ಎಂದಾದರೂ ಸಹ, ಅದರ ಕೇಂದ್ರದಲ್ಲಿರುವ ತತ್ತ್ವಗಳು ಅದರ ಉತ್ತಮ ಆದರ್ಶಗಳು ಮನುಕುಲಕ್ಕೆ ತನ್ನ ಸಂದೇಶವನ್ನು ಆದೇಶವನ್ನು ತೋರುತ್ತಿದೆ, ಕೇವಲ ಭಾರತಕ್ಕೆ ಮಾತ್ರವಲ್ಲ. ನಾವು ಭಾರತದಲ್ಲಿರುವ ಜನರು ಈ ತತ್ತ್ವಗಳು ಬೆಳೆದುಕೊಂಡು ಹೋಗುತ್ತವೆ ಎಂಬುದನ್ನು ತಿಳಿದುಕೊಂಡಿದ್ದೇವೆ. ಹೊಸ ಆವಶ್ಯಕತೆಗಳಿಗೆ ಹೊಸ ಆದರ್ಶಗಳಿಗೆ ಅನುಗುಣವಾಗಿ, ಸಮಸ್ಯೆಗಳಿಗೆ ಸರಿಯಾದ ಉತ್ತರಗಳು ಹೊಳೆಯುತ್ತಿದ್ದಂತೆ, ಪಾಶ್ಚಾತ್ಯರಿಂದ ಎರಡನೆಯ ಹಂತದ ಉತ್ತರಗಳನ್ನು ಪಡೆಯುವುದರ ಬದಲು ನಮ್ಮದೇ ಉತ್ತರಗಳನ್ನು ನಾವು ಕಂಡುಕೊಳ್ಳುತ್ತಿದ್ದೇವೆ. ಭೂತಕಾಲದ ಚಿತ್ರಣಕ್ಕೂ ಭವಿಷ್ಯದ ಅಗತ್ಯಗಳನ್ನು ಗಮನದಲ್ಲಿಟ್ಟುಕೊಂಡು ಹೋಲಿಕೆ ನಡೆಸಿದ್ದೇ ಆದರೆ, ಆದರ್ಶ ಭವಿಷ್ಯದ ಚಿತ್ರ ಮಹತ್ತರವಾಗಿ ಕಾಣಿಸುತ್ತದೆ. ಭವಿಷ್ಯತ್ತನ್ನು ಅವಲೋಕಿಸಿದಾಗ ಮನುಕುಲವು ಮಹತ್ತರವಾದ ಗುರಿಗಳನ್ನು ಸಾಧಿಸಲು ಹೊರಟಿದೆ. ವರ್ತಮಾನವನ್ನು ನೋಡಿದರೆ, ಈ ಭವಿಷ್ಯತ್ತಿನ ಕಲ್ಪನೆಯ ಒಂದು ಒರಟು ಪ್ರಯತ್ನವನ್ನು ಕಾಣುತ್ತೇವೆ. ತತ್‌ಕ್ಷಣದ ಭವಿಷ್ಯತ್ ಕಾಲದಲ್ಲಿ ನಮ್ಮ ಕಣ್ಣಿಗೆ ಕಾಣುವ ರೂಪ ಈ ಕಲ್ಪನೆಯನ್ನು ಸಾಕಾರಗೊಳಿಸಲು ನಡೆಸಿರುವ ಅತಿ ಒರಟಾದ ಪ್ರಯತ್ನವಾಗಿ ಕಾಣುತ್ತದೆ. ಆದರ್ಶ ಸಂಸ್ಕೃತಿಯ ಪರಿಕಲ್ಪನೆ ಹೊಂದಿರುವ ಮನಸ್ಸಿಗೆ

ಆದರ್ಶಗಳ ಪಕ್ವವಾದ ಪರಿಕಲ್ಪನೆ ಇಲ್ಲವಾಗಿದೆ. ಇಂದಿಗೆ ಪ್ರಸ್ತುತವಾಗಿರುವ ಅನೇಕ ಪರಿಚಿತ ವಿಷಯಗಳನ್ನು, ದೈನಂದಿನ ವಿಷಯಗಳನ್ನು ಮೀರಿ ನಿಲ್ಲಬೇಕಾಗುತ್ತದೆ. ಈ ವಿಷಯ ಬಂದಾಗ ಭಾರತೀಯ ನಾಗರಿಕತೆ ನಮ್ಮ ಮುಂದೆ ಇರುವ ಸ್ತರವೇನು? ಅದರ ಪ್ರಧಾನ ಆದರ್ಶಗಳು, ಉಚ್ಚ ಶಕ್ತಿಗಳು ದಾರಿದೀಪವಾಗಿ ನಮ್ಮ ಕೈಹಿಡಿದು ಕರೆದೊಯ್ಯುತ್ತವೆಯೆ, ಅಥವಾ ಭೂಮಿಯ ಮೇಲೆ ಕಳೆಯುವ ಕಾಲಗಳು ತಮ್ಮ ಗರ್ಭದಲ್ಲಿ ತಾವೇ ಕಳೆದುಹೋಗಿ ತಮ್ಮ ಸತ್ತ್ವವನ್ನು ಕಳೆದುಕೊಳ್ಳುತ್ತವೆಯೇ

ಬುದ್ಧಿವಂತಿಕೆಯ ಆಧುನಿಕ ಪ್ರಾಪ್ತಿ ಹಾಗೂ ಆತ್ಮಜ್ಞಾನದ ಅವನತಿ

ಪಾಶ್ಚಾತ್ಯ ಸಭ್ಯತೆಯಲ್ಲಿ ಆಧುನಿಕತೆಯ ಗರ್ವವಿದೆ. ಆದರೆ ತಾನು ಪಡೆದುಕೊಂಡೆ ಎಂದು ಹೇಳುವ ಮಾತಿನ ಹಿಂದೆ ಅನೇಕವನ್ನು ಕಳೆದುಕೊಂಡ ಮಾತೂ ಇದೆ. ಹಿಂದಿನವರು ಪ್ರಯತ್ನಿಸಿದ್ದ ಕೆಲವು ಮಹತ್ತ್ವದ ಅಂಶಗಳನ್ನು ಆಗುಮಾಡಲು ಪ್ರಯತ್ನವು ಇಲ್ಲಿ ನಡೆದಿಲ್ಲ. ತಿಳಿದೂ ತಿಳಿದೂ ಅದು ಅಸಹನೆಯ ಕಾರಣವಾಗಿ ಅನೇಕರನ್ನು ಹೊರಗೆ ಬಿಸಾಕಿದೆ. ಇಂತಹ ಕ್ರಿಯೆಯಿಂದ ಅದಕ್ಕೆ ತುಂಬಲಾರದ ನಷ್ಟವಾಗಿದೆ, ಅದರ ಸಂಸ್ಕೃತಿಕೆ ಅಪೂರ್ಣತೆಯುಂಟಾಗಿದೆ. ಪೆರಿಕ್ಲೆಸ್ ಕಾಲದ ಗ್ರೀಕರನ್ನು ಪ್ರಸ್ತುತ ಕಾಲಕ್ಕೆ ಕಾಲಾಂತರಿಸಿದ್ದೆ ಆದರೆ ಈ ಕಾಲದಲ್ಲಿ ಆಗಿರುವ ಬೃಹತ್ ಪ್ರಮಾಣದ ಬೌದ್ಧಿಕ ಕ್ರಾಂತಿಯನ್ನು ಕಂಡು ಅವರಿಗೆ ಅಚ್ಚರಿಯಾಗಬಹುದು. ಮನಸ್ಸಿನ ವಿಕಾಸವನ್ನು ಕಂಡು, ಕಾರಣದ ಆಧುನಿಕ ಬಹುರೂಪವನ್ನು ಕಂಡು, ಪ್ರಶ್ನಿಸುವ ಅಗಾಧ ಸ್ವಾತಂತ್ರ್ಯವನ್ನು, ಸಾಮಾನ್ಯೀಕರಣದ ನಿತಾಂತವಾದ ಶಕ್ತಿ ಹಾಗೂ ಸೂಕ್ಷ್ಮವಾದ ವಿಷಯಗಳನ್ನು ಕಂಡು ಅವರಿಗೆ ಅಚ್ಚರಿಯಾಗಬಹುದು. ಆತ ಖಂಡಿತ ವಿಜ್ಞಾನ ಸಾಧಿಸಿರುವ ಅಗಾಧವಾದ ಪ್ರಗತಿಯನ್ನು, ವೈಜ್ಞಾನಿಕ ಶೋಧನೆಯನ್ನು, ಉಪಕರಣಗಳ ವೈವಿಧ್ಯ ಶ್ರೀಮಂತಿಕೆ ಹಾಗೂ ಶೋಧಗಳನ್ನು, ಹೊಸ ಹೊಸತನ್ನು ಕಂಡುಹಿಡಿಯುವ ಅದರ ಅದ್ಭುತ ಶಕ್ತಿಯನ್ನು ಕಂಡು ಅಚ್ಚರಿಗೊಳ್ಳಬಹುದು. ಅವರಿಗೆ ಆಧುನಿಕ ಜೀವನವು ಆಶ್ಚರ್ಯವಾಗುವ ಬದಲು, ಅವರು ಈ ಎಲ್ಲದರಿಂದ ಶಿಲೆಯಂತೆ ಕಲ್ಲಾಗಿ ನಿಂತುಬಿಡಬಹುದು. ಅದೇವೇಳೆಗೆ ಈ ಆಧುನಿಕ ಜೀವನದಲ್ಲಿ ಇರುವ ನಾಚಿಕೆಯಿಲ್ಲದ ವ್ಯವಹಾರ ಹಾಗೂ ಕುರೂಪಿತನವು ಆತನಿಗೆ ಅಸಹ್ಯವನ್ನು ಹುಟ್ಟಿಸಬಹುದು. ಅಳತೆ ಮೀರಿದ ವಸ್ತುವಿನ ವ್ಯಾಮೋಹ, ಅದಕ್ಕಾಗಿ ನಡೆಸುವ ಹೋರಾಟ, ಅದರಿಂದಾಗುವ ಅಸಹ್ಯ ಹುಟ್ಟಿಸುವ ವಾತಾವರಣ ವಿಪರೀತವಾಗಿರುತ್ತದೆ. ಇದರಲ್ಲಿ ಆತನು ಬರ್ಬರ ಮಾನವನ ನಿವಾರಿಸಲಾಗದ ಬರ್ಬರತೆಯ ಸಾಕ್ಷ್ಯವನ್ನು ಪಡೆಯುತ್ತಾನೆ. ಆತ ಒಂದು ವೇಳೆ ಅದರ ಬುದ್ಧಿವಂತಿಕೆಯನ್ನು ಗಮನಿಸಿದ್ದನೇ ಆದರೆ, ಆಲೋಚನೆಯ ದಾರಿಯನ್ನು ಹಿಡಿದು ಹೋಗಿದ್ದನೇ ಆದರೆ, ಜೀವನದ

ಕ್ರಿಯೆಗೆ ಒಂದು ವೈಜ್ಞಾನಿಕ ಅರ್ಥವನ್ನು ಕಂಡುಹಿಡಿದಿದ್ದನೇ ಆದರೆ ಆತನಿಗೆ ಮನಸ್ಸನ್ನು ಮತ್ತು ಆತ್ಮವನ್ನು ಒಳಗೊಂಡ ಆಂತರಂಗಿಕ ಜೀವನದ ಆದರ್ಶ ಕಾರಣವೊಂದರ ದೃಷ್ಟಿಗೆ ಗೋಚರವಾಗದೆ ಇರಬಹುದು. ಅವನಿಗೆ ಈ ಸಭ್ಯತೆಯಲ್ಲಿ ಸೌಂದರ್ಯವು ವಿಪರೀತವಾಗಿಯೂ, ಪ್ರಬುದ್ಧವಾದ ಆದರ್ಶ ಮನಸ್ಸುಗಳು ವ್ಯಭಿಚಾರಿಗಳಾಗಿಯೂ, ಕೆಲವು ದಾಸ್ಯತೆಗೆ ಒಳಗಾಗಿ ಇನ್ನು ಕೆಲವು ತಳ್ಳಿ ಹಾಕಲಾದವರಾಗಿ ಕಾಣಿಸಬಹುದು.

ಪುರಾತನರಾದ ಹಿರಿಯ ಆಧ್ಯಾತ್ಮಿಕ ಸಂತರನ್ನು ಗಮನಿಸಿದರೆ, ಇದೆಲ್ಲದರಲ್ಲೂ ಅವರು ಅನುಭವ ಪಡೆದಿರುತ್ತಾರೆ. ಅವರ ಅನುಭವದಲ್ಲಿ ಬುದ್ಧಿಯ ಅಗಾಧಕ್ರಿಯೆ ಹಾಗೂ ಜೀವನದ ಅರಿವು ಶೂನ್ಯದಿಂದ ಮೂಡಿರುವುದು ಕಂಡುಬರುತ್ತದೆ. ಅದರ ಒಂದು ಭ್ರಮೆ ಹಾಗೂ ಅಸತ್ಯ ಗೋಚರಿಸಿರುತ್ತದೆ. ಕಾರಣ ಯಾವುದು ಮನುಷ್ಯನಿಗೆ ಅವನನ್ನು ಮಿತಿಯಿಂದ ಆಚೆಗೆ ಕರೆದೊಯ್ಯಬಲ್ಲದೊ ಅದನ್ನು ಕಡೆಗಣಿಸಲಾಗಿರುತ್ತದೆ. ಇದು ಅವರಿಗೆ ಪ್ರತಿ ಹಂತದಲ್ಲೂ ನೋವನ್ನು ತಂದಿರುತ್ತದೆ. ಭೌತಿಕ ಪ್ರಕೃತಿಯ ನಿಯಮಗಳನ್ನು ಶೋಧಿಸುವುದರಿಂದ ಅವರ ದೃಷ್ಟಿಯಲ್ಲಿ ಈ ನೋವು ಪರಿಹಾರವಾಗಲಾರದು. ಬಹಳ ಕಾಲದವರೆಗೆ ಅದು ಸ್ಪಷ್ಟವಾದ ಸಂಬಂಧದ ವಿಚ್ಛೇದವಾಗಿರುತ್ತದೆ. ಆತ್ಮದ ಸ್ವಾತಂತ್ರ್ಯವನ್ನು ಕಂಡುಹಿಡಿಯುವುದು ಮುಖ್ಯವಾಗಿರುತ್ತದೆ.

ನಮ್ಮ ಅಪೂರ್ಣ ಸಂಸ್ಕೃತಿಯ ಚಿತ್ರಗಳ ಹಿನ್ನೆಲೆಯಲ್ಲಿ ಒಂದು ನಿತಾಂತ ಆತ್ಮವಿದೆ. ಅದಕ್ಕೆ ನಾವು ಅಂಟಿಕೊಳ್ಳಬೇಕು. ಅದೇ ಎಂದೆಂದಿಗೂ ನಮ್ಮದಾಗಿರುತ್ತದೆ. ಕೆಲವು ಮೂಲಾಧಾರವಾದ ಭಾವನಾತ್ಮಕ ಶಕ್ತಿಗಳನ್ನು ನಾವು ಕಿತ್ತುಬಿಸಾಡುವಂತಿಲ್ಲ. ಅದು ನಮ್ಮ ಸ್ವಧರ್ಮವಾಗಿದ್ದು, ಪ್ರವೃತ್ತಿಯನ್ನು ಕಾಯ್ದುಕೊಳ್ಳುವ ಮೂಲ ತತ್ತ್ವಗಳಾಗಿರುತ್ತವೆ. ಆದರೆ ಈ ಭಾವನಾತ್ಮಕ ಶಕ್ತಿಗಳು ಒಂದು ರಾಷ್ಟ್ರಕ್ಕಾಗಲೀ, ಇಡೀ ಮಾನವ ಕುಟುಂಬಕ್ಕಾಗಲೀ, ಕೆಲವೇ ಆಗಿದ್ದು, ತತ್ತ್ವದ ದೃಷ್ಟಿಯಿಂದ ಸರಳವಾಗಿರುತ್ತವೆ. ಅವುಗಳನ್ನು ಎಂತಹ ಸನ್ನಿವೇಶದಲ್ಲೂ ನಾವು ಒರೆಗೆ ಹಚ್ಚಬಹುದು. ಉಳಿದಿದ್ದು ನಮ್ಮ ಜೀವನದ ಒಳಸ್ತರದಾಗಿದ್ದು, ಅವು ಕಾಲಕ್ಕೆ ತಕ್ಕಂತೆ ಬದಲಾವಣೆ ಹೊಂದಬೇಕಾಗುತ್ತದೆ. ಕಾಲ ಅದನ್ನು ಬದಲಾಯಿಸುತ್ತಲೇ ಹೋಗುತ್ತದೆ. ಈ ಅಮರವಾದ ಆತ್ಮವೊಂದು ಕಡೆಯಾದರೆ, ಸ್ವಧರ್ಮ ಮತ್ತೊಂದು ಕಡೆ ಪ್ರಕೃತಿಯ ನಿಯಮವನ್ನು ನಿರ್ದೇಶಿಸುತ್ತಿರುತ್ತದೆ. ಆದರೆ ಈ ಒಂದಾದರೆ ಒಂದರ ನಂತರ ಬರುವ ಸಮೀಕರಣಗಳಿಗೆ ಕಟ್ಟಿ ಹಾಕುವ ಸಂಬಂಧವಿರುತ್ತದೆ ಎಂದು ಹೇಳಲಾಗುವುದಿಲ್ಲ – ಯುಗಧರ್ಮ ಎಂದು ಕರೆಯುವ ಆತ್ಮದ ಲಯ, ರೂಪ, ತಿರುವು, ಪ್ರಕೃತಿಯ ಹವ್ಯಾಸಗಳು ಯುಗಕ್ಕೆ ವಿಶೇಷವಾಗಿರುತ್ತವೆ. ಈ ಓಟ ಹಾಗಾಗಿ ಈ ಎರಡು ಭಿನ್ನವಾದ ತತ್ತ್ವಗಳನ್ನು ಒಪ್ಪಿಕೊಂಡು ನಡೆಯಬೇಕು, ಇಲ್ಲ, ಅದರ

ಜೀವನ ಕೇಂದ್ರವನ್ನು ಕೊಳೆತು ನಾರುವಂತೆ ಮಾಡುವ ಪ್ರಕ್ರಿಯೆಯನ್ನು ಒಪ್ಪಿಕೊಳ್ಳುವಂತಿರಬೇಕು.

ನಮ್ಮ ಭೂತಕಾಲದ ಭವ್ಯತೆಯ ಅರಿವು ನಮ್ಮನ್ನು ವಶೀಕರಣಗೊಳಿಸಿ ನಮ್ಮನ್ನು ನಿಷ್ಕ್ರಿಯರನ್ನಾಗಿ ಮಾಡಬಾರದು. ಅದು ನಾವು ಮತ್ತಷ್ಟು ಮೇಲಕ್ಕೆ ಹತ್ತುವ ಮೆಟ್ಟಿಲುಗಳಿಗೆ ಸ್ಫೂರ್ತಿಯಾಗಬೇಕು. ಆದರೆ ನಮ್ಮ ಆಧುನಿಕತೆಯ ಬಗ್ಗೆ ಈ ಟೀಕೆಯನ್ನು ಮಾಡುವಾಗ ಒಂದು ಪಕ್ಷದ ಪರವಾಗಿ ನಿಂತು ನಾವು ಎಲ್ಲವನ್ನೂ ತಿರಸ್ಕರಿಸುವಂತಹ ಕೆಲಸವನ್ನು ಮಾಡಬಾರದು. ಹೊಗಳಿಕೊಳ್ಳುವುದು, ನಮ್ಮ ದೌರ್ಭಾಗ್ಯವನ್ನು ತೆಗಳುವುದು, ಅಪರಿಚಿತನಿಂದ ಶಾಭಾಷ್‌ಗಿರಿ ಗಿಟ್ಟಿಸಲು ನಮ್ಮ ಮನೆಯನ್ನೇ ಕೀಳಾಗಿ ಕಾಣುವುದು, ಸರಿಯಲ್ಲ. ನಮ್ಮ ನಿಶ್ಶಕ್ತಿ ನಮಗೆ ಅರಿವಿಗೆ ಬರಬೇಕು. ಅದರ ಮೂಲ ನಮಗೆ ಗೊತ್ತಾಗಬೇಕು. ಆದರೆ ನಮ್ಮ ಶಕ್ತಿಯ ಮೂಲವನ್ನು ತಿಳಿದುಕೊಂಡು ಅದನ್ನು ಮತ್ತಷ್ಟು ಸುದೃಢಪಡಿಸಬೇಕು. ನಮ್ಮ ಕ್ರಿಯಶಕ್ತಿ, ನಮ್ಮ ಸ್ಥೈರ್ಯ, ನಮ್ಮನ್ನು ನವೀಕರಿಸುವ ವಿಷಯಗಳಾಗಬೇಕು.

ಭಾರತೀಯ ಆತ್ಮಕ್ಕೊಂದು ಹೊಸ ರೂಪ ನೀಡುವ ಅಗತ್ಯ

ಭಾರತದ ಪ್ರಕೃತಿ, ಅದರ ಉದ್ದೇಶ್ಯ, ಅದು ಮಾಡಬೇಕಾದ ಕೆಲಸ, ಭೂಮಿಯ ಇತಿಹಾಸದಲ್ಲಿ ಅದರ ಪಾಲು, ಆಕೆ ಪ್ರತಿನಿಧಿಸುವ ಪ್ರತ್ಯೇಕ ಶಕ್ತಿ– ಇವು ಅದರ ಇತಿಹಾಸದಲ್ಲಿ ಅಂಕಿತವಾಗಿದೆ. ಅದರ ಈಗಿನ ಕಷ್ಟಗಳು, ತೊಂದರೆಗಳೂ ಇವು ಸಹ ಇತಿಹಾಸದ ಪುಟಗಳಿಂದ ಬಂದಿರುವವೇ. ಭಾರತೀಯ ಆತ್ಮ ಹೀಗಾಗಿ ಈಗ ಹೊಸ ರೂಪವನ್ನು ಪಡೆಯಬೇಕಾಗಿದೆ. ಆದರೆ ಆತ್ಮದ ಹಿಂದಿನ ರೂಪಗಳಿಂದ ನಾವು ನಮ್ಮನ್ನು ಈಗ ಪ್ರತ್ಯೇಕಿಸಿಕೊಳ್ಳಬೇಕಾಗುತ್ತದೆ. ಹೊಸ ಶಕ್ತಿಯುತವಾದ ಆಲೋಚನೆಗಳನ್ನು, ಸಾಂಸ್ಕೃತಿಕ ಮೌಲ್ಯಗಳನ್ನು, ಹೊಸ ಉಪಕರಣಗಳನ್ನು, ಧೀಮಂತ ವ್ಯಕ್ತಿಗಳನ್ನು ನಾವು ಕೊಡಬೇಕಾಗುತ್ತದೆ. ಇವುಗಳನ್ನು ಅರಿತುಕೊಂಡು ಈ ಅಗತ್ಯಗಳನ್ನು ಗುರುತಿಸಿ ಅವುಗಳಿಗೆ ನಿಷ್ಠರಾಗಿದ್ದಾಗ ನಾವು ಮಾನಸಿಕವಾಗಿ ಹಾಗೂ ಭೌತಿಕವಾಗಿ, ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಅಗಾಧ ಬದಲಾವಣೆಗಳನ್ನು ಕಂಡರೂ ತೊಂದರೆಯಾಗುವುದು. ಆದರೆ ಈ ಬದಲಾವಣೆಗಳು ಭಾರತೀಯ ಆತ್ಮನಿಗೆ ಸರಿಹೊಂದಿರುವಂತೆ ಇರಬೇಕೇ ಹೊರತು ಅಮೆರಿ, ಯೂರೋಪು, ಜಪಾನ್ ಅಥವಾ ರಷ್ಯಾ ಮಾದರಿಯಲ್ಲಿರಬಾರದು. ನಾವು ಏನಾಗಿದ್ದೇವೆ ಹಾಗೂ ಏನು ಆಗಬೇಕಾಗಿದೆ ಎಂಬ ಪ್ರಶ್ನೆಯ ಹಿಂದಿನ ಅಗಾಧತೆಯ ಅರಿವು ನಮಗೆ ಇರಬೇಕು. ಈ ಬದಲಾವಣೆ ಮಾಡುವಾಗ ನಾವು ಭಾರತೀಯ ಆತ್ಮಕ್ಕೆ ನೋವಾಗುವಂತೆ ನಡೆದುಕೊಳ್ಳಬಾರದು, ನಿಶ್ಶಕ್ತಿಯಾಗಿಸುವಂತೆ ನಡೆದುಕೊಳ್ಳಬಾರದು. ಆದರೆ ನಾವು ಮಾಡುವ ಪ್ರಗತಿಯನ್ನು ನಾವು ಅಳೆಯುವಂತೆ

ಇರಬೇಕು. ನಮ್ಮಲ್ಲೇ ನಿಜವಾದ ಸ್ಫೂರ್ತಿಯನ್ನು ಸಂಕಲ್ಪವನ್ನು ನಾವು ಕಂಡುಕೊಳ್ಳಬೇಕಾಗುತ್ತದೆ. ಅದನ್ನು ಆಗುಮಾಡುವ ಶಕ್ತಿಯೂ ನಮ್ಮಲ್ಲಿ ಇರಬೇಕಾಗುತ್ತದೆ.

ಸತ್ಯವನ್ನು ಕಂಡುಹಿಡಿಯುವ ಮೂಲವಾದ ಆಲೋಚನೆಯ ಆವಶ್ಯಕತೆ ಇದೆ. ಈ ದಾರಿಯಲ್ಲಿ ಕ್ರಾಂತಿಯನ್ನೇ ಮಾಡಲು ಹೊರಟರೆ, ಶಕ್ತಿಯುತವಾದ ಸಂಸ್ಥೆಯನ್ನು ಕಟ್ಟಲು ಪ್ರಯತ್ನಿಸಿದರೆ, ಆಧ್ಯಾತ್ಮಿಕವಾಗಿ ಹಾಗೂ ಬೌದ್ಧಿಕವಾಗಿ ಉನ್ನತಮಟ್ಟದ ಸಮಾಜವನ್ನು ಸೃಷ್ಟಿಸಬೇಕಾದರೆ, ನಾವು ಈ ನಿಲುವನ್ನು ತಾಳಬೇಕಾಗುತ್ತದೆ. ಅರಿವಿಲ್ಲದ ಪಾಶ್ಚಾತ್ಯ ತರ್ಕವನ್ನು ಎದುರಿಸಲು ಧೈರ್ಯವನ್ನು ಹಾಗೂ ಆ ಧೈರ್ಯವನ್ನು ಉಳಿಸಿಕೊಳ್ಳಲು ಪ್ರಯತ್ನವನ್ನೂ ಮೊದಲು ಮಾಡಬೇಕಾಗುತ್ತದೆ. ಆದರೆ ಅದರ ಜೊತೆಗೆ ಯೂರೋಪಿಯನ್ ದೃಷ್ಟಿಯಿಂದಲ್ಲವಾದರೂ, ನಮ್ಮದೇ ದೃಷ್ಟಿಯಿಂದ, ನಮ್ಮ ಸಂಸ್ಕೃತಿಯಲ್ಲಿಯ ಲೋಪದೋಷಗಳನ್ನು ಒಪ್ಪಿಕೊಳ್ಳುವ ಧೈರ್ಯವೂ ನಮ್ಮಲ್ಲಿ ಇರಬೇಕು. ಇಂತಹ ಲೋಪದೋಷಗಳ ಜೊತೆಗೆ ನಾವು ತಪ್ಪಾಗಿ ತಿಳಿದಿರುವ ನಮ್ಮ ಜೀವನದ ಹಾಗೂ ಸಾಮಾಜಿಕ ಅಂಶಗಳನ್ನು ನಾವು ತಳ್ಳಿಹಾಕಬಾರದು. ಇಂತಹವು ನಮ್ಮ ರಾಷ್ಟ್ರೀಯ ಜೀವನವನ್ನು ಪೊಳ್ಳುಗೆಡಹುತ್ತವೆ, ನಾಗರಿಕತೆಯನ್ನು ಕಡೆಗಾಣಿಸುತ್ತದೆ, ನಮ್ಮ ಸಂಸ್ಕೃತಿಯನ್ನು ಅವಮಾನಿಸುತ್ತದೆ. ಅಸ್ಪೃಶ್ಯರನ್ನು ಕಾಣುವ ರೀತಿಯೇ ಇದಕ್ಕೆ ಉತ್ತಮ ಉದಾಹರಣೆ. ಭೂತಕಾಲದಲ್ಲಿ ನಡೆದ ಒಂದು ತಪ್ಪಿಸಿಕೊಳ್ಳಲಾಗದ ತಪ್ಪು ಎಂದು ಕೆಲವರು ಹೇಳಬಹುದು. ಕೆಲವರು ಅದು ಅಂದಿಗೆ ದೊರಕಬಹುದಾಗಿದ್ದ ಅತ್ಯುತ್ತಮ ಉತ್ತರವಾಗಿತ್ತು ಎಂದು ಹೇಳಬಹುದು. ಇಂಕೆಲವರು ಅದನ್ನೇ ಸರಿ ಎಂದು ಹೇಳಿ ನಮ್ಮ ಸಾಮಾಜಿಕ ವ್ಯವಹಾರದಲ್ಲಿ ಆದಷ್ಟು ಕಾಲ ಅದನ್ನು ಉಳಿಸಿಕೊಳ್ಳುವ ಪ್ರಯತ್ನಮಾಡಬಹುದು. ಅದಕ್ಕೊಂದು ಕಾರಣವಿದ್ದಿರಬಹುದು, ಆದರೆ, ಅದನ್ನು ಮುಂದುವರೆಸುವುದರಲ್ಲಿ ಅರ್ಥವಿಲ್ಲ. ಅದರ ಪರವಾದ ವಾದ ಅತಿ ವಿವಾದಾತ್ಮಕವಾದದ್ದು. ಇದನ್ನು ಒಪ್ಪಿಕೊಳ್ಳುವ ಉತ್ತರ ದೇಶದ ಆರನೇ ಒಂದು ಸಂಖ್ಯೆಯ ಜನಾಂಗವನ್ನು ನಿತಾಂತವಾಗಿ ಅಂಧಕಾರದಲ್ಲಿ ಇಟ್ಟಂತೆ, ಕೊಳಚೆಯಲ್ಲಿಟ್ಟಂತೆ, ಬಾಹ್ಯ ಹಾಗೂ ಅಂತರಂಗದ ಕೊಳಕಿನಲ್ಲಿ ಮುಳುಗೇಲುವಂತೆ ಮಾಡುವುದು ಹಾಗೂ ಮೇಲಕ್ಕೆತ್ತುವುದರ ಬದಲು ಪ್ರಾಣಿ ಸದೃಶವಾದ ಜೀವನವನ್ನು ನಡೆಸುವಂತೆ ಮಾಡುವುದೂ ಆಗಿದೆ. ಅದು ಉತ್ತರವೇ ಅಲ್ಲ. ಅದಕ್ಕೆ ಬದಲಾಗಿ ಅದು ನಮ್ಮ ನಿಶ್ಶಕ್ತಿಯನ್ನು ಒಪ್ಪಿಕೊಂಡು ನಮ್ಮ ಸಾಮಾಜಿಕ ಜೀವನಕ್ಕೆ ಪದೇ ಪದೇ ಮಾಡುವ ಗಾಯವಾಗಿ, ಅದರ ಸಾಂಘಿಕ, ಆಧ್ಯಾತ್ಮಿಕ, ಬೌದ್ಧಿಕ, ನೈತಿಕ, ಭೌತಿಕ ಒಳಿತಿಗೆ ಏಟು ಕೊಡುವುದೂ ಆಗಿದೆ. ಅಂತಹ ಸಾಮಾಜಿಕ ವ್ಯವಸ್ಥೆ ಒಂದು ನ್ಯಾಯವಾಗದೆ ನಮ್ಮ ಜೊತೆಗಾರರನ್ನು ನಿತಾಂತವಾಗಿ ಅಂಧಕೂಪಕ್ಕೆ ಕೆಡುಹುವ ವ್ಯವಸ್ಥೆಯಾಗುತ್ತದೆ. ಕರ್ಮಸಿದ್ಧಾಂತದ ಸೂಕ್ಷ್ಮ ಕ್ರಿಯೆಯನ್ನು ಮರೆಮಾಡಿ

ಬಹಳ ಕಾಲದವರೆಗೆ ಇಂತಹ ದುಷ್ಟ ಪರಿಣಾಮಗಳನ್ನು ಉಳಿಸಿಕೊಳ್ಳಬಹುದು. ಆದರೆ ಒಮ್ಮೆ ಸತ್ಯ ಎಂಬುದು ಕಪ್ಪುಚುಕ್ಕೆಗಳನ್ನು ತೆರೆದು ತೋರಿಸಿದಾಗ, ಅದನ್ನು ಉಳಿಸಿಕೊಳ್ಳುವುದು ನಮ್ಮ ಸರ್ವನಾಶಕ್ಕೆ ಹಾದಿ.

ಮತ್ತೆ ನಾವು ನಮ್ಮ ಸಾಂಸ್ಕೃತಿಕ ಭಾವನೆಗಳನ್ನು ಸಾಮಾಜಿಕ ರೂಪಗಳನ್ನು ನೋಡಬೇಕು. ನಾವು ಎಲ್ಲಿ ನಮ್ಮ ಪ್ರಾಚೀನ ಮೌಲ್ಯಗಳನ್ನು ಕಳೆದುಕೊಂಡಿದ್ದೇವೆ, ಎಲ್ಲಿ ನೈಜ ಸತ್ತ್ವವನ್ನು ಕಳೆದುಕೊಂಡಿದ್ದೇವೆ ಎಂಬುದನ್ನು ಅರಿಯಬೇಕು. ಅನೇಕವು ಈಗ್ಗೆ ಕೇವಲ ಕಥಾನಕಗಳಾಗಿ ಉಳಿದುಹೋಗಿವೆ ಹಾಗೂ ಜೀವನದ ಜೊತೆ ಸಂಬಂಧವನ್ನೇ ಅವು ಕಳೆದುಕೊಂಡಿವೆ. ಇನ್ನು ಕೆಲವು ಒಳ್ಳೆಯವೇ ಆಗಿದ್ದರೂ, ಅವುಗಳಿದ್ದ ಕಾಲದಲ್ಲಿ ಒಳ್ಳೆಯದನ್ನು ಮಾಡಿದ್ದರೂ ನಮ್ಮ ಇಂದಿನ ಪ್ರಗತಿಗೆ ಸೂಕ್ತವಾಗಿಲ್ಲ. ಇವುಗಳೆಲ್ಲವನ್ನು ನಿವಾರಿಸಿ ನಾವು ನಿಜವಾದ ತತ್ತ್ವಗಳನ್ನು ನಮ್ಮ ಪ್ರಗತಿಗೆ ಅನುಕೂಲವಾದ ತತ್ತ್ವಗಳನ್ನು ನಾವು ಕಂಡುಹಿಡಿಯಬೇಕು. ಅವಕ್ಕೆ ಕೊಡುವ ಹೊಸ ರೂಪವು ಪ್ರಾಚೀನ ರೂಪದೊಂದಿಗೆ ಸೇರಿರಬೇಕೆಂದೇನೂ ಇಲ್ಲ. ಇಂದಿನ ಸೀಮಿತ ಜಂಗಮ ತತ್ತ್ವಗಳನ್ನು ನಾವು ಕಂಡುಹಿಡಿದಾಗ ಅವು ಹೊಸ ಪ್ರಾಚೀನ ಮೌಲ್ಯಗಳ ಮೇಲೆ ಆಧರಿಸಿರಬೇಕೆಂದೇನೂ ಇಲ್ಲ. ಪ್ರಾಚೀನ ಮತ್ತು ಇಂದಿನ ಇಂತಹ ಮೌಲ್ಯಗಳ ಮೇಲೆ ಆತ್ಮಜ್ಯೋತಿಯನ್ನು ನಾವು ಉಜ್ವಲಗೊಳಿಸಬೇಕು. ಆ ಜ್ಯೋತಿಯ ಬೆಳಕಿನಲ್ಲಿ ಅವುಗಳನ್ನು ಎಷ್ಟು ವಿಶಾಲವಾಗಿಸಬೇಕು, ಎಷ್ಟರಮಟ್ಟಿಗೆ ಮತ್ತೆಲ್ಲದರ ಜೊತೆ ಸಾಮರಸ್ಯ ಹೊಂದುವಂತೆ ಮಾಡಬೇಕು ಎಂಬುದರ ಅರಿವಾಗುತ್ತದೆ. ಇವೆಲ್ಲವೂ ಭಾರತದ ಆತ್ಮದೊಳಗೆ ಸೇರಿಕೊಳ್ಳುವಂತಹ ತತ್ತ್ವಗಳೇ ಆಗಿರಬೇಕು. ಆದರೆ ಅದು ಪ್ರಕಾಶಮಾನವಾದ ಭವಿಷ್ಯವನ್ನು ಗಮನದಲ್ಲಿಟ್ಟುಕೊಂಡು ಮೂಡಿಬಂದ ತತ್ತ್ವಗಳಾಗಿರಬೇಕು. ನಮ್ಮಲ್ಲೇ ನಂಬಿಕೆ ವಿಶ್ವಾಸ, ನಮ್ಮ ಸಂಸ್ಕೃತಿಯ ವಿಷಯದಲ್ಲಿ ನಿಷ್ಠೆ – ಇವು ನಮ್ಮಲ್ಲಿ ಮೂಲದಲ್ಲಿ ಇರಬೇಕಾದ ನಮ್ಮ ಜೀವನವನ್ನು ಚೇತನಾತ್ಮಕವಾಗಿ ನಡೆಸಿಕೊಂಡು ಹೋಗಬೇಕಾದರೆ ಇರಬೇಕಾದ ತತ್ತ್ವಗಳು. ಮತ್ತೂ ಉನ್ನತ ಸಾಧ್ಯತೆಗಳನ್ನುಇಂತಹ ಸಂದರ್ಭದಲ್ಲಿ ಕಾಣುವುದಕ್ಕೆ ಸಿದ್ಧವಾಗಿರಬೇಕು. ಭೂತಕಾಲವನ್ನು ಚೇತನಾತ್ಮಕ ಶಕ್ತಿಯಾಗಿ ನಾವು ಭಾವಿಸದಿದ್ದರೆ ನಮ್ಮ ಇಂದಿನ ಆರೋಗ್ಯಕ್ಕೆ, ಗೆಲುವಿನ ಜೀವನಕ್ಕೆ ಧಕ್ಕೆ ಉಂಟಾಗುತ್ತದೆ...

ವಿಕಾಸಗೊಳ್ಳದೆ ಬದುಕುವುದೇ ಈಗ ಕಷ್ಟವಾಗಿದೆ. ನಾವು ಬದುಕಬೇಕಾದರೆ ನಾವು ಮಧ್ಯದಲ್ಲಿ ತಡೆಹಿಡಿಯಲಾಗಿರುವ ಭಾರತದ ಪ್ರಗತಿಯನ್ನು ಮುಂದುವರೆಸಬೇಕು. ನಾವು ಧೈರ್ಯವಾಗಿ ಮುಂದುವರೆದು ವೈಯಕ್ತಿಕವಾಗಿ ಹಾಗೂ ಸಾಮಾಜಿಕವಾಗಿ, ಆಧ್ಯಾತ್ಮಿಕ ಹಾಗೂ ಭೌತಿಕ ಜೀವನದಲ್ಲಿ, ತತ್ತ್ವಶಾಸ್ತ್ರದಲ್ಲಿ ಹಾಗೂ ಧರ್ಮದಲ್ಲಿ, ಕಲೆಯಲ್ಲಿ ಹಾಗೂ ಸಾಹಿತ್ಯದಲ್ಲಿ, ಆಲೋಚನೆಯಲ್ಲಿ,

ರಾಜಕೀಯವಾಗಿ, ಆರ್ಥಿಕವಾಗಿ, ಸಾಮಾಜಿಕ ಸಂಬಂಧಗಳಲ್ಲಿ ಭಾರತದ ಅತ್ಯುತ್ತಮ ಶಕ್ತಿಯ, ಜ್ಞಾನದ ಆವಾಹನೆ ಮಾಡಬೇಕು. ನಾವು ಹಾಗೆ ಮಾಡಿದರೆ ನಮಗೆ ತಾನಾಗೇ ಪಾಶ್ಚಿಮಾತ್ಯ ತತ್ತ್ವಗಳು ನೀಡುವ ಅತ್ಯುಚ್ಚಮಟ್ಟದ ಪ್ರಗತಿಯ ರೂಪ ದೊರೆಯುತ್ತವೆ, ನಮ್ಮ ಪೌರ್ವಾತ್ಯ ತತ್ತ್ವದಲ್ಲಿ ಅವೆಲ್ಲ ಸಮಾವೇಶವಾಗಿವೆ ಎಂಬುದು ಗೊತ್ತಾಗುತ್ತದೆ. ಅಷ್ಟೇ ಅಲ್ಲದೆ, ಪೌರ್ವಾತ್ಯ ಆಲೋಚನೆಯ ಹಿಂದೆ ಮಹತ್ತರ ಸತ್ಯ ಹಾಗೂ ಆತ್ಮಜ್ಞಾನ ಅಡಗಿರುವುದು ಕಂಡು ಬರುತ್ತದೆ. ನಾವು ಕೇವಲ ಅದೇ ದಾರಿಯಲ್ಲಿ ಅದನ್ನು ಅರ್ಥ ಮಾಡಿಕೊಂಡು ಹೋಗಬೇಕ, ಅಷ್ಟೇ. ಆವಶ್ಯಕವಾದ ಸಾಮರಸ್ಯದ ರಹಸ್ಯ ಅಲ್ಲಿ ಇದೆಯೇ ಹೊರತು ಬೇರೆಲ್ಲೂ ಇಲ್ಲ.

ನಮ್ಮ ಭವ್ಯ ಭೂತಕಾಲದ ಅವಶ್ಯಕ ಅರ್ಥ ಹಾಗು ಭವಿಷ್ಯತ್ತಿನ ನಡುವಿನ ಅಗತ್ಯ.

ಭಾರತೀಯ ಸಂಸ್ಕೃತಿ ಅಂತರಾಳದ ಆಧ್ಯಾತ್ಮಿಕ ಹಿನ್ನೆಲೆ

...ಜನರ ಜೀವನದ ಮೂರು ವಿಷಯಗಳು ಪ್ರಜ್ಞಾತ್ಮಕವಾಗಿ ಹೊರಬರುವುದನ್ನು ಆ ಜನರ ಸಂಸ್ಕೃತಿ ಎಂದು ನಾವು ಹೇಳಬಹುದು. ಅದರಲ್ಲಿ ಒಂದು ಆಲೋಚನೆ, ಆದರ್ಶದ ಮಾತುಗಳು, ಊರ್ಧ್ವಗಮನದ ಯೋಚನೆಗಳು, ಆತ್ಮದ ಆಶಯಗಳು ಆಗಿವೆ. ಮತ್ತೊಂದು, ಅದನ್ನು ಕ್ರಿಯಾತ್ಮಕವಾಗಿ ಮತ್ತು ಸೃಜನಾತ್ಮಕವಾಗಿ ಹೇಳುವ ರೀತಿ, ಸೌಂದರ್ಯಪ್ರಜ್ಞೆ, ಬುದ್ಧಿವಂತಿಕೆ ಹಾಗೂ ಕಲ್ಪನೆಯಾಗಿವೆ. ಮಗದೊಂದು, ಅದರ ಪ್ರಾಯೋಗಿಕ, ಹಂತವಾಗಿ ಹೊರಮುಖವಾಗಿರುತ್ತವೆ. ಒಂದು ಜನಾಂಗದ ತತ್ತ್ವಶಾಸ್ತ್ರವು ಆ ಜನಾಂಗದ ಮನಸ್ಸಿನ ಶುದ್ಧ, ವಿಶಾಲವಾದ ಹಾಗೂ ವೈವಿಧ್ಯಮಯವಾದ ಮಾಹಿತಿಯನ್ನು ಜೀವನದ ಪ್ರಜ್ಞಾವಂತ ರೂಪವಾಗಿ ನೀಡುತ್ತದೆ, ಜೀವನದ ಜಂಗಮ ರೂಪವನ್ನು ತೋರಿಸುತ್ತದೆ. ಅದರ ಧರ್ಮವು ಅದರ ಮನಸ್ಸಿನ ಉನ್ನತ ಮಟ್ಟದ ಆಸೆಯನ್ನು ಹಾಗೂ ಆತ್ಮದ ಆಸೆಯನ್ನು ಈ ನಿಟ್ಟಿನಲ್ಲಿ ಪೂರೈಸಲು ಬೇಕಾದ ಆಶೋತ್ತರಗಳನ್ನು ತಿಳಿಸುತ್ತದೆ. ಅದರ ಕಲೆ, ಕಾವ್ಯ, ಸಾಹಿತ್ಯ ಇವು ಅದರ ಸೃಜನಾತ್ಮಕ ಅಭಿವ್ಯಕ್ತಿಯಾಗಿ ಕಂಡುಬರುತ್ತದೆ. ಅದರೊಟ್ಟಿಗೆ ಅದರ ಸ್ಫೂರ್ತಿಯ ಸೆಲೆಯನ್ನು, ಕಲ್ಪನೆಯನ್ನು, ಪ್ರಧಾನ ತಿರುವುಗಳನ್ನು ಹಾಗೂ ಸೃಜನಾತ್ಮಕ ಬುದ್ಧಿವಂತಿಕೆಯನ್ನು ಅದು ತೋರಿಸುತ್ತದೆ. ಒಂದು ಸಮಾಜ, ಅದರ ರಾಜಕೀಯ ವ್ಯವಸ್ಥೆಯನ್ನು ಒಳಗೊಂಡು, ತಮ್ಮ ರೂಪದಲ್ಲಿ ಒಂದು ಹೊರ ಆವರಣವನ್ನು ತೋರಿಸುತ್ತವೆ. ಈ ಚಿತ್ರಣದಲ್ಲಿ ನಾವು ಕಾಣುವುದು ಹೊರ ಜೀವನದ ಹೊದ್ದಿಕೆಯಲ್ಲಿ ಸ್ಫೂರ್ತಿ ನೀಡುವ ಆದರ್ಶಗಳು ಹಾಗೂ ಸಮಾಜದ ವಿಶೇಷತೆಯನ್ನು ಅದರ ಪ್ರಕೃತಿಯನ್ನು, ವಾತಾವರಣದ ವೈರುದ್ಧ್ಯವಿರುವಾಗ ಅದು ತನ್ನನ್ನು ಉಳಿಸಿಕೊಂಡ ರೀತಿಯನ್ನು ಕಾಣುತ್ತೇವೆ. ಅದು ಜೀವನದ ಒರಟು ಹಾದಿಯನ್ನು ತೋರಿಸುತ್ತದೆ.

ಆ ಒರಟು ಹಾದಿಯಲ್ಲಿ ಬರುವಾಗ ಏನಾಯಿತು, ಅದರಿಂದ ತನ್ನ ರೂಪವನ್ನು ಅದೆಷ್ಟು ಮಾರ್ಪಡಿಸಿಕೊಂಡಿತು, ಅವೆಲ್ಲವನ್ನು ತನ್ನ ಪ್ರಜ್ಞೆಯೊಳಗೆ ಆತ್ಮದೊಳಗೆ ಹೇಗೆ ಸೇರಿಸಿಕೊಂಡಿತು ಎಂಬುದು ಮುಖ್ಯ. ಅವಾವೂ ಹಿನ್ನೆಲೆಯಲ್ಲಿರುವ ರಹಸ್ಯವಾದ ಆತ್ಮಶಕ್ತಿಯ ಭಾವವನ್ನು ಪ್ರದರ್ಶಿಸಲಾರವು. ಆದರೆ ಅವು ಅದರಿಂದ ತಮ್ಮ ಮುಖ್ಯ ಭಾವನೆಗಳನ್ನು ಹಾಗೂ ಸಾಂಸ್ಕೃತಿಕ ಚೌಕಟ್ಟುಗಳನ್ನು ಸಿದ್ಧಪಡಿಸಿಕೊಳ್ಳುತ್ತವೆ. ಅವು ಒಟ್ಟು ಸೇರಿದಾಗ ಆತ್ಮ, ಮನಸ್ಸು ಹಾಗೂ ದೇಹ ರೂಪ ಪಡೆಯುತ್ತದೆ. ಭಾರತೀಯ ಸಭ್ಯತೆಯಲ್ಲಿ ತತ್ತ್ವಶಾಸ್ತ್ರ ಹಾಗೂ ಧರ್ಮ, ತತ್ತ್ವಶಾಸ್ತ್ರವು ಧರ್ಮದಿಂದಾಗಿ ಜಂಗಮವಾಗಿದ್ದು, ಧರ್ಮವು ತತ್ತ್ವಶಾಸ್ತ್ರದಿಂದ ಬೆಳಕು ಕಂಡಿದ್ದು – ಇವು ಒಂದನ್ನೊಂದು ನಡೆಸಿವೆ. ಮಿಕ್ಕವು ಇದನ್ನು ಸಾಧ್ಯವಾದಷ್ಟು ಹಿಂಬಾಲಿಸಿವೆ. ಇದು ಅದರ ಮುಖ್ಯ ಚಿಹ್ನೆಯಾಗಿದ್ದು, ಇತರ ಪ್ರಗತಿ ಸಾಧಿಸಿದ ಏಷಿಯಾದ ಜನರ ಸಭ್ಯತೆಯ ಜೊತೆ ಸಮಾನತೆಯನ್ನು ಹೊಂದಿರುವ ವಿಷಯವಾಗಿದೆ. ಆದರೆ ಅದು ಎಲ್ಲವನ್ನೂ ಮೀರಿ ನಿಂತಿದೆ ಎಂಬುದು ಗಮನಿಸಬೇಕಾದ ವಿಷಯ. ಅದನ್ನು ಬ್ರಾಹ್ಮಣ ಸಭ್ಯತೆ ಎಂದು ಕರೆದಾಗ ಅದು ಅದರ ವಿಶೇಷತೆಯೂ ಹೌದು. ಈ ಮಾತು ಪುರೋಹಿತಶಾಹಿಯ ಹಿರಿಯತನದ ಮಾತಂತೂ ಅಲ್ಲ. ಹಾಗಂತ ಸಂಸ್ಕೃತಿಯ ಕೆಳಸ್ತರದಲ್ಲಿ ಈ ಮಾತುಗಳು ಪುರೋಹಿತಶಾಹಿಯ ಪ್ರಾಧಾನ್ಯತೆಯನ್ನು ತಳ್ಳಿಹಾಕುವಂತಹವೂ ಅಲ್ಲ. ಪುರೋಹಿತನು ಸಂಸ್ಕೃತಿಯ ರೂಪುರೇಷೆಯನ್ನು ತಿದ್ದುವ ಕೆಲಸ ಮಾಡಿದ್ದ ಎಂಬುದನ್ನು ಒಪ್ಪಲಾಗದು. ಆದರೆ ಸಂಸ್ಕೃತಿಯನ್ನು ತಿದ್ದಿದವರು ತತ್ತ್ವಶಾಸ್ತ್ರಿಗಳು. ಅವರೆಲ್ಲರೂ ಬ್ರಾಹ್ಮಣರೇನೂ ಆಗಿರಲಿಲ್ಲ. ಆತ್ಮಜ್ಞಾನವನ್ನು ಜನಾಂಗದ ಪವಿತ್ರ ನಿಯಮಗಳನ್ನು ಉಳಿಸುವ ಕೆಲಸವನ್ನು ಬ್ರಾಹ್ಮಣನಿಗೆ ನೀಡಿದ್ದು ನಿಜವಾಗೇ ಇತ್ತು. ಈ ಜನರು ಸಾವಿರಾರು ವರ್ಷಗಳ ಕಾಲ ಈ ಕೆಲಸ ಮಾಡಿದರಾದರೂ ಅವರು ಮಾತ್ರ ಇದರ ರಕ್ಷಣೆಯ ಸರ್ವಾಧಿಕಾರಿಗಳಾಗಿರಲಿಲ್ಲ. ರಾಷ್ಟ್ರೀಯ ಮನಸ್ಸು ಹಾಗೂ ಪ್ರಜ್ಞೆ, ಸಾಮಾಜಿಕ ನಿಯಮಗಳ ನಿರ್ದೇಶನ, ವ್ಯವಹಾರ ನೀತಿನಿಯಮಗಳನ್ನು ನೋಡಿಕೊಳ್ಳುವುದು ಒಂದು ಕರ್ತವ್ಯವಾಗಿದ್ದು ನಿಜ. ಸತ್ಯ ಏನೆಂದರೆ ಭಾರತೀಯ ಸಂಸ್ಕೃತಿಯು ತನ್ನೊಳಗೆ ತಾನು ಇಣುಕಿ ನೋಡಿಕೊಳ್ಳುವ ಪರಾಮರ್ಶನ ಶಕ್ತಿಯನ್ನು ಹೊಂದಿದ ಧಾರ್ಮಿಕ–ತಾತ್ತ್ವಿಕ ಸಂಸ್ಕೃತಿಯಾಗಿತ್ತು. ಮತ್ತೆಲ್ಲವೂ ಆ ಒಂದು ತತ್ತ್ವದ ಆಧಾರದ ಮೇಲೆ ಬೆಳೆದು ನಿಂತಿರುವ, ಅದರ ಮೇಲೆ ನಿಂತಿರುವ ಅಥವಾ ಅದರ ಅಂತರ್ಗತವಾಗಿರುವ ವಿಷಯವೇ ಆಗಿತ್ತು. ಜೀವನದ ಹೊರಮೈ ಸಹ ಈ ಆತ್ಮದ ಅಂತರಂಗದ ದೃಷ್ಟಿಯ ಪ್ರಭಾವದಲ್ಲಿತ್ತು.

...ಭಾರತೀಯ ಮನಸ್ಸಿಗೆ ಹಾಗೂ ಅದರ ಸಭ್ಯತೆಗೆ ಉನ್ನತ ಮಟ್ಟದ ಆಧ್ಯಾತ್ಮಿಕ ಕಾರಣ ಎನ್ನುವುದು, ಆಲೋಚನೆಯ ಹಾಗೂ ಧರ್ಮದ ಉನ್ನತ ಸ್ತರ

ಎಂಬುದು, ಕಲೆ ಮತ್ತು ಸಾಹಿತ್ಯದಲ್ಲೂ, ಧಾರ್ಮಿಕ ಕೆಲಸಗಳಲ್ಲಿ ಅದರ ಪ್ರವೇಶವಾಗಿದೆ ಎಂಬುದು, ಸಾಮಾನ್ಯ ಮನುಷ್ಯನನ್ನು ಅದು ಪ್ರಭಾವಗೊಳಿಸಿದೆ ಎಂಬುದು ಗಮನಿಸಬೇಕಾದ ವಿಷಯ. ಈ ವಿಷಯವನ್ನು ಒಪ್ಪಿದ್ದೇ ಆದರೆ– ಭಾರತೀಯ ಜೀವನ ದೃಷ್ಟಿಯನ್ನು ಒಪ್ಪದವರು, ಈ ಮಾತನ್ನೂ ಒಪ್ಪದವರು ಪ್ರತಿರೋಧಿಸುತ್ತಾರಾಗಿಯೂ– ಭಾರತೀಯ ಸಂಸ್ಕೃತಿಯು ತನ್ನದೇ ರೂಪದಲ್ಲಿ ನಿಲ್ಲುವುದಕ್ಕೆ ಅದಕ್ಕೆ ಹಕ್ಕಿದೆ... ಮೌಲ್ಯ ಹಾಗೂ ಆತ್ಮಶಕ್ತಿಯ ತತ್ತ್ವಾವಲೋಕನ ಇವುಗಳ ನೆಲೆಯಲ್ಲು ನಾವು ಭಾರತೀಯ ಸಂಸ್ಕೃತಿಯನ್ನು ಅದಕ್ಕೆ ನೀಡಿರುವ ರೂಪ ಹಾಗೂ ಮಾನವೀತೆಯ ಪ್ರಗತಿಯ ದೃಷ್ಟಿಯಿಂದ ಅದು ಸರಿಯೇ ಎಂಬುದನ್ನು ಪ್ರಶ್ನಿಸುವುದು ಸಾಧುವೂ ಹೌದು.

* * * *

೨. ಜೀವನವನ್ನು ದೃಢೀಕರಿಸುವ ಆಧ್ಯಾತ್ಮ ತತ್ತ್ವಶಾಸ್ತ್ರ ಮತ್ತು ವಿಜ್ಞಾನ

...ಯೂರೋಪಿನ ಒಬ್ಬ ಸಾಧಾರಣ ಪ್ರಜೆ ತನ್ನ ಮಾರ್ಗದರ್ಶಿ ದೃಷ್ಟಿಯನ್ನು ತತ್ತ್ವಶಾಸ್ತ್ರದ ಆಧಾರದ ಮೇಲೆ ಪಡೆಯುವುದಿಲ್ಲ. ಬದಲಾಗಿ ಪ್ರಾಯೋಗಿಕ ಕಾರಣಗಳನ್ನು ಆಧರಿಸಿ, ಧನಾತ್ಮಕವಾಗಿ ಪಡೆಯುತ್ತಾನೆ... ಭಾರತೀಯ ಮನಸ್ಸು, ಅದಕ್ಕೆ ವಿರುದ್ಧವಾಗಿ, ಒಬ್ಬ ಋಷಿಯ, ಸಂತನ, ಆಲೋಚಕನ, ತತ್ತ್ವಜ್ಞನ ಆಲೋಚನೆಗಳು ಧಾರ್ಮಿಕ ಹಾಗೂ ನೈತಿಕ ಜೀವನಕ್ಕೆ ಪ್ರಾಯೋಗಿಕ ತತ್ತ್ವಕ್ಕಿಂತ ಮೇಲು ಎಂದು ಭಾವಿಸುತ್ತಾನೆ. ಋಷಿಮುನಿಗಳು ಅವನಿಗೆ ಸಮಾಜಕ್ಕೆ ಸರಿಯಾಗಿ ದಾರಿ ತೋರಿಸುವ ವ್ಯಕ್ತಿಗಳು. ತನ್ನ ನಾಗರಿಕತೆಯ ಮಾರ್ಗದರ್ಶಕ ಸೂತ್ರಗಳನ್ನು ಋಷಿಮುನಿಗಳ ಮೂಲಕ ಆತ ಪಡೆಯುತ್ತಾನೆ. ಇಂದೂ ಸಹ ಅದರಲ್ಲಿ ವ್ಯತ್ಯಾಸವಾಗಿಲ್ಲ. ಆಧ್ಯಾತ್ಮಿಕ ಸತ್ಯವನ್ನು ತಿಳಿಹೇಳಬಲ್ಲ, ತನ್ನ ಜೀವನವನ್ನು ರೂಪಿಸಬಲ್ಲ ಸ್ಫೂರ್ತಿದಾಯಕವಾಗಿ ಧರ್ಮ, ಮೌಲ್ಯಗಳು, ಸಮಾಜ ಹಾಗೂ ರಾಜಕಾರಣವನ್ನು ನಡೆಸಬಲ್ಲ ಇಂತಹ ಸಂತರಿಗೆ ಆತ ತಲೆಬಾಗುತ್ತಾನೆ.

ಅದಕ್ಕೆ ಕಾರಣ ಒಬ್ಬ ಭಾರತೀಯನು ಅತ್ಯುನ್ನತ ಸತ್ಯ ಎಂಬುದು ಆತ್ಮದ ಸತ್ಯವೇ ಎಂದು ನಂಬುತ್ತಾನೆ. ಹಾಗೂ ಆತ್ಮದ ಸತ್ಯವೇ ಎಲ್ಲಕ್ಕೂ ಮೂಲಾಧಾರವಾದದ್ದು, ನಮ್ಮ ಬದುಕಿನ ನೈಜ ಸತ್ಯಗಳಾಗಿ ಅಮತರಂಗದಲ್ಲಿ ಸೃಜನಾತ್ಮಕವಾಗಿ, ಹೊರಗಿನ ಜಗತ್ತಿನಲ್ಲಿ ನಮ್ಮನ್ನು ರೂಪಿಸುವಂತಹವಾಗಿರುತ್ತವೆ.

...ಆದರೆ ಇದು ಅದರ ಇಡೀ ಮಾನಸಿಕ ಪರಿಸ್ಥಿತಿಯಾಗಲಾರದು, ಅದರ ಇಡೀ ಆತ್ಮಶಕ್ತಿಯಾಗಿರಲಾರದು. ಆಧ್ಯಾತ್ಮ ಭೂಮಿಯ ಮೇಲೆ ಶೂನ್ಯದಲ್ಲಿ ಇರಲು ಸಾಧ್ಯವಿಲ್ಲ. ಯಾವ ರೀತಿ ನೆಲ ಭದ್ರವಿಲ್ಲದೆ ಪರ್ವತದ ಶಿಖರಗಳು ಎದ್ದು ನಿಲ್ಲಲು ಸಾಧ್ಯವಿಲ್ಲವೊ, ಹಾಗೆ, ಭಾರತದ ಭೂತಕಾಲವನ್ನು ನೋಡಿದಾಗ ನಮಗೆ ಅರಿವಿಗೆ ಬರುವುದು ಅದರ ಅಂತಃಸತ್ವ, ಅದರ ಅನಂತವಾದ ಜೀವನಶಕ್ತಿ, ಜೀವನದ ಆನಂದ, ಅದರ ಕಲ್ಪನೆಗೆ ಸಿಗದ ಅದ್ಭುತ ಸೃಜನಾತ್ಮಕ ಶಕ್ತಿ. ಕಡೆ ಪಕ್ಷ ಮೂರು ಸಾವಿರ ವರ್ಷಗಳ ಕಾಲ – ಬಹುಶಃ ಅದಕ್ಕೂ ಹೆಚ್ಚಿರಬೇಕು – ಅದು ಸಮೃದ್ಧವಾಗಿ, ನಿರಂತರವಾಗಿ ಸೃಷ್ಟಿಸುತ್ತಿದೆ. ಸಂಭ್ರಮದಿಂದ ಸೃಷ್ಟಿಸುತ್ತದೆ. ಅದು ಸೃಷ್ಟಿಸುವಾಗ

ಅದರ ಅನೇಕ ಆಯಾಮಗಳು ಕೊನೆಯಾಗದಷ್ಟು, ಗಣರಾಜ್ಯಗಳು, ರಾಜ್ಯಾಧಿಕಾರದ ರಾಜ್ಯಗಳು, ಚಕ್ರಾಧಿಪತ್ಯಗಳು, ತತ್ತ್ವಶಾಸ್ತ್ರಗಳು, ಜ್ಯೋತಿರ್ವಿಜ್ಞಾನ ಮತ್ತು ವಿಜ್ಞಾನ, ಕಲೆ, ಕಾವ್ಯ ಮತ್ತು ಎಲ್ಲಾ ವಿಧವಾದ ಸ್ಮಾರಕಗಳು, ಅರಮನೆಗಳು ಹಾಗೂ ದೇವಾಲಯಗಳು ಮತ್ತು ಸಾರ್ವಜನಿಕ ಕೆಲಸಗಳು, ಸಮೂಹಗಳು, ಸಂಸ್ಥೆಗಳು, ಧಾರ್ಮಿಕ ಆದೇಶಗಳು, ನ್ಯಾಯ ನೀತಿ ಹಾಗೂ ಧಾರ್ಮಿಕ ಸಂಪ್ರದಾಯಗಳು, ಭೌತಿಕ ವಿಜ್ಞಾನಗಳು, ಆದಿ ಭೌತಿಕ ವಿಜ್ಞಾನಗಳು, ಯೋಗ, ರಾಜಕೀಯ, ಆಡಳಿತ ವ್ಯವಸ್ಥೆ, ಆಧ್ಯಾತ್ಮಿಕ ಕಲೆ, ಲೌಕಿಕ ಕಲೆ, ವ್ಯಾಪಾರ, ವ್ಯವಹಾರ, ಕುಶಲ ಕಲೆಗಳು– ಈ ಪಟ್ಟಿಗೆ ಕೊನೆಯೇ ಇಲ್ಲ. ಪ್ರತಿಯೊಂದರಲ್ಲೂ ಕ್ರಿಯಾತ್ಮಕ ಚಟುವಟಿಕೆ ಸಮೃದ್ಧವಾಗಿವೆ. ಭಾರತದಲ್ಲಿ ಸೃಷ್ಟಿಯಾಗುತ್ತಲೇ ಇದೆ, ಸೃಷ್ಟಿಯಾಗುತ್ತಲೇ ಇದೆ. ಅದರಿಂದ ಮುಗಿಯಿತು ಎಂಬ ಮಾತಾಗಲೀ, ತೃಪ್ತಿಯಾಗಲಿಲ್ಲ ಎಂದಾಗಲೀ, ಸುಸ್ತಾಯಿತು ಎಂದಾಗಲೀ, ಇದಕ್ಕೊಂದು ಅಂತ್ಯವಿದೆ ಎಂದಾಗಲೀ, ವಿಶ್ರಾಂತಿ ಪಡೆಯಬೇಕೆಂದಾಗಲೀ, ಇಲ್ಲ. ಭಾರತವು ತನ್ನ ಎಲ್ಲೆ ಮೀರಿ ಪ್ರಭಾವ ಬೀರುತ್ತಿದೆ. ಅದರ ನೌಕೆಗಳು ಮಹಾಯಾನ ಮಾಡಿ ತನ್ನ ಐಶ್ವರ್ಯವನ್ನು ಯುದೆಯಾ, ಈಜಿಪ್ಟ್, ರೋಮ್‌ಗಳಲ್ಲಿ ಹರಡುತ್ತಿದೆ. ಅದರ ವಸಾಹತುಗಳು ಸಾಗರದ ದ್ವೀಪಗಳಲ್ಲಿ ತುಂಬಿ ಹರಿದಿದೆ, ಇಲ್ಲೆಲ್ಲ ಅದರ ಸಾಹಿತ್ಯ ಕಲೆಯು ಪ್ರಸಾರವಾಗಿದೆ. ಮೆಸಪಟೋಮಿಯಾದ ಮರಳುಗಳಲ್ಲಿ ಅದರ ಹೆಜ್ಜೆ ಗುರುತಿದೆ. ಅದರ ಧರ್ಮ ಜಪಾನ್, ಚೀನಾವನ್ನು ಗೆದ್ದು ಪಶ್ಚಿಮದ ದಿಕ್ಕಿನಲ್ಲಿ ಪ್ಯಾಲಿಸ್ಟೈನ್, ಅಲೆಗ್ಸಾಂಡ್ರಿಯಾದ ನೆಲಗಳಲ್ಲಿ ಕಾಣುತ್ತೇವೆ. ಉಪನಿಷತ್ತಿನ ಮಾತುಗಳು, ಬುದ್ಧನ ಪ್ರವಚನಗಳು ಕ್ರಿಸ್ತನ ಮಾತುಗಳಲ್ಲಿ ಮತ್ತೆ ಕಾಣಿಸುತ್ತಿದೆ. ಅದರ ನೆಲದ ಮೇಲೆ ಇರುವಂತೆ ಅದರ ಕೃತಿಗಳಲ್ಲಿಯೂ ಸಹ ಅಸಾಧ್ಯ ಶಕ್ತಿ ಸಂಚಲನ ಕಂಡುಬರುತ್ತಿದೆ. ಯೂರೋಪಿನ ವಿಮರ್ಶಕರು ಪ್ರಾಚೀನ ಭಾರತದ ವಾಸ್ತು, ಶಿಲ್ಪ, ಕಲೆಯಲ್ಲಿ ಸಮೃದ್ಧಿ, ಐಶ್ವರ್ಯ, ವೈಶಾಲ್ಯ, ಪ್ರತಿಯೊಂದು ವಿವರವನ್ನು ಸೂಕ್ಷ್ಮವಾಗಿ ನೋಡುವ ಕಲೆ ಸಿದ್ಧಿಸಿತ್ತು ಎನ್ನುತ್ತಾರೆ. ಅದರಲ್ಲಿ ವ್ಯತ್ಯಾಸಗಳಿರಬಹುದು, ಆದರೆ ಸಮೃದ್ಧ ಜೀವನದ ಆವಶ್ಯಕತೆ ಅದರಲ್ಲಿ ಕಾಣಿಸುತ್ತದೆ. ತನ್ನೊಳಗೆ ಅನಂತತೆಯನ್ನು ಕಾಣುವ ಪ್ರಯತ್ನ ಅದರಲ್ಲಿ ಕಾಣಿಸುತ್ತದೆ. ತನ್ನ ಐಶ್ವರ್ಯವನ್ನು ಭಾರತ ಎಲ್ಲಾ ಕಡೆ ಹರಡುತ್ತದೆ, ಕಾರಣ ಅದು ಮಾಡಲೇಬೇಕಾದ್ದು, ಅನಂತವು ಪ್ರತಿ ಅಂಗುಲದ ಅವಕಾಶವನ್ನು ಜೀವನ ಮತ್ತು ಶಕ್ತಿಯಿಂದ ತುಂಬುತ್ತದೆ, ಕಾರಣ ಅದು ಅನಂತ.

ಆದರೆ ಈ ಎಲ್ಲ ಆಧ್ಯಾತ್ಮಿಕತೆ ಹಾಗೂ ಜೀವನದ ಸಂತೋಷದ ಅವ್ಯಾಹತವಾದ ಹಂಚುವಿಕೆ ಭಾರತ ಹಿಂದೆ ಏನಾಗಿದ್ದಿತು ಎಂಬುದನ್ನು ತೋರಿಸುವುದಿಲ್ಲ. ಅದು ಭೂ ಮಧ್ಯ ರೇಖೆಯ ಪರಿಧಿಯಲ್ಲಿರುವ ಹಸಿರಿನ ವಿಜೃಂಭಣೆ ಮಾತ್ರ ಅಲ್ಲ.

ಅಂತಹ ಐಶ್ವರ್ಯವನ್ನು ನೋಡಿರದ ಕಣ್ಣುಗಳಿಗೆ ಈ ಅವಕಾಶದಲ್ಲೆ ತನ್ನ ಸಮೃದ್ಧಿಯನ್ನು ಹೇಳುವ ರೀತಿ ಭ್ರಮೆಯನ್ನು ಹುಟ್ಟಿಸಬಹುದು. ವಿಪರೀತವಾಗಿ ತೋರುವ, ಅಳತೆಗೆ ಸಿಕ್ಕದ ಸಮತೋಲಿತ ಮಾದರಿಯಾಗಿ ಕಾಣದಿರಬಹುದು. ಪ್ರಾಚೀನ ಭಾರತೀಯ ಅಂತಃಸತ್ವದ ಮೂರನೆಯ ಶಕ್ತಿಯಾಗಿ ಅಗಾಧವಾದ ಬುದ್ಧಿವಂತಿಕೆ ಕಂಡುಬರುತ್ತದೆ. ಒಮ್ಮೆಗೆ ಶ್ರೀಮಂತ ಹಾಗೂ ಶ್ರೀಮಂತಿಕೆಯನ್ನು ತೋರಿಸದಿರುವ, ಸುದೃಢವಾದ ಹಾಗೂ ಸೂಕ್ಷ್ಮವಾದ, ಶಕ್ತಿಯುತವಾಗಿ ಹಾಗೂ ಮೃದುವಾಗಿ, ತತ್ತ್ವದಲ್ಲಿ ಅಗಾಧವಾಗಿ ಕುಸುರಿಯ ಕೆಲಸದಲ್ಲಿ ಸೂಕ್ಷ್ಮವಾಗಿ ಕಂಡುಬರುತ್ತದೆ. ಅದರ ಪ್ರಮುಖ ನಡೆ ಶಿಸ್ತಿನಲ್ಲಿತ್ತು, ವ್ಯವಸ್ಥೆಯಲ್ಲಿತ್ತು. ಆದರೆ ಅದು ಹುಡುಕುತ್ತಿದ್ದ ವ್ಯವಸ್ಥೆ ಅಂತರಂಗದ ನ್ಯಾಯ ಹಾಗೂ ಸತ್ಯದ ಮೇಲೆ ನಿರ್ಭರವಾಗಿತ್ತು. ಹಾಗೆಯೇ ಅದು ಯಾವಾಗಲೂ ಸಮಾನ ಮನೋಧರ್ಮದ ಚಟುವಟಿಕೆಗಳಿಗೆ ಒತ್ತುಕೊಡುತ್ತಿತ್ತು. ಭಾರತವು ವಿಶೇಷವಾಗಿ ಧರ್ಮ ಹಾಗೂ ಶಾಸ್ತ್ರಗಳ ನಾಡಾಗಿದೆ. ಅದು ಅಂತರಂಗದ ಸತ್ಯವನ್ನು ಹುಡುಕುವ ನ್ಯಾಯವನ್ನು ಅರಸುವ ಪ್ರತಿ ಮನುಷ್ಯನ ಅಥವಾ ವಿಶ್ವಕ್ರಿಯೆಯ ಅರಿವನ್ನು ಪಡೆಯುವ ತನ್ನ ಕೆಲಸದ ಕೆಲಸ ಮಾಡುತ್ತಿದೆ. ಅದು ದೊರಕಿದ ನಂತರ ಅದನ್ನು ವಿಶದವಾಗಿ ವ್ಯವಸ್ಥಿತವಾಗಿ ನೆಲೆ ನಿಲ್ಲಿಸುವ ಜೀವನದ ನ್ಯಾಯವನ್ನಾಗಿಸುವ ಕೆಲಸವನ್ನು ಮಾಡಿದೆ.

ಪ್ರಾಚೀನ ಭಾರತದ ವೈಜ್ಞಾನಿಕ ಸಂಶೋಧನೆಯಲ್ಲಿ ಯಶಸ್ಸು

ಭಾರತೀಯ ತತ್ತ್ವಶಾಸ್ತ್ರವು ಪ್ರಕೃತಿಯ ಅಧ್ಯಯನದಿಂದ ದೂರವಾಗಿದೆ ಎಂದು ಯಾರಾದರೂ ಹೇಳಿದರೆ ಅದ್ಭುತವಾದ ಭಾರತೀಯ ನಾಗರಿಕತೆಯ ಇತಿಹಾಸವನ್ನು ಕಡೆಗಾಣಿಸಿದಂತೆ – ಪ್ರಕೃತಿ ಎಂದರೆ ಭೌತಿಕ ಪ್ರಕೃತಿಯೆ ಎಂದಾದರೆ, ಸತ್ಯವೇನೆಂದರೆ ಭಾರತವನ್ನು ಬಿಟ್ಟು ಬೇರಾವ ದೇಶವೂ ವೈಜ್ಞಾನಿಕ ಸಂಶೋಧನೆಯನ್ನು ಅತೀವ ಯಶಸ್ವಿಯಾಗಿ ಮಾಡಿದ್ದಿಲ್ಲ. ಇತಿಹಾಸದ ಪುಟದಲ್ಲಿರುವ ಎಲ್ಲರೂ ಓದಬಹುದಾದ ಸತ್ಯ ಇದು. ಈ ವಿಷಯವನ್ನು ಅನೇಕ ಭಾರತೀಯ ವಿದ್ವಾಸರು ಹಾಗೂ ವಿಜ್ಞಾನಿಗಳು ತಿಳಿಹೇಳಿದ್ದಾರಾದರೂ, ಯೂರೋಪಿನ ವಿದ್ವಾಂಸರು ಈ ಮಾತುಗಳನ್ನು ಸಾಪೇಕ್ಷವಾಗಿ ಸಿದ್ಧಪಡಿಸಿದ್ದಾರೆ. ಪ್ರಾಚೀನ ಭಾರತವು ಗಣಿತ, ಜ್ಯೋತಿರ್ವಿಜ್ಞಾನ, ರಸಾಯನಶಾಸ್ತ್ರ, ಔಷಧ ವಿಜ್ಞಾನ, ಶಸ್ತ್ರ ಚಿಕಿತ್ಸೆ, ಮತ್ತೆಲ್ಲ ಭೌತಿಕ ಜ್ಞಾನಗಳಲ್ಲಿ ಮುಂಚೂಣಿಯಲ್ಲಿ ಇದ್ದುದು ಮಾತ್ರವಲ್ಲ, ಗ್ರೀಕರು ಮತ್ತು ಅರಬ್ಬರೊಂದಿಗೆ ಸೇರಿ, ವೈಜ್ಞಾನಿಕ ವೈಚಾರಿಕತೆಗೆ ಕಾರಣವಾಗಿತ್ತು. ಇದರ ಆಧಾರದ ಮೇಲೆ ಆಧುನಿಕ ವಿಜ್ಞಾನ ತಲೆ ಎತ್ತಿತ್ತು. ಅನೇಕ ದಿಕ್ಕುಗಳಲ್ಲಿ ಭಾರತವು ಮೂಲ ಸಂಶೋಧನೆಗಳಿಗೆ ಕಾರಣವಾಗಿತ್ತು. ಎರಡು ಉದಾಹರಣೆಗಳನ್ನು ಹೇಳುವುದಾದರೆ,

ಅಂಕಗಣಿತದಲ್ಲಿ, ದಶಾಂಶದ ಹಾಗೂ ಭೂಮಿಯು ಆಕಾಶದಲ್ಲಿ ಸುತ್ತುವ ಕಾಯ ಎಂಬ ಜ್ಞಾನ (ಚಲ ಪೃಥ್ವಿ, ಸ್ಥಿರ ಭಾತಿ), ಭಾರತೀಯರಿಗೆ ಮಾತ್ರ ಇತ್ತು. ಗೆಲಿಲಿಯೋಗಿಂತ ಎಷ್ಟೋ ಶತಮಾನದ ಹಿಂದೆ ಭೂಮಿ ತಿರುಗುತ್ತದಾದರೂ ನಿಶ್ಚಲವಾಗಿ ನಿಂತಿರುವಂತೆ ಭಾಸವಾಗುತ್ತದೆ ಎಂಬ ತಿಳುವಳಿಕೆ ಭಾರತೀಯರಲ್ಲಿ ಮಾತ್ರ ಇತ್ತು. ಆಧ್ಯಾತ್ಮದಲ್ಲಿ ತಲ್ಲೀನವಾಗಿದ್ದ ಜನಾಂಗದಿಂದ ಇಂತಹ ಪ್ರಾಕೃತಿಕ ಜ್ಞಾನದ ಉದಯವಾಗಿರಲು ಸಾಧ್ಯವಿಲ್ಲ. ವಿಶೇಷವೆಂದರೆ, ಭಾರತೀಯ ಚಿಂತನೆ ಸೂಕ್ಷ್ಮವಿಷಯಗಳನ್ನು ಗಮನಿಸುತ್ತಿತ್ತು. ವಯವಸ್ಥಿತವಾಗಿ ತನ್ನ ಜ್ಞಾನ ಭಂಡಾರ ದಲ್ಲಿರುವ ವಿಷಯಗಳನ್ನು ವೈಜ್ಞಾನಿಕವಾಗಿ, ಶಾಸ್ತ್ರೋಕ್ತವಾಗಿ, ನಿಯಮಬದ್ಧವಾಗಿ ನೋಡಿದ್ದು, ಅದು ಒಳ್ಳೆಯ ವೈಜ್ಞಾನಿಕ ಪದ್ಧತಿ ಎನಿಸಿತು. ಕೇವಲ ಆಧಾರರಹಿತ ಆಧ್ಯಾತ್ಮಿಕ ಚಿಂತನೆಯ ಮೇಲೆ ನೆಲೆನಿಂತ ಸಂಸ್ಕೃತಿಯಾಗಿರಲಿಲ್ಲ.

ಜೀವನದ ಪರಿಪೂರ್ಣತೆ ಹಾಗೂ ಅದನ್ನು ಮೀರಿ ನಿಲ್ಲುವುದು

...ಭಾರತದ ಪ್ರಾಚೀನ ಸಭ್ಯತೆಯು ನಾಲ್ಕು ಮಾನವೀಯ ಮೌಲ್ಯಗಳ ಮೇಲೆ ಆಧಾರಿತವಾಗಿತ್ತು; ಮೊದಲನೆಯದು, ಆಸೆ ಹಾಗೂ ಅದನ್ನು ಅನುಭವಿಸುವುದು, ಮುಂದೆ, ವಸ್ತು, ಆರ್ಥಿಕ ಗುರಿ ಹಾಗೂ ಮನಸ್ಸು ಮತ್ತು ದೇಹದ ಅಗತ್ಯಗಳು, ಮೂರನೆಯದಾಗಿ, ಮೌಲ್ಯಾಧಾರಿತ ವ್ಯವಹಾರ ಹಾಗೂ ವೈಯಕ್ತಿಕ ಹಾಗೂ ಸಾಮಾಜಿಕವಾಗಿ ಸರಿಯಾದ ಜೀವನ ಮತ್ತು ಕಡೆಯದಾಗಿ ಆಧ್ಯಾತ್ಮಿಕವಾಗಿ ಬಿಡುಗಡೆ ಸಾಧಿಸುವುದು; ಕಾಮ, ಅರ್ಥ, ಧರ್ಮ, ಮೋಕ್ಷ ಸಂಸ್ಕೃತಿಯ ವ್ಯವಹಾರ ಹಾಗೂ ಸಾಮಾಜಿಕ ಸಂಸ್ಥೆಗಳ ಕೆಲಸ ದಿಕ್ಕು ತೋರಿಸುವುದಾಗಿತ್ತು; ತೃಪ್ತಿ ನೀಡುವುದಾಗಿತ್ತು, ಮನುಷ್ಯನಲ್ಲಿ ಈ ವಿಷಯಗಳಿಗೆ ಬೆಂಬಲವಾಗಿ ನಿಲ್ಲುವುದಾಗಿತ್ತು ಹಾಗೂ ರೂಪ ಮತ್ತು ಗುರಿಯಲ್ಲಿ ಸಾಮರಸ್ಯವನ್ನು ಸಾಧಿಸುವುದಾಗಿತ್ತು. ಕೆಲವೇ ಕೆಲವು ವಿಪರೀತ ಪರಿಸ್ಥಿತಿಗಳಲ್ಲಿ ಬಿಟ್ಟರೆ ಮೊದಲಿಗೆ ಮೂರು ಭೌತಿಕ ಗುರಿಗಳು ನಾಲ್ಕನೆಯ ಗುರಿಗೆ ಮುಂಚೆ ಬರುತ್ತಿದ್ದಿತು. ಜೀವನದ ಪರಿಪೂರ್ಣತೆ ತಲುಪಬೇಕಾದರೆ, ಜೀವನವನ್ನು ಮೀರಿ ನಿಲ್ಲಬೇಕಾಗಿತ್ತು. ಸಂಸಾರಕ್ಕೆ ಸಲ್ಲುವ ಋಣ, ಸಮಾಜಕ್ಕೆ, ದೇವರಿಗೆ ಸಲ್ಲುವ ಋಣವನ್ನು ತಪ್ಪಿಸುವ ಹಾಗಿರಲಿಲ್ಲ. ಭೂಮಿಗೆ ಸಲ್ಲಿಸಬೇಕಾದ್ದನ್ನು ಸಲ್ಲಿಸಲೇಬೇಕಿತ್ತು. ಇದನ್ನು ಮೀರಿದಾಗ ಭವ್ಯವಾದ ಸ್ವರ್ಗ ಸಿಗುತ್ತದೆ ಎಂದಿದ್ದರೂ, ಅಗಾಧವಾದ ಶಾಂತಿ ದೊರಕುತ್ತದೆ ಎಂದಿದ್ದರೂ ಈ ಋಣಗಳನ್ನು ತೀರಿಸಲೇಬೇಕಿತ್ತು. ಎಲ್ಲರೂ ಸನ್ಯಾಸಾಶ್ರಮವನ್ನು ತೆಗೆದುಕೊಳ್ಳಿ ಎಂದು ಗುಹೆಗಳಿಗೆ ತೆರಳಿ ಎಂದು ಪ್ರವಚನ ಮಾಡುವವರಿರಲಿಲ್ಲ.

ಪ್ರಾಚೀನ ಭಾರತದ ಸಾಮರಸ್ಯಪೂರ್ಣ ಜೀವನ ಹಾಗೂ ಅದರ ವೈವಿಧ್ಯಮಯವಾದ ಸಾಹಿತ್ಯದಲ್ಲಿ ಕಾಣುವ ಚಿತ್ರ ಪರಲೋಕದ ಸಾಧನೆಗೆ

ಹೋಲಿಸಿದಾಗ ಭಿನ್ನವಾಗಿ ಕಾಣುತ್ತಿತ್ತು. ಸಂಸ್ಕೃತ ಸಾಹಿತ್ಯದ ಅಗಾಧವಾದ ಭಾಗ ಈ ಭೂಮಿಗೆ ಸಂಬಂಧಿಸಿದ್ದು, ಈ ಜೀವನಕ್ಕೆ ಸಂಬಂಧಿಸಿದ್ದು, ಕೆಲವು ತಾತ್ತ್ವಿಕ ಸಾಹಿತ್ಯ ಭಾಗಗಳು ಧಾರ್ಮಿಕ ಭಾಗಗಳು ಮಾತ್ರ ಈ ಜೀವನದಿಂದ ದೂರಸರಿಯಲು ನಿರ್ದೇಶನ ನೀಡುತ್ತವೆ. ಆದರೆ ಇವು ಸಹ ಜೀವನವನ್ನು ದುಷ್ಟವಾಗಿ ಕಂಡಿಲ್ಲ. ಭಾರತೀಯ ಮನಸ್ಸು ಆಧ್ಯಾತ್ಮಿಕ ಬಿಡುಗಡೆಗೆ ಅತ್ಯುನ್ನತ ಸ್ಥಾನವನ್ನು ನೀಡಿತ್ತು. ಬೇರೆಯವರು ಏನೇ ಹೇಳಲಿ, ಮಾನವ ಆತ್ಮಕ್ಕೆ ಅತಿದೊಡ್ಡ ಗುರಿ ಆಧ್ಯಾತ್ಮಿಕ ಬಿಡುಗಡೆ. ಆದರೆ ಭಾರತೀಯ ಚಿಂತನೆ ಇದಕ್ಕೆಂದೇ ಸೀಮಿತವಾಗಿರಲಿಲ್ಲ. ಅದು ಜನಜೀವನಕ್ಕೆ ಸಂಬಂಧಿಸಿದ ನೀತಿ, ನಿಯಮ, ರಾಜಕಾರಣ, ಸಮಾಜ, ವಿಜ್ಞಾನ, ಕಲೆ ಮತ್ತು ಕುಶಲಕಲೆ, ಇದೆಲ್ಲದರ ಕಡೆ ಸಮಾನವಾಗಿ ಗಮನಹರಿಸಿತು. ಈ ಎಲ್ಲದರ ವಿಷಯದಲ್ಲಿ ಆಳವಾಗಿ ಆಲೋಚಿಸಿತ್ತು. ಹಾಗೆಯೇ ಆಲೋಚಿಸಿ ನಂತರ ಅರ್ಥವತ್ತಾಗಿ ದಾಖಲಿಸಿತ್ತು. ಒಂದು ಉದಾಹರಣೆಯನ್ನು ತೆಗೆದುಕೊಳ್ಳುವುದಾದರೆ 'ಶುಕ್ರನೀತಿ' ಇಂತಹದೊಂದು ಅದ್ಭುತ ರಾಜಕೀಯ ಹಾಗೂ ಆಡಳಿತಾತ್ಮಕ ವಿಷಯದ ಮೇಲಿರುವ ಮೌಲ್ಯಾಂಕಿತ ಕೃತಿ. ಅದು ಒಂದು ಅದ್ಭುತ ಜನರ ಸಭ್ಯತೆಯನ್ನು ಪ್ರತಿಬಿಂಬಿಸುವ ಕನ್ನಡಿಯಾಗಿದೆ. ಭಾರತೀಯ ಕಲೆ ಕೇವಲ ದೇವಕಲೆಯಾಗಿರಲಿಲ್ಲ. ಅದು ದೇವಾಲಯಗಳಲ್ಲಿ, ಗುಹಾಂತದೇವಾಲಯಗಳಲ್ಲಿ ಮಾತ್ರ ಉಳಿದು ಬಂದಿರುವುದರಿಂದ ಹಾಗೊಂದು ಭಾವನೆ ಬರಬಹುದು. ಆದರೆ ರಜಪೂತರ, ಮೊಗಲರ ಕಲಾಕೃತಿಗಳನ್ನು ನೋಡಿದರೆ ಅದೆಷ್ಟು ವಿಶಾಲವಾಗಿತ್ತು ಎಂಬುದು ನಮ್ಮ ಅರಿವಿಗೆ ಬರುತ್ತದೆ. ಅದು ದೇವತಾ ವಿಷಯಗಳಿಗೆ ಎಷ್ಟು ಗಮನ ಕೊಟ್ಟಿತ್ತೊ ಅಷ್ಟೇ ರಾಜನ ಅರಮನೆಯ, ಆಸ್ಥಾನದ, ನಗರದ ಸಾಂಸ್ಕೃತಿಕ ಚಟುವಟಿಕೆಗಳನ್ನು ಪ್ರದರ್ಶಿಸುವುದಕ್ಕೂ ಮಹತ್ತ್ವ ನೀಡಿತ್ತು. ಭಾರತೀಯ ಮಹಿಳೆಯರು ಮತ್ತು ಪುರುಷರ ವಿದ್ಯಾಭ್ಯಾಸವು ಎಷ್ಟು ಅರ್ಥವಾಗಿತ್ತೆಂದರೆ ಅದು ಅನೇಕ ಆಯಾಮಗಳನ್ನು ತನ್ನಲ್ಲಿ ಒಡಗೂಡಿಸಿಕೊಂಡಿತ್ತು ಹಾಗೂ ಆಧುನಿಕ ಶಿಕ್ಷಣ ಕ್ಷೇತ್ರಕ್ಕೂ ಪಾಠ ನೀಡುವ ಹಾಗಿತ್ತು. ಇದಕ್ಕೆ ಸಂಬಂದಿಸಿದ ದಾಖಲೆಗಳು ಯಾರು ಓದಬೇಕೆನ್ನುತ್ತಾರೋ ಅವರಿಗೆ ಓದಲು ಸಿಗುತ್ತದೆ. ಭಾರತೀಯ ಸಭ್ಯತೆ ಅವ್ಯಾವಹಾರಿಕವಾಗಿತ್ತು, ಆಧ್ಯಾತ್ಮ ಪ್ರಧಾನವಾಗಿತ್ತು, ನಿಃಸತ್ತ್ವವಾಗಿತ್ತು ಎಂಬಂತಹ ಗಿಣಿಮಾತುಗಳನ್ನು ಇನ್ನು ಮುಂದಾದರೂ ಆಡುವುದನ್ನು ನಿಲ್ಲಿಸಬೇಕು. ಭಾರತೀಯ ಸಭ್ಯತೆಯ ನೈಜ ಅರ್ಥವನ್ನು ನಾವು ಈಗಾದರೂ ತಿಳಿಯಬೇಕು.

ಆದರೆ ಇದಂತೂ ಸತ್ಯ. ಭಾರತೀಯ ಸಭ್ಯತೆಯು ಭೌಗೋಳಿಕ ಇತಿಮಿತಿಗಳನ್ನು ಮೀರಿ ನಿಂತು ಅತ್ಯುನ್ನತ ಮೌಲ್ಯಗಳು ನೆಲೆಸುವಂತೆ ಮಾಡಿದೆ. ಮಾನವನ ಪ್ರಯತ್ನದ ತುತ್ತತುದಿಯಲ್ಲಿ ಉನ್ನತವಾದ ಗುರಿಯಿದೆ. ಆಧ್ಯಾತ್ಮಿಕ ಜೀವನ ಅದರ

ದೃಷ್ಟಿಯಲ್ಲಿ, ಬಾಹ್ಯ ಶಕ್ತಿ ಹಾಗೂ ತೃಪ್ತಿಗಿಂತ ಉನ್ನತವಾದದ್ದು. ಆಲೋಚಕನು ಕ್ರಿಯಾಶೀಲನಿಗಿಂತ ಮೇಲಿನವನು. ಆಧ್ಯಾತ್ಮಿಕ ವ್ಯಕ್ತಿಯು ಆಲೋಚಕನಿಗಿಂತ ಮೇಲಿನವನು. ದೇವರಲ್ಲಿ ನೆಲೆಗೊಂಡಿರುವ ಆತ್ಮವು, ಕೇವಲ ಬಾಹ್ಯ ಮನಸ್ಸಿನಲ್ಲಿ ನೆಲೆಗೊಂಡಿರುವ ಬಾಹ್ಯಜೀವಿಗಳಿಂದ ಸಂತೋಷ ಪಡುವ ಆತ್ಮಕ್ಕಿಂತ ಮೇಲಿನದು...

...ಭಾರತೀಯ ಚಿಂತನೆಯ ದೃಷ್ಟಿಯು ವಿಶಿಷ್ಟವಾಗಿದ್ದು, ಅದು ರೂಪದ ಒಳಹೊಕ್ಕು ನೋಡಬಲ್ಲದು, ಬಲವನ್ನು ಒಳಹೊಕ್ಕು ನೋಡಬಲ್ಲದು, ಹಾಗೂ ಎಲ್ಲದರಲ್ಲೂ ಆತ್ಮಕ್ಕಾಗಿ ಹುಡುಕಾಟ ನಡೆಸಬಲ್ಲದು. ಭಾರತೀಯ ಮನಸ್ಸು ಜೀವನದಲ್ಲಿ ವಿಶಿಷ್ಟವಾಗಿ ಅಸಂತೃಪ್ತಿಯಿಂದಿದ್ದು, ಎಲ್ಲವೂ ಸ್ಫುಟವಾಗಿರದು ಎಂದು, ತೃಪ್ತಿಯು ಪೂರ್ಣವಾಗಿ ಸಿಗದಿದ್ದರೆ, ಆತ್ಮಸತ್ಯವು ಗೋಚರಿಸದಿದ್ದರೆ ಅರ್ಧ ತೃಪ್ತವಾಗದು ಎಂದು ಅರಿತಿದೆ. ಪ್ರಪಂಚದ ಬಗ್ಗೆ ಭಾರತದ ಕಲ್ಪನೆ ಹಾಗೂ ಜೀವನದ ಬಗ್ಗೆ ಕಲ್ಪನೆ ಬಾಹ್ಯ ಸ್ವರೂಪದ್ದಲ್ಲ, ಅದು ಮಾನಸಿಕವಾದದ್ದು ಮತ್ತು ಆಧ್ಯಾತ್ಮಿಕವಾದದ್ದು. ಚೇತನವು, ಆತ್ಮವು, ಪ್ರಜ್ಞೆಯು ಜೀವವಿಲ್ಲದ ವಸ್ತುವಿಗಿಂತ ಅಪ್ರಜ್ಞಾವಸ್ಥೆಗಿಂತ ದೊಡ್ಡದು ಮಾತ್ರವಲ್ಲ, ಆದರೆ ಈ ಕೆಳಸ್ತರದ ವಸ್ತುಗಳನ್ನು ಅದು ಹುಟ್ಟುಹಾಕುತ್ತದೆ. ಎಲ್ಲಾ ಬಲವೂ ಶಕ್ತಿಯೇ ಅಥವಾ ರಹಸ್ಯವಾದ ಆತ್ಮನ ದಾರಿ. ಈ ಪ್ರಪಂಚವನ್ನು ನೆಲೆ ನಿಲ್ಲಿಸುವ ಬಲವು ಪ್ರಜ್ಞಾವಂತಿಕೆ ಹಾಗೂ ಪ್ರಕೃತಿಯು ಅದರ ಕ್ರಿಯಾತ್ಮಕ ಶಕ್ತಿಯ ಯಂತ್ರ. ವಸ್ತುವೇ ದೇಹವಾಗಿದ್ದು, ಅದರ ಒಳಗೆ ಪ್ರಜ್ಞಾಶಕ್ತಿಯು ಕುಳಿತಿದೆ. ಹಾಗೆಯೇ ವಸ್ತುವಿಂದಾದ ಈ ಪ್ರಪಂಚವು ಆತ್ಮದ ಚಲನಾತ್ಮಕ ರೂಪವಾಗಿದೆ. ಮನುಷ್ಯ ತಾನೇ ಒಂದು ಜೀವನವಲ್ಲ. ವಸುವಿನಿಂದ ಹುಟ್ಟುವ ಮನಸ್ಸು ಎಂಬ ಶಕ್ತಿಯು ಹೊರಪ್ರಕೃತಿಯ ಅಡಿಯಾಳಾಗಿದೆ. ಆದರೆ ಆತ್ಮವು ಈ ದೇಹವನ್ನು ಜೀವನವನ್ನು ಉಪಯೋಗಿಸಿಕೊಳ್ಳುತ್ತದೆ. ಈ ಬದುಕಿನಲ್ಲಿ ನಂಬಿಕೆಯನ್ನು ಅರಿಯುವುದು ಈ ತೆರನಾಗಿ, ಜೀವಿಸುವುದು ಈ ತೆರನಾಗಿ, ಉನ್ನತ ಪ್ರಯತ್ನದ ವಿಜ್ಞಾನ ಹಾಗೂ ಪ್ರಯೋಗ. ಜೀವಕ್ಕೆ ವಸ್ತುವಿಗೆ ಅಂಟಿಕೊಂಡಿರುವ ಮನಸ್ಸಿನಿಂದ ದೂರವಾಗುವ ಪ್ರಯತ್ನ, ಈ ಪ್ರಯತ್ನದಿಂದ ಆಧ್ಯಾತ್ಮಿಕ ಪ್ರಜ್ಞೆಯನ್ನು ಪಡೆಯುವುದು, ಇದು ಭಾರತೀಯ ಸಂಸ್ಕೃತಿ. ಇದೇ ಭಾರತೀಯ ಆಧ್ಯಾತ್ಮಿಕ ಚಿಂತನೆಯಲ್ಲಿ ಬರುವ ಅಂಶ. ಇದು ಯೂರೋಪಿನ ಚಿಂತನೆಗಿಂತ ಭಿನ್ನವಾದದ್ದು. ಯೂರೋಪು ಕ್ರಿಶ್ಚಿಯನ್ ಜೀವನ ಪ್ರಜ್ಞೆಗೆ ನೀಡಿದ ಕೊಡುಗೆಗಿಂತ ಭಿನ್ನವಾದದ್ದು. ಇದರರ್ಥ ಭಾರತೀಯ ಸಂಸ್ಕೃತಿಯು ಜೀವನಕ್ಕೆ ಹತ್ತಿರವಿಲ್ಲ ಎಂದೇನಲ್ಲ; ಭೌತಿಕ ಸಂತೃಪ್ತಿಯ ಕಡೆ ತನ್ನ ದೃಷ್ಟಿಯನ್ನು ಹರಿಸುವುದಿಲ್ಲ ಎಂದೇನಲ್ಲ. ಬಾಳ್ವೆಯ ನೈಜ ರೂಪವನ್ನು ಕಡೆಗಣಿಸುತ್ತದೆ ಎಂದೇನಲ್ಲ. ಒಂದು ವೇಳೆ ಇಂತಹ ದೃಷ್ಟಿ ಇದ್ದಿದ್ದೇ ಆದರೆ ಮನುಷ್ಯನ ಪ್ರಯತ್ನಕ್ಕೆ ಸ್ಫೂರ್ತಿಯನ್ನು, ಶಕ್ತಿಯನ್ನು ನೀಡುತ್ತಿರಲಿಲ್ಲ. ಈ ದೃಷ್ಟಿಯಲ್ಲಿ ನೋಡಿದಾಗ ವಸ್ತು,

ಮನಸ್ಸು, ಜೀವನ, ಕಾರಣ, ರೂಪ– ಇವು ಆತ್ಮದ ಶಕ್ತಿಯೇ ಹೊರತು, ಅವು ತಮ್ಮದೇ ಅಸ್ತಿತ್ವವನ್ನು ಹೊಂದಿರುವುದಿಲ್ಲ. ಉಪನಿಷತ್ ಹೇಳುತ್ತದೆ– ಆತ್ಮಾರ್ಥ– ಎಂದರೆ ಆತ್ಮಕ್ಕಾಗಿ ಅವೆಲ್ಲ ಬದುಕಿವೆ. ಇದು ಈ ವಸ್ತುವಿಷಯಗಳ ಬಗ್ಗೆ ಇರುವ ಭಾರತೀಯ ಅಭಿಪ್ರಾಯ. ಹಾಗೆಂದು ಅವುಗಳು ಮೌಲ್ಯವನ್ನು ಕಳೆದುಕೊಂಡವು ಎಂದೇನಲ್ಲ. ಅದರ ಬದಲು ಅದರ ಮಹತ್ತ್ವ ನೂರು ಪಟ್ಟು ಹೆಚ್ಚುತ್ತದೆ. ರೂಪ ಮತ್ತು ದೇಹದ ಪ್ರಾಮುಖ್ಯತೆ ಅವು ಆತ್ಮದ ಜೊತೆ ಮಿಳಿತವಾಗಿದೆ ಎಂದಾಗ, ಅದಕ್ಕೆ ಬೆಂಬಲ ನೀಡುವ ಕೆಲಸ ಮಾಡುತ್ತವೆ ಎಂದಾಗ ಮಾತ್ರ. ಪ್ರಾಚೀನ ಭಾರತೀಯ ಆಲೋಚನೆಯಲ್ಲಿ ಮಾನವನ ಅಸ್ತಿತ್ವಕ್ಕೆ ತುಂಬಾ ಮಹತ್ತ್ವವಿದ್ದು, ನಮಗೆ ಗೊತ್ತಿರುವ ಅತಿ ಮಹತ್ತ್ವದ ವಿಷಯವಾಗಿತ್ತು. ಪುರಾಣಗಳು ಧೈರ್ಯವಾಗಿ ಹೇಳುತ್ತವೆ: ಸ್ವರ್ಗದಲ್ಲಿರುವ ದೇವತೆಗಳೂ ಸಹ ಭೂಮಿಯ ಮೇಲಿನ ಜೀವನಕ್ಕಾಗಿ ತಹತಹಿಸುತ್ತಿದ್ದರು. ನಮ್ಮ ಮನಸ್ಸಿನ, ನಮ್ಮ ಹೃದಯದ, ನಮ್ಮ ಜೀವನ ಶಕ್ತಿಯ, ನಮ್ಮ ದೇಹದ ಅಂತರಂಗದ ಸತ್ತ್ವವನ್ನು ಮೇಲಕ್ಕೆ ಎಳೆದು ತರುವುದರಲ್ಲಿ ಆತ್ಮಾನ್ವೇಷಣೆಗೆ ದಾರಿ ಸಿಕ್ಕಿ ಆತ್ಮವು ಅನಂತವಾದ ಶಕ್ತಿಯನ್ನು ಸ್ವಾತಂತ್ರ್ಯವನ್ನು ಪಡೆಯುತ್ತಿತ್ತು. ಯಾವಾಗ ಮನಸ್ಸು ಮತ್ತು ಹೃದಯ ಹಾಗೂ ತರ್ಕವು ಅತ್ಯುನ್ನತ ಮಟ್ಟವನ್ನು ಮುಟ್ಟುತ್ತವೊ, ಅವು ದೇಹದೊಂದಿಗಿನ ಜೀವನವನ್ನು ಮಿತಿಯನ್ನು ಮೀರಿ ಬೆಳಕು ಹಾಗೂ ಶಕ್ತಿ ಕಾಣುವತ್ತ ಕರೆದೊಯ್ಯುತ್ತದೆ. ವ್ಯಕ್ತಿಯ ಮನಸ್ಸು ವಿಶಾಲವಾಗಿ ವಿಶ್ವಪ್ರಜ್ಞೆಯನ್ನು ಅವರಿಸಿ, ಆಧ್ಯಾತ್ಮಿಕ ಮಹೋನ್ನತಿಯತ್ತ ಕರೆದೊಯ್ಯುತ್ತದೆ. ಈ ಭಾವನೆಗಳು ನಮ್ಮನ್ನು ಕುಗ್ಗಿಸುವ ಗುಡಿಸಿ ಹಾಕುವ ಭಾವನೆಗಳಲ್ಲ. ಇವು ಮನುಷ್ಯನ ಉತ್ತಮೋತ್ತಮ ಭಾವನೆಗಳಾಗಿದ್ದು, ಮನುಷ್ಯನನ್ನು ದೇವತಾಶಕ್ತಿಯ ಬಳಿ ಕರೆದೊಯ್ಯುತ್ತದೆ.

ಆತ್ಮವಿಕಾಸದಲ್ಲಿರುವ ಮಾನವ, ದೇವತಾರೂಪಿಯಾಗಲು ಸಾಧ್ಯ

...ಭಾರತೀಯ ಭಾವನೆಯಲ್ಲಿ ಮನುಷ್ಯ ಎಂದರೆ ಒಂದು ಆತ್ಮ. ಈ ಆತ್ಮಕ್ಕೆ ಒಂದು ಪರದೆ ಬಿದ್ದಿರುತ್ತದೆ. ಪರದೆ ಸರಿಸಿದಾಗ ಅದರ ಶಕ್ತಿ, ಆತ್ಮಾನ್ವೇಷಣೆ, ದೇವತಾರೂಪಿಯಾಗುವ ಸಾಧ್ಯತೆ ಕಂಡುಬರುತ್ತದೆ. ಪ್ರಕೃತಿಯ ಮೂಲಕ ಪ್ರಜ್ಞಾಪೂರ್ವಕವಾಗಿ ಬೆಳೆಯುತ್ತಿರುವ ಆತ್ಮಸ್ವರೂಪಿ. ಅತನೇ ದೇವತಾಸ್ವರೂಪಿ ಹಾಗೂ ಅನಂತ ಕಾಲದವರೆಗೆ ಇರುವವನು; ಆತನೇ ಭಗವಂತ ಎಂಬ ಸಾಗರದ ಎಂದೆಂದೂ ಉಕ್ಕಿ ಹರಿಯುತ್ತಿರುವ ತರಂಗ. ಭಗವಂತ ಎಂಬ ಅಗ್ನಿಯ ಆರದ ಬೆಂಕಿಯ ಕಿಡಿ. ಆತನ ಸತ್ಯಸ್ವರೂಪದಲ್ಲಿ ಭಗವದ್ ಪ್ರಭೆಯನ್ನು ಪ್ರದರ್ಶಿಸುವವನು. ಮನುಷ್ಯನೇ ಪೂಜಿಸುವ ದೇವತಾಶಕ್ತಿಗಳಿಗಿಂತ ಮಿಗಿಲಾದವನು. ಅತ ಮೊದಲ ನೋಟಕ್ಕೆ ಅರೆಮಾನವನಂತೆ ಅರೆಪ್ರಾಣಿಯಂತೆ ಕಾಣುವುದು ಆತನ ನಿಜರೂಪವಲ್ಲ

ಹಾಗೂ ಅವನು ಎಂದಿಗೂ ಅಲ್ಲ. ಆತನ ತೀರಾ ಅಂತರಂಗದ ಸತ್ತ್ವವು ಆಧ್ಯಾತ್ಮಿಕ ರೂಪವಾಗಿದೆ. ಅಥವಾ ಅನಂತದ ಒಂದು ಚಲನಾಪೂರ್ಣ ಭಾಗವಾಗಿದೆ. ಅದನ್ನು ಕಂಡುಹಿಡಿಯುವುದು ಹಾಗೂ ತನ್ನ ಹೊರರೂಪದ, ಕಣ್ಣಿಗೆ ಕಾಣುವ, ಪ್ರಾಕೃತಿಕ ಚಿಹ್ನೆಯನ್ನು ಮೀರಿ ನಡೆಯುವುದಕ್ಕೆ ಅವನೊಬ್ಬನಿಗೆ ಮಾತ್ರ ಈ ಭೂಮಿಯ ಮೇಲಿರುವ ಪ್ರಾಣಿ ಪ್ರಪಂಚದಲ್ಲಿ ಸಾಧ್ಯ. ಆತನಿಗೆ ಪರಮಾತ್ಮನ ದರ್ಶನ ಮಾಡುವ ಆಧ್ಯಾತ್ಮಿಕ ಶಕ್ತಿಯಿದೆ. ಮಾನವೀಯತೆಯ ಉನ್ನತ ಮಟ್ಟವನ್ನು ಮುಟ್ಟಲು ಸಾಧ್ಯವಿದೆ. ಇದು ಭಾರತೀಯ ಸಂಸ್ಕೃತಿ ನೀಡುವ ಮಾರ್ಗದರ್ಶನ. 'ನ ಯತ್ರ ಪ್ರಕೃತೋ ಜನಾಃ' ಎಂಬಂತೆ ಜನಸಾಮಾನ್ಯರು ವಿಶೇಷವಾಗಿ ಪಾಲಿಸುತ್ತ ಬಂದಿರುವ ಜೀವನ ಮಾದರಿಯಿಂದ ಭಿನ್ನವಾಗಿ ಆತ ಮುಕ್ತನಾಗಬಹುದು, ಸಿದ್ಧನಾಗಬಹುದು ಎಂದು ತಿಳಿಸುವ ಭಾರತೀಯ ಸಂಸ್ಕೃತಿ ನೀಡುವ ಕೊಡುಗೆ. ಆತ ಇನ್ನೂ ಹೆಚ್ಚಿದನ್ನು ಮಾಡಬಲ್ಲ. ವಿಶ್ವಪ್ರಜ್ಞೆಗೆ ತೆರೆದುಕೊಂಡಾಗ ಆತನ ಆತ್ಮ ಭಗವಂತನ ಜೊತೆ ಸೇರಬಹುದು. ಒಂದು ಆತ್ಮ ವಿಶ್ವದಲ್ಲೆಲ್ಲ ಆವರಿಸಿರುವ ಪರಮಾತ್ಮನಲ್ಲಿ ಲೀನವಾಗಬಹುದು, ಇಲ್ಲ, ವಿಶ್ವವನ್ನೆ ಮೀರಿನಿಲ್ಲುವ ಪ್ರಭೆಯಾಗಬಹುದು, ಆಕಾಶವಾಗಬಹುದು. ಆತನ ಪ್ರಕೃತಿಯು ವಿಶ್ವಪ್ರಕೃತಿಯ ಜೊತೆ ಜಂಗಮ ರೂಪದಲ್ಲಿ ಸೇರಿಕೊಂಡು ವಿಶ್ವಬೆಳಕಿನ ಜೊತೆ ಸಮಾಹಿತಗೊಳ್ಳುತ್ತದೆ. ತನ್ನ ಅಹಂನಲ್ಲಿ ತಾನು ಕಳೆದುಹೋಗುವುದು ಆತನ ನಿಜರೂಪವಲ್ಲ. ಆತ ವಿಶ್ವ ಆತ್ಮನಾಗಬಲ್ಲ. ಪರಮಾತ್ಮನ ಜೊತೆ ಒಂದಾಗಿ ಎಲ್ಲರ ಜೊತೆ ಒಂದಾಗಿ ಆಗಬಲ್ಲ. ಇದೇ ಅವನ ಮಾನವೀಯತೆಯಲ್ಲಿ ಅಡಗಿ ಕುಳಿತಿರುವ ಉನ್ನತ ಜ್ಞಾನ ಹಾಗೂ ಶಕ್ತಿ. ಇದರಿಂದಾಗಿ ಅವನು ಪರಮತೆಯ್ನು ಪಡೆಯುವುದನ್ನು ಆಶಿಸಬಲ್ಲ. ಈ ಪರಮತೆಯನ್ನು ಪಡೆಯಲು ಆತ ಯಾವ ಮಾರ್ಗವನ್ನಾದರೂ ಅನುಸರಿಸಬಹುದು, ಪ್ರಾಕೃತಿಕ ಶಕ್ತಿಯನ್ನು ಉಪಯೋಗಿಸಬಹುದು, ಮನಸ್ಸು, ಹೃದಯ, ತರ್ಕ ಇವುಗಳೆಲ್ಲದರ ಕಾಂತಿದರ್ಶನದಿಂದ ಅವನು ಪ್ರಯತ್ನಿಸಬಹುದು. ಹೃದಯ ಹಾಗೂ ಅದರ ಅನಿಮಿತ ಪ್ರೀತಿ ಹಾಗೂ ಕರುಣೆಯ ಶಕ್ತಿಯಿಂದ, ಮನಸ್ಸು ಹಾಗೂ ಅದರ ಜಂಗಮ ಶಕ್ತಿಯ ಸಂಚಲನೆಯಿಂದ ಸರಿಯಾದ ದಿಕ್ಕಿನಲ್ಲಿ ಪ್ರಕೃತಿಯು ಹೊಂದಿರುವ ವಿಶ್ವದ ಒಳಿತಿಗಾಗಿ ಇರುವ ಹಸಿವಿನ ಶಕ್ತಿಯನ್ನು ಸೌಂದರ್ಯ ಪ್ರಜ್ಞೆಯ ಜೊತೆ ಸೇರಿಸಿಕೊಳ್ಳಲುಬಹುದು. ನಂತರ ಸಿಗುವ ಆನಂದ ಸೌಂದರ್ಯದರ್ಶನ ತನ್ನ ಅಂತರಾತ್ಮದ ಮೂಲಕ ಪರತತ್ತ್ವದ ನಿತಾಂತ ಶಾಂತಿಯನ್ನು ವೈಶಾಲ್ಯವನ್ನು ಆನಂದವನ್ನು ತೋರಿಸುತ್ತದೆ.

ಇದು ಆ ಆತ್ಮದ ಬಿಡುಗಡೆಯ ಅನುಭವ. ಭಾರತೀಯ ಚಿಂತನೆಯಲ್ಲಿ ವೈದಿಕ ಕಾಲದಿಂದ ನಡೆದು ಬಂದಿರುವ ದಾರಿ, ಇದು ಎಷ್ಟೇ ಕಠಿಣವಾದ ದಾರಿಯಾಗಿದ್ದಿರಬಹುದು, ಅದು ಸಾಧ್ಯವಾದ ದಾರಿ ಎಂದು ಗೋಚರಿಸಿದೆ.

ಅಷ್ಟೇ ಅಲ್ಲ. ಅಂತಹ ಕಠಿಣದ ದಾರಿ ಸುಲಭದ ದಾರಿಯಾಗಿ ಕಂಡಿದೆ. ಹತ್ತಿರವಿದೆ ಎಂದೆನಿಸಿದೆ. ಅಸಹಜ ಎಂದೆನಿಸಿದೆ. ಅದಕ್ಕೆ ಆಗಬೇಕಾದ್ದಿಷ್ಟೇ– ಆಧ್ಯಾತ್ಮದ ಸಾಕ್ಷಾತ್ಕಾರ ಕಂಡು ಹಿಡಿಯುವ ದಾರಿ. ಪಾಶ್ಚಾತ್ಯ ಧನಾತ್ಮಕ ಮನಸ್ಸು ಈ ತತ್ತ್ವವನ್ನು ಇದೆ ಎಂದಾಗಲೀ ಅರ್ಥವತ್ತಾದದ್ದು ಎಂದಾಗಲೀ ಒಪ್ಪಲು ಸಮ್ಮತಿಸಿಲ್ಲ. ಸಿದ್ಧರು, ಭಾಗವತರು, ಮುಕ್ತರು ಎಂಬ ಕಲ್ಪನೆಯ ಈ ಪಾಶ್ಚಾತ್ಯ ಮನಸ್ಸಿಗೆ ಒಪ್ಪಲು ಸಾಧ್ಯವಿಲ್ಲ. ಆ ಕ್ರಿಶ್ಚಿಯನ್ ಮನಸ್ಸಿಗೆ ಇದೊಂದು ಧಾರ್ಮಿಕ ಅಪರಾಧವಾಗಿ ಕಂಡುಬರುತ್ತದೆ. ಏಕೈಕ ಭಗವಂತನ ಪರಮಶಕ್ತಿಯ ಎದುರು ನಾವು ಕ್ರಿಮಿಗಳಿದ್ದಂತೆ ಎಂಬುದು ಪಾಶ್ಚಾತ್ಯ ನಂಬಿಕೆ. ಸಹಜವಾದ ಅಹಂ ಅನ್ನು ಅದು ಒಪ್ಪುತ್ತದೆ. ಭೂಮಿಯ ಜೊತೆ ಇರುವ ತಾರ್ಕಿಕ ಸಂಪರ್ಕಕ್ಕೆ ಹೆಚ್ಚಿನ ಮಹತ್ತ್ವ ನೀಡುತ್ತದೆ. ಆತ್ಮವಶೀಕರಣದ ಭ್ರಮಾಲೋಕದಲ್ಲಿ ಅದು ಇರುತ್ತದೆ. ಆದರೂ ಪ್ರಾಚೀನ ಯೂರೋಪಿನಲ್ಲಿ ಸ್ಟಾಯಿಕ್, ಪ್ಲೇಟೋ, ಪೈಥಾಗರಸ್‌ನ ಸಿದ್ಧಾಂತಗಳು ಆಧ್ಯಾತ್ಮಿಕ ಹಿನ್ನೆಲೆಯಲ್ಲಿ ಆಸೆ ಆಕಾಂಕ್ಷೆಗಳನ್ನು, ಕೆಲವು ಮಾಂತ್ರಿಕ ದಾರಿಯನ್ನು ಹಿಡಿಯಲು ಪ್ರಯತ್ನಿಸಿವೆ. ಅದು ಈಗ ಮತ್ತೆ ಪಾಶ್ಚಾತ್ಯ ಕಲ್ಪನೆಯಲ್ಲಿ ಮನೆ ಮಾಡಿಕೊಂಡಿದೆ. ಆದರೆ ಜೀವನದ ವಿಷಯದಲ್ಲಿ ಅಲ್ಲ. ಕಾವ್ಯದ ರೂಪದಲ್ಲಿ. ಥಿಯಾಸಫಿಯಂತಹ ಚಿಂತನೆಯ ರೂಪದಲ್ಲಿ. ಈ ಥಿಯಾಸಫಿಯು ಪ್ರಾಚೀನ ಹಾಗೂ ಪೌರ್ವಾತ್ಯ ತತ್ತ್ವಗಳಿಂದ ಪ್ರಭಾವಿತವಾಗಿದೆ. ವಿಜ್ಞಾನ, ತತ್ತ್ವಶಾಸ್ತ್ರ ಹಾಗೂ ಧರ್ಮ ಇಂದೂ ಅದನ್ನು ಭ್ರಮೆಯೆಂದು ಭಾವಿಸಿದೆ. ಕನಸು ಎಂಬಂತೆ ತುಚ್ಛೀಕರಿಸಿದೆ. ನರಕಸದೃಶವಾದ ವಿಷಯವಾಗಿ ತಿರಸ್ಕರಿಸಿದೆ. ಭಾರತೀಯ ಸಂಸ್ಕೃತಿಯು ಈ ಜಂಗಮ ತತ್ತ್ವವನ್ನು ತನ್ನದಾಗಿಸಿಕೊಂಡು ಅದಕ್ಕೊಂದು ಆಸೆಯ ರೂಪವನ್ನಿತ್ತು, ಅದಕ್ಕೊಂದು ಜೀವಂತ ಹಾಗೂ ಪ್ರಾಯೋಗಿಕ ರೂಪವನ್ನು ನೀಡಿ, ಈ ಆಧ್ಯಾತ್ಮದ ದಾರಿಗೆ ಸರಿಯಾದ ದಾರಿಯನ್ನು ಹುಡುಕಲು ಪ್ರಯತ್ನಿಸಿದೆ. ಭಾರತೀಯ ಸಮಾಲೋಚನೆಯು ಈ ಹಿರಿಯ ವಿಷಯವನ್ನು ಎತ್ತರದ ಗುರಿಯನ್ನಾಗಿಸಿಕೊಂಡಿದೆ. ವಿಶ್ವದ ಆಧ್ಯಾತ್ಮಿಕ ಗುರಿಯನ್ನು ಆತ್ಮದ ಗುರಿಯನ್ನಾಗಿ ಪರಿಗ್ರಹಿಸಿ ಪ್ರತಿಯೊಬ್ಬ ಮಾನವನಿಗೂ ಅದರ ದರ್ಶನವನ್ನು ಮಾಡುವ ಇಚ್ಛೆ ಹೊಂದಿದೆ.

ಆತ್ಮ ವಿಕಾಸ : ಜೀವನದ ಶ್ರೀಮಂತಿಕೆಯ ಹಾಗೂ ಶುದ್ಧತೆಯ ಮೂಲಕ

...ಭಾರತೀಯ ಆಲೋಚನೆಯ ಪ್ರಕಾರ ಸಾಮಾನ್ಯ ಮಾನವ ಜೀವನವು ತನ್ನ ಗುರಿಯನ್ನು ಹೊಂದಲು ಪ್ರಜ್ಞಾಪೂರ್ವಕ ಪ್ರಯತ್ನ ಮಾಡಲೇಬೇಕು ಎಂಬುದನ್ನು ಅರಿತಿದೆ. ತನ್ನ ಶಕ್ತಿಯನ್ನು ಬೆಳೆಸಲು ಜ್ಞಾನಾರ್ಜನೆ ಮಾಡಬೇಕು; ತನ್ನ ರೂಪಗಳನ್ನು ಸೂಕ್ಷ್ಮವಾಗಿ ನೋಡಲು, ಅರಿಯಲು, ಆಳವಾಗಿ ನೋಡಬೇಕು; ಅದರ ಮೌಲ್ಯವನ್ನು ಅರಿತು, ಅಳವಡಿಸಿಕೊಂಡು, ಜೀವಿಸಬೇಕು; ಅದರದೇ

ಹಂತದಲ್ಲಿ ಅದರ ಸಂತೋಷಗಳನ್ನು ಪಡೆಯಬೇಕು. ಅದಾದನಂತರವಷ್ಟೇ ಆತ್ಮಸ್ಥಿತಿಯ ಬಗ್ಗೆ, ವಿಪರೀತ ಸ್ಥಿತಿಯ ಬಗ್ಗೆ ತಿಳಿಯಲು ಸಾಧ್ಯ. ಮನುಷ್ಯನ ಎದುರು ತೆರೆದುಕೊಳ್ಳುವ ಶುದ್ಧ ಆಧ್ಯಾತ್ಮವು ನಿಧಾನವಾಗಿ ಸಹನೆಯಿಂದ ನಡೆಸಿದ ಜೀವನ ಹಾಗೂ ಪ್ರಕೃತಿಯ ಕಿರೀಟವಿದ್ದಂತೆ. ಈ ಆಧ್ಯಾತ್ಮದ ಪ್ರಯಾಣದಲ್ಲಿ ನಿಧಾನವಾಗಿ ಕ್ರಮಿಸುವ ಪ್ರಗತಿಯು ಭಾರತೀಯ ಪುನರ್ಜನ್ಮದ ತತ್ತ್ವಕ್ಕೆ ಕಾರಣವಾಗಿದೆ. ‘ಚೇತನಾಃ ಅಚೇತನಸು’ ಎಂಬ ತತ್ತ್ವವು ಹೀಗೆ ಅಚೇತನಗಳಿಂದ ಚೇತನಗಳಾಗಿ ಪರಿವರ್ತಿತವಾಗುವ ಅಸಂಖ್ಯಾತ ಆತ್ಮಗಳ ಪ್ರಜ್ಞಾಪೂರ್ವಕ ಪಯಣವಾಗಿದೆ. ನೂರು ಸಾವಿರ ಮಾತ್ರವಲ್ಲ ಕೋಟ್ಯಂತರ ಜೀವಿಗಳು ಹೀಗೆ ಮಾನವನ ದೈವೀಕ ಜೀವನದಲ್ಲಿ ಸೇರಿಹೋಗುತ್ತವೆ. ಪ್ರತಿಯೊಂದು ಜೀವನವೂ ಮನುಕುಲವನ್ನು ಹಿಂದೆ ಅಥವಾ ಮುಂದಕ್ಕೆ ತೆಗೆದುಕೊಂಡು ಹೋಗುವ ಹಂತ. ಆತನು ಜೀವನದಲ್ಲಿ ನಡೆಸುವ ಕ್ರಿಯೆ, ಜೀವನದಲ್ಲಿ ಆತನ ಇಚ್ಛೆ, ತನ್ನ ಜೀವನವನ್ನು ನಿರ್ದೇಶಿಸುವ ಆಲೋಚನೆಗಳು ಹಾಗೂ ತಿಳುವಳಿಕೆ, ಇವು ಆತ ತನ್ನ ಈಗಿನ ಸ್ಥಿತಿಯನ್ನು ಮುಂದೇನಾಗಬೇಕು ಎಂಬುದನ್ನು ತೋರಿಸುವ ಯೋಜನೆ– ‘ಯಥಾ ಕರ್ಮ ಯಥಾ ಶ್ರುಕತಮ್’.

ಈ ನಂಬಿಕೆಯು ಆತ್ಮದ ಕ್ರಮವಾದ ವಿಕಾಸವನ್ನು, ಅಂತಿಮ ಪರಿಪೂರ್ಣತೆಯನ್ನು ಅಥವಾ ದೈವೀ ಅನುಭೂತಿಯನ್ನು ಹಾಗೂ ಮಾನವ ಜೀವನವು ಅದರ ಮೊದಲ ಗುರಿಯಾಗಿರುವುದನ್ನು, ಮತ್ತೆ ಪದೇ ಪದೇ ಆಗಿ ಬಂದ ಅವಕಾಶವೆಂಬುದನ್ನು, ಭಾರತೀಯ ಜೀವನದ ಗುರಿಯಾಗಿ ತಿಳಿಯುತ್ತದೆ. ಇದು ನಮ್ಮ ಜೀವನಕ್ಕೆ ಮೇಲ್ಮುಖವಾದ ವೃತ್ತಾಕಾರವಾದ ಏರಿಕೆಯನ್ನು ನೀಡುತ್ತದೆ. ಈ ದೀರ್ಘವಾದ ಮೇಲ್ಮುಖ ಪ್ರಯಾಣದಲ್ಲಿ ಮಾನವ ಕ್ರಿಯೆಗಳು, ಮಾನವ ಜ್ಞಾನ, ಮಾನವೀಯ ಭಾವನೆಗಳು ತುಂಬಿರುತ್ತವೆ. ಅದರೊಳಗೆ ಪ್ರಾಪಂಚಿಕ ಗುರಿಗಳಿಗೆ, ಇಚ್ಛೆಗಳಿಗೆ ಅವಕಾಶವಿರುತ್ತದೆ; ಈ ಏರಿಕೆಯೊಳಗೆ ಎಲ್ಲಾ ರೀತಿಯ ಮಾನವೀಯ ಗುಣಗಳಿಗೆ ಪ್ರಕೃತಿಗಳಿಗೆ ಅವಕಾಶವಿರುತ್ತದೆ. ಅದೇ ಪ್ರಪಂಚದ ಆತ್ಮಗಳು ಅನೇಕ ರೂಪಗಳನ್ನು ಪಡೆಯುತ್ತವೆ ಹಾಗೂ ಅನೇಕ ವಿಧವಾದ ಲೀಲೆಗೆ ಕಾರಣವಾಗುತ್ತವೆ. ಎಲ್ಲವೂ ಸೇರಿ ನಮ್ಮ ಒಟ್ಟು ಅನುಭವದ ಅಂಗವಾಗುತ್ತದೆ. ಪ್ರತಿಯೊಂದಕ್ಕೂ ತನ್ನದೇ ಆದ ಪ್ರಾಕೃತಿಕ ಅಥವಾ ನೈಜ ನ್ಯಾಯಗಳಿರುತ್ತವೆ. ಅವು ಅಸ್ತಿತ್ವದಲ್ಲಿ ಇರುವುದಕ್ಕೆ ಕಾರಣವಿರುತ್ತದೆ. ಜೀವನದ ಆಟದಲ್ಲಿ ಪ್ರತಿಯೊಂದಕ್ಕೂ ಅರ್ಥವಿರುತ್ತದೆ. ಇಂದ್ರಿಯ ತೃಪ್ತಿಯ ವಿಷಯವನ್ನು ಇಲ್ಲಿ ನಿವಾರಿಸಲಾಗಿಲ್ಲ. ಅದಕ್ಕೆ ಕೊಡಬೇಕಾದ ಪ್ರಾಮುಖ್ಯ ಅದಕ್ಕೆ ಕೊಡಲಾಗಿದೆ. ಆತ್ಮದ ಕ್ರಿಯೆಯ ಆವಶ್ಯಕತೆಯನ್ನು ಹಾಗೂ ವೀರ್ಯವನ್ನು ಕಡಿಮೆಗೊಳಿಸಲಾಗಿಲ್ಲ. ಕ್ರಿಯಾತ್ಮಕವಾಗಿ ಆ ದಿಶೆಯಲ್ಲಿ ಮಾನವ ಮಾಡಬಹುದಾದ್ದೆಲ್ಲವನ್ನೂ ಪ್ರಚೋದಿಸಿದೆ. ಜ್ಞಾನವನ್ನು ಪಡೆಯಲು ನೂರು ದಾರಿಗಳಿದ್ದರೆ, ಅವುಗಳೆಲ್ಲಕ್ಕೂ ಚಲನೆಯ ಸ್ವಾತಂತ್ರ್ಯವನ್ನು

ನೀಡಲಾಗಿದೆ. ಭಾವನೆಗಳನ್ನು ನಿವೇದಿಸಿಕೊಳ್ಳುವುದಕ್ಕೆ ಅವಕಾಶ ನೀಡಲಾಗಿದೆ. ಅದೆಷ್ಟರ ಮಟ್ಟಿಗೆ ನಾಗರಿಕವಾಯಿತೆಂದರೆ ಅದು ದೇವಸನ್ನಿಧಿಗೆ ಯೋಗ್ಯವಾಗಿತ್ತು. ಸೌಂದರ್ಯದ ಉಪಾಸನೆಯನ್ನು ಎಷ್ಟು ಉನ್ನತವಾಗಿ ತೆಗೆದುಕೊಂಡು ಹೋಗಲಾಯಿತೆಂದರೆ ಅತ್ಯುಚ್ಚ ಮಟ್ಟದ ರೂಪವನ್ನು, ಜೀವನದ ಸೂಕ್ಷ್ಮ ವಿಷಯುಗಳನ್ನು ವಿವರಿಸಲಾಯಿತು. ಭಾರತೀಯು ಸಂಸ್ಕೃತಿಯು ನಿರೂಪಗೊಳ್ಳುವುದಕ್ಕಾಗಲೀ, ಶ್ರೀಮಂತನಾದ ಸಂಸ್ಕೃತಿಯನ್ನು ಬಡಸಂಸ್ಕೃತಿ ಎಂದು ಬಿಂಬಿಸಲಾಗಲೀ ಪ್ರಯತ್ನಿಸಲಿಲ್ಲ. ಪ್ರಕೃತಿಯ ಕ್ರಿಯೆಗಳನ್ನು ಕುರೂಪಗೊಳಿಸುವ ಪ್ರಯತ್ನ ನಡೆಯಲಿಲ್ಲ. ಅದಕ್ಕೆ ಬದಲು ಸಾಮರಸ್ಯ ಮತ್ತು ಆಡಳಿತದ ನಿಯಮಗಳಿಗೆ ಅನುಸಾರವಾಗಿ ಅವುಗಳು ತಮ್ಮ ಅಂತಿಮ ಎಲ್ಲೆಯನ್ನು ಮುಟ್ಟುವವರೆಗೂ ಅವಕಾಶ ನೀಡಲಾಯಿತು. ಕೆಲವೊಮ್ಮೆ ಅತಿರೇಕವೇನೋ ಎನ್ನಿಸುವಷ್ಟು ಮನುಷ್ಯನಿಗೆ ತನ್ನ ಆಳವನ್ನು ಮುಟ್ಟುವುದಕ್ಕೆ ಅನುಭವಿಸುವುದಕ್ಕೆ ಅವಕಾಶ ನಿರ್ಮಿಸಲಾಯಿತು. ಆತನ ಗುಣಕ್ಕೆ ತಕ್ಕಂತೆ ಕ್ರಿಯೆಯನ್ನು ವೀರ್ಯವನ್ನು ಮಾಡಲು, ತನ್ನ ಜೀವನವನ್ನು ಸೌಂದರ್ಯ ಹಾಗೂ ಸಂತೋಷದಿಂದ ತುಂಬಲು ಪ್ರೇರೇಪಿಸಲಾಯಿತು. ಭಾರತೀಯ ಜೀವನದ ಈ ಮಹತ್ತ್ವದ ಅಂಶಗಳು ಮಹಾಕಾವ್ಯಗಳಲ್ಲಿ ಪ್ರತಿಬಿಂಬಿತವಾಗಿವೆ.

...ಆದರೆ ಸಂಸ್ಕೃತಿಯ ನಿರಾಳವಾದ ಅಂಶದಲ್ಲಿ ಶ್ರೀಮಂತನಾಗುವುದು, ವಿಶಾಲವಾಗುವುದು, ಜೀವನವನ್ನು ವೈಭವೀಕರಿಸುವುದು ಸಹಜವೇ ಆದರೂ, ಅದು ಪ್ರಧಾನಶಕ್ತಿಗಳಿಗೆ ಮಾರ್ಗದರ್ಶಿ ನಿಯಮಗಳನ್ನು ಹಾಕುವಂತಿರಬೇಕು. ಅವುಗಳನ್ನು ಮೌಲಿಕ ಹಾಗೂ ತಾರ್ಕಿಕ ವಿಶ್ಲೇಷಣೆಗೆ ಗುರಿಪಡಿಸಿ ಅವುಗಳ ಸಹಜವಾದ ಸೂತ್ರಗಳಿಂದ ದೂರವಾಗಿ ಕರೆದುಕೊಂಡು ಹೋಗಿ ಆಧ್ಯಾತ್ಮಿಕ ಸ್ವಾತಂತ್ರ್ಯ, ಶುದ್ಧತೆ ಹಾಗೂ ಮಹತ್ತ್ವದ ಪರಿಚಯ ಮಾಡಿಕೊಡಬೇಕು. ಪ್ರಾಚೀನ ಭಾರತೀಯ ಸಭ್ಯತೆಯ ವಿಶೇಷತೆ ಏನಾಗಿತ್ತೆಂದರೆ ಅದು ಈ ದಿಕ್ಕಿನಲ್ಲಿ ಕೆಲಸ ಮಾಡಿಸುವ ಶಕ್ತಿಯನ್ನು ಹೊಂದಿತ್ತು. ಅದು ಹೊಂದಿದ್ದ ಅಗಾಧವಾದ ಜ್ಞಾನ, ಉನ್ನತಮಟ್ಟದ ಸೂಕ್ಷ್ಮ ಕುಶಲಗಾರಿಕೆ, ಅದು ಇವುಗಳ ಆಧಾರದ ಮೇಲೆ ಸಮಾಜವನ್ನು ಹಾಗೂ ವೈಯಕ್ತಿಕ ಜೀವನವನ್ನು ನಡೆಸುವುದನ್ನು, ಪ್ರಚೋದಿಸುವುದನ್ನು ಹಾಗೂ ಮಾರ್ಗದರ್ಶಿ ನಿಯಮಗಳನ್ನು ನೇಮಿಸುವುದನ್ನು ಹಾಗೂ ಎಲ್ಲವನ್ನೂ ಅಂತಿಮ ಗುರಿಯನ್ನು ಪಡೆಯಲು ಮೀಸಲಾಗಿರಿಸುವುದನ್ನು ಕಾಣುತ್ತೇವೆ. ಅದು ತಾನು ತರಬೇತಿ ಕೊಡುತ್ತಿದ್ದ ಮನಸ್ಸಿಗೆ, ತನ್ನ ತಕ್ಷಣದ ಗುರಿಯನ್ನು ಮರೆಯದಂತೆ ತನ್ನ ಗುರಿಯನ್ನು ಜೀವನದ ಶಿಸ್ತನ್ನು ಆಧ್ಯಾತ್ಮದ ಶುದ್ಧತೆಯನ್ನು ಹಾಗೂ ಅನಂತದೆಡೆಗೆ ಪಯಣವನ್ನು ತನ್ನ ದೃಷ್ಟಿಯಿಂದ ದೂರವಿರಿಸಿರಲಿಲ್ಲ.

ಆಡಳಿತ ಮಾಡುವವರಾಗಲೀ, ಆಧ್ಯಾತ್ಮದಲ್ಲಿರುವವರಾಗಲೀ ಭಾರತೀಯರು ನಮ್ಮ ಇರುವಿಕೆಯ ಎರಡು ತಥ್ಯಗಳನ್ನು ನೆನಪಿನಲ್ಲಿಟ್ಟಿದ್ದರು. ಮೊದಲನೆಯದು ನಮ್ಮ ಬಾಳು ತನ್ನ ಅಭಿವೃದ್ಧಿಯ ಪಥದಲ್ಲಿ ಹಲವು ಹಂತಗಳನ್ನು ದಾಟಿ ಹೋಗುತ್ತದೆ. ಮಧ್ಯಮಧ್ಯದಲ್ಲಿ ಅದು ಕೆಲವು ಹಂತಗಳನ್ನು ದಾಟುವುದೇ ಆದರೂ, ಮೂಲವಾಗಿ ಪ್ರಗತಿಯು ಹಂತಹಂತವಾಗಿಯೇ ಆಗುತ್ತದೆ. ಜೊತೆಗೆ ಜೀವನವು ಸಂಕ್ಷಿಪ್ತವಾದದ್ದು. ಮನುಷ್ಯನ ಪ್ರಕೃತಿಯೂ ಸಂಕ್ಷಿಪ್ತವಾದದ್ದು. ಪ್ರತಿ ಜೀವನದಲ್ಲೂ ಮನುಷ್ಯನಿಗೆ ಈ ಸಂಕ್ಷಿಪ್ತತೆಯ ಅರಿವಾಗುತ್ತದೆ. ಹಾಗಾದಾಗ ಅವುಗಳನ್ನು ಒಂದು ನಿಯಮಬದ್ಧ ರೀತಿಯಲ್ಲಿ ಹಾಕಲು ಪ್ರಯತ್ನಿಸುತ್ತಾನೆ. ಆದರೆ ಪ್ರಾರಂಭಿಕ ಜೀವನದ ಚಲನೆಗಳು ಹೇಗಿರುತ್ತವೆ ಎಂದರೆ ಮನುಷ್ಯನ ಮನಸ್ಸಿನಲ್ಲಿ ಅವು ಸಹಜವಾಗಿ ಅಹಂಗೆ ಕಾರಣವಾಗುತ್ತವೆ. ಸ್ವಾರ್ಥ ಹಾಗೂ ಕಾಮೇಚ್ಛೆ– ಇವು ಮನುಷ್ಯನ ಮೂಲವಾದ ಕಾರಣಗಳು– ಕಾಮ ಮತ್ತು ಅರ್ಥ. ಭಾರತೀಯ ಸಂಸ್ಕೃತಿಯು ನಮ್ಮ ಪ್ರಕೃತಿಯ ಈ ಮೂಲಗುಣಕ್ಕೆ ವಿಶಾಲವಾದ ಹಾಸನ್ನು ನೀಡಿದೆ. ಇಂತಹ ಗುಣಗಳನ್ನು ಒಪ್ಪಿಕೊಳ್ಳಬೇಕು. ಹಾಗೂ ಅವುಗಳನ್ನು ವ್ಯವಸ್ಥಿತವಾಗಿ ಇಡಬೇಕು. ಅಹಂಪ್ರೇರಿತ ಜೀವನವನ್ನು ಜೀವಿಸಲೇಬೇಕು. ಹಾಗೂ ಮನುಷ್ಯನು ಬಾಳನ್ನು ತುಂಬು ಜೀವನದಿಂದ ಬಾಳಬೇಕು. ಆದರೆ ಈ ಹೇಳಿಕೆಯನ್ನು ಅನಿಯಂತ್ರಿತ ಕಾಮವಾಸನೆಗಳನ್ನು ತೃಪ್ತಿಪಡಿಸಲು ಉಪಯೋಗಿಸಬಾರದು. ಅದು ಏನಿದ್ದರೂ ಅಂತಿಮ ಆಧ್ಯಾತ್ಮದ ಒಳ್ಳೆಯದನ್ನು, ಆನಂದವನ್ನು ಅನುಭವಿಸಲು ಅವಕಾಶ ಮಾಡುವಂತಿರಬೇಕು. ಅಂತರಂಗದ ಅಥವಾ ಬಾಹ್ಯದ ಅರಾಜಕತೆ ಒಂದು ನಿಯಮವಾಗಬಾರದು. ಆತ್ಮ–ಇಚ್ಛೆ, ಹವ್ಯಾಸ, ಇಂದ್ರಿಯಾಕರ್ಷಣೆ, ಸ್ವ–ಇಚ್ಛೆ ಹಾಗೂ ಆಕಾಂಕ್ಷೆ ಇವುಗಳ ಆಧಾರದ ಮೇಲೆ ಸಹಜವಾಗಿ ಪೂರ್ಣಪ್ರಮಾಣದ ಜೀವನವನ್ನು ನಡೆಸುವ ನಿಯಮಗಳಾಗಬಾರದು. ಪಾಶ್ಚಾತ್ಯ ಚಿಂತನೆಯಲ್ಲಿ ಇಂತಹ ಸಾಧ್ಯತೆಯಿದೆ ಎಂಬುದು, ಇವೇ ನಿಜವಾದ ನಿಯಮಗಳು ಎಂಬಂತೆ ವಿವೇಚನೆ ನಡೆಸುವುದು ಕಂಡುಬಂದಿದೆ. ಆದರೆ ಇದು (ತಪ್ಪಾಗಿ 'ಪ್ಯಾಗಿನಿಸಂ' ಎಂದು ಕರೆಯಲಾಗಿದೆ. ಗ್ರೀಕ್ ಹಾಗೂ ಪ್ಯಾಗನ್ ಜನಾಂಗದಲ್ಲಿ ನ್ಯಾಯಕ್ಕೆ ಹಾಗೂ ಸಾಮರಸ್ಯಕ್ಕೆ ವಿಶೇಷವಾದ ಸ್ಥಾನಮಾನವಿದ್ದಿತು) ಭಾರತೀಯ ಮನಸ್ಸಿಗೆ ವಿಪರೀತವಾದದ್ದು. ಭಾರತವು ರೋಮ್, ಆಧುನಿಕ ಯೂರೋಪ್ ಅಥವಾ ಗ್ರೀಸ್‌ಗಿಂತ ಭಿನ್ನವಾಗಿ ಇಂದ್ರಿಯಗಳ ಅನುಭವವನ್ನು ಪಡೆದು, ಭೌತಿಕಜೀವನದ ಅನುಕೂಲಗಳನ್ನು ಸುಖಗಳನ್ನು ವಿಶೇಷವಾಗಿ ಎತ್ತಿಹಿಡಿಯುವ ಚಾರ್ವಾಕರ ಪಂಗಡವೇ ಭಾರತದಲ್ಲಿ ಹುಟ್ಟಿಕೊಂಡಿತ್ತು. ಆದರೆ ಈ ತತ್ತ್ವ ಜನರನ್ನು ತನ್ನ ಹಿಡಿತದಲ್ಲಿ ಇಟ್ಟುಕೊಳ್ಳಲಾಗಲೀ, ಒಂದು ಸಾಮ್ರಾಜ್ಯಾಧಿಪತ್ಯವನ್ನು ಕೈಯಲ್ಲಿ ಎತ್ತುಕೊಳ್ಳುವುದಕ್ಕಾಗಲೀ ಸಮರ್ಥವಾಗಲಿಲ್ಲ. ಒಂದು ಕಡೆ ಇಂತಹ ಸಿದ್ಧಾಂತವನ್ನು

ಒಪ್ಪಿಕೊಂಡು ಅದನ್ನು ಹೆಗ್ಗಳಿಕೆಯಿಂದ ಹೇಳಿಕೊಳ್ಳುವವರು ಇದ್ದರು ಎಂದಾದರೆ ಅವರನ್ನು ಅಸುರರು, ರಾಕ್ಷಸರು ಎಂದು ಕರೆಯಲಾಯಿತು. ಆತ್ಮದ ಬೃಹದಾಕಾರದ ತತ್ತ್ವವೇ ತನ್ನ ನೆಲೆಯಲ್ಲಿ ಜನಜೀವನಕ್ಕೆ ಬೇಕಾದ ನೀತಿ–ನಿಯಮಗಳನ್ನು ಹುಟ್ಟಿಹಾಕಿತ್ತು. ಮತ್ತೊಂದು ಇಂತಹದೇ ಶಕ್ತಿಯು ಧರ್ಮ. ಈ ಧರ್ಮವು ಸ್ವಾರ್ಥ, ಸ್ವ–ಇಚ್ಛೆ, ಆಸೆ–ಆಕಾಂಕ್ಷೆಗಳನ್ನು ಮೀರಿನಿಂತ ಶಕ್ತಿಯಾಗಿ ಬೆಳೆದಿತ್ತು.

ಧರ್ಮ : ಜೀವನದ ಸರಿಯಾದ ಧರ್ಮದ ವಿಕಾಸ

ಪಾಶ್ಚಾತ್ಯರಲ್ಲಿರುವಂತೆ ಧರ್ಮವು– ಕ್ರಿಯೆಯ ಧಾರ್ಮಿಕನ್ಯಾಯ ಹಾಗೂ ನಮ್ಮ ಪ್ರಕೃತಿಯ ಆಳವಾದ ನಿಯಮ– ಒಂದು ಗುಂಪಾಗಿ, ಪಂಗಡವಾಗಿ, ಮೌಲಿಕ ಹಾಗೂ ಸಾಮಾಜಿಕ ನಿಯಮಗಳನ್ನು ಪಾಲಿಸಲೇಬೇಕಾದ ವಿಷಯವಲ್ಲ. ಮನುಷ್ಯ ತಾನು ಬಾಳುವ ಬಾಳಿನಲ್ಲಿ ಕಾಣಬೇಕೆಂದು ಬಯಸುವ ಸತ್ಯ ಹಾಗೂ ಶುದ್ಧ ನ್ಯಾಯವು ಧರ್ಮದಲ್ಲಿದೆ. ಪ್ರತಿಯೊಂದಕ್ಕೂ ಒಂದು ಧರ್ಮವಿದೆ. ತನ್ನ ಪ್ರಕರತಿಗೆ ಅನುಸಾರವಾಗಿ ಜೀವನದ ಮೇಲೆ ಹೇರಲಾದ ಧರ್ಮವಿದೆ. ಆದರೆ ಧರ್ಮವು ಮನುಷ್ಯನಿಗೆ ಆ ಗುಂಪಿನ ಎಲ್ಲ ಸದಸ್ಯರ ಮೇಲೆ ಪ್ರಜ್ಞಾವಂತವಾಗಿ ವಿಧಿಸಲಾದ ನಿಯಮಗಳೇ ಆಗಿವೆ. ಧರ್ಮಕ್ಕೆ ಗೊತ್ತಾದ ಆದೇಶವಿದೆ. ಆದರೂ ಅದು ನಮ್ಮ ಪ್ರಜ್ಞೆಯಲ್ಲಿ ಬೇರೂರಿ ವಿಕಾಸ ಹೊಂದಿ ಹಲವು ಹಂತಗಳಲ್ಲಿ ಮೈತಾಳುತ್ತದೆ. ನಮ್ಮ ಪ್ರಕೃತಿಯ ಅತಿ ಉನ್ನತ ನಿಯಮಗಳನ್ನು ಹುಡುಕುವಾಗ ಮೌಲಿಕವಾಗಿ ಧರ್ಮವನ್ನು ಮೇಲಕ್ಕೆ ಕೊಂಡೊಯ್ಯುವುದನ್ನು ಕಾಣುತ್ತೇವೆ. ಎಲ್ಲಾ ಜನರು ಎಲ್ಲಾ ವಿಷಯಗಳಲ್ಲೂ ಒಂದು ಸಮಾನವಾದ, ಬದಲಾಯಿಸಲಾಗದ ನಿಯಮವನ್ನು ಪಾಲಿಸುವುದು ಕಷ್ಟವೇ ಸರಿ. ಜೀವನ ಎಷ್ಟು ಸಂಕಷ್ಟವೆಂದರೆ ಪ್ರವಚನ ಮಾಡುವವನು ಹೇಳುವ ಸಮಾನಧರ್ಮ ಕಂಡುಬರುವುದು ಕಷ್ಟ. ಪ್ರಕೃತಿಯಲ್ಲಿ ವ್ಯತ್ಯಾಸವಿರುತ್ತದೆ. ನಾವಿರುವ ಸ್ಥಿತಿ ಕೆಲಸ, ಇತ್ಯಾದಿಗಳು ತಮ್ಮದೇ ಆದ ಆದೇಶಗಳನ್ನು ನೀಡುತ್ತದೆ. ಅದರದೇ ಮಾನಕವೂ ಇರುತ್ತದೆ. ಅದರದೇ ಆದ ಗುರಿ, ದಾರಿ, ಜೀವನಮೌಲ್ಯ, ಆತ್ಮದ ಸಾರ, ಇವೆಲ್ಲವೂ ಒಬ್ಬರಿಗಿಂತ ಒಬ್ಬರಿಗೆ ಭಿನ್ನವಾಗಿರುತ್ತದೆ. ಪ್ರಗತಿಯ ಮಟ್ಟವಾಗಲೀ ಅಧಿಕಾರದ ವ್ಯಾಪ್ತಿಯಾಗಲೀ ಒಂದೇ ಆಗಿರುವುದಿಲ್ಲ. ಮನುಷ್ಯನು ಸಮಾಜಕ್ಕೋಸ್ಕರ ಹಾಗೂ ಸಮಾಜದಿಂದ ಬದುಕುತ್ತಾನೆ. ಪ್ರತಿ ಸಮಾಜಕ್ಕೂ ತನ್ನದೇ ಧರ್ಮವಿರುತ್ತದೆ. ವೈಯಕ್ತಿಕ ಜೀವನವನ್ನು ಈ ವಿಶಾಲವಾದ ಕಾನೂನಿನಡಿ ಗುರುತಿಸಿಕೊಳ್ಳಬೇಕಾಗುತ್ತದೆ. ಆದರೆ ಅದರಲ್ಲೂ ಸಮಾಜದೊಳಗೆ ವ್ಯಕ್ತಿಯ ಪಾತ್ರ ಆತನ ವ್ಯಕ್ತಿತ್ವ, ಆತನ ಅಗತ್ಯಗಳು, ಪ್ರಮಾಣ ಹಾಗೂ ಸ್ವಭಾವ ವ್ಯತ್ಯಾಸವಾಗಿದ್ದು ಅವುಗಳನ್ನು ಅನೇಕ ಹಂತಗಳಲ್ಲಿ ನೋಡಬೇಕಾಗುತ್ತದೆ.

ಸಾಮಾಜಿಕ ನ್ಯಾಯ, ಹಾಗಾಗಿ, ಈ ವ್ಯತ್ಯಾಸಗಳನ್ನು ಗುರುತಿಸುವಂತಿದ್ದು, ಎಲ್ಲರನ್ನು ಒಂದೇ ಅಚ್ಚಿನಲ್ಲಿ ನೋಡುವ ಹಠದ ಮನೋಧರ್ಮವನ್ನು ಬಿಡಬೇಕು. ಜ್ಞಾನದ ವ್ಯಕ್ತಿ, ಶಕ್ತಿಯ ವ್ಯಕ್ತಿ, ಸೃಷ್ಟಿಸುವ ಹಾಗೂ ಪರಿಗ್ರಹಿಸುವ ವ್ಯಕ್ತಿ, ಪುರೋಹಿತ, ವಿದ್ವಾಂಸ, ಕವಿ, ಕಲಾಕಾರ, ಆಳ್ವಿಕೆ ನಡೆಸುವವ, ಹೋರಾಡುವವ, ವ್ಯಾಪಾರೀ, ನೇಗಿಲಯೋಗಿ, ಕುಶಲಕರ್ಮಿ, ಕೆಲಸಗಾರ, ಸೇವಕ – ಇವರೆಲ್ಲ ಒಂದೇ ರೀತಿಯ ತರಬೇತಿಯನ್ನು ಪಡೆದಿರಲು ಸಾಧ್ಯವಿಲ್ಲ. ಅವರನ್ನು ಒಂದೇ ಮೂಸೆಯಲ್ಲಿ ಹುಯ್ಯಲು ಸಾಧ್ಯವಿಲ್ಲ. ಎಲ್ಲರೂ ಒಂದೇ ರೀತಿಯ ಜೀವನವನ್ನು ನಡೆಸಲು ಸಾಧ್ಯವಿಲ್ಲ. ಎಲ್ಲರನ್ನೂ ಕಾನೂನಿನ ಒಂದೇ ಚೌಕಟ್ಟಿನಲ್ಲಿ ಹಾಕಲು ಸಾಧ್ಯವಿಲ್ಲ. ಹಾಗೆ ಮಾಡಿದ್ದೇ ಆದರೆ, ಅದು ಅರ್ಥವಿಲ್ಲದ ಜ್ಯಾಮಿತಿಯ ಹಠವಾಗಿ ಜೀವನ ಎಂಬ ಸ್ಪಂದಿಸುವ ಸತ್ಯಕ್ಕಿಂತ ಭಿನ್ನವಾಗಿಬಿಡುತ್ತದೆ. ಪ್ರತಿಯೊಬ್ಬನಿಗೂ ಆತನದೇ ಆದ ಪ್ರಕೃತಿಯಿರುತ್ತದೆ. ಆ ಪ್ರಕೃತಿಗೆ ಸರಿಹೊಂದುವಂತಹ ನಿಯಮ ಒಂದಿರಬೇಕು. ಪ್ರತಿಯೊಬ್ಬನಿಗೂ ತನ್ನದೇ ಆದ ಕ್ರಿಯಾತ್ಮಕ ವರ್ತುಲವಿರುತ್ತದೆ. ಆ ವರ್ತುಲಕ್ಕೆ ಸರಿಹೊಂದುವಂತಹ ಆದರ್ಶಗಳು ನಿಯಮಗಳು ಇರಬೇಕು. ಎಲ್ಲಾ ಜೀವಿತ ಪ್ರಾಣಿಗಳಲ್ಲಿ ಕೆಲವು ಬುದ್ಧಿವಂತ ಹಾಗೂ ನಡವಳಿಕೆಗಳನ್ನು ಸರಿಯಾಗಿ ಅರ್ಥೈಸುವ ಹಾಗು ಬದುಕಿ ಬಾಳುವ ನಿಯಮವು ಇರಬೇಕು. ಅದೇ ಧರ್ಮದ ಆವಶ್ಯಕ ಭಾಗವಾಗುತ್ತದೆ. ನ್ಯಾಯವಲ್ಲದ ಇಚ್ಛೆ ಮತ್ತು ಸ್ವಾರ್ಥಪ್ರೇರಿತ ಭಾವಗಳು ಮನುಷ್ಯನ ವ್ಯವಹಾರವನ್ನು ನಿರ್ಧರಿಸಬಾರದು. ಇಚ್ಛೆ ಮತ್ತು ಸ್ವಾರ್ಥಪ್ರೇರಿತ ಭಾವಗಳು ತಮ್ಮ ಪ್ರಭಾವವನ್ನು ಬೀರಿದಾಗಲೂ ಜೀವನವನ್ನು ಮಾರ್ಗದರ್ಶಕ ರೂಪದಲ್ಲಿ ಕರೆದುಕೊಂಡು ಹೋಗುವ ದಾರಿ ಇರಬೇಕು. ಮೌಲ್ಯವಿರಬೇಕು, ಇಲ್ಲ ವಿಜ್ಞಾನವಿರಬೇಕು. ನಾವು ಕಾಣುವ ಸತ್ಯದ ಚೌಕಟ್ಟಿನಲ್ಲಿರುವ ಒಂದು ನಿಯಮವಿರಬೇಕು. ಮನುಷ್ಯನ ಭಿನ್ನತೆಯನ್ನು ಅರಿತು, ಆತನು ಮಾಡುವ ಕೆಲಸವನ್ನು ಅರಿತು, ಈ ವಿಶೇಷ ಧರ್ಮಗಳು ಉನ್ನತ ನಿಯಮ ಹಾಗೂ ಸತ್ಯದ ಹಿನ್ನೆಲೆಯಲ್ಲಿ ವಿಶ್ವಾತ್ಮಕ ಗುಣವನ್ನು ದರ್ಶಿಸಬೇಕು. ಇದೇ ಧರ್ಮ. ವಿಶೇಷ ವ್ಯಕ್ತಿಗೆ ವಿಶೇಷವಾದದ್ದು. ಪ್ರಗತಿಯ ಹಂತ, ಜೀವನದ ದಾರಿ ಅಥವಾ ವೈಯಕ್ತಿಕ ಕ್ರಿಯಾತ್ಮಕ ಕ್ಷೇತ್ರ, ಇವುಗಳೆಲ್ಲದರ ಸಮನ್ವಯವಾಗಿ ಎಲ್ಲರೂ ತಮ್ಮ ಜೀವನದಲ್ಲಿ ಸರಾಗವಾಗಿ ಪಾಲಿಸುವಂತಿರಬೇಕು.

ವಿಶ್ವದಲ್ಲಿ ಎಲ್ಲರೂ ಒಪ್ಪುವಂತಹ ಧರ್ಮವು ಭಾರತದ ದೃಷ್ಟಿಯಲ್ಲಿ ವಿಕಾಸವಾಗುತ್ತಿರುವ ಮನಸ್ಸು ಮತ್ತು ಆತ್ಮದ ಆದರ್ಶ ನಿಯಮ. ಅದು ಆತನ ಶಕ್ತಿ ಹಾಗೂ ಬಲವನ್ನು ವೃದ್ಧಿಸುವಂತೆ ಮಾಡುತ್ತದೆ. ಈ ರೀತಿ ವೃದ್ಧಿಸುವ ಬಲವು ಸಾಮರಸ್ಯಪೂರ್ಣವಾಗಿದ್ದು, ಮಾನವನ ಅತಿ ಎತ್ತರದ ಸ್ಥಾನವನ್ನು ಪಡೆದಿದೆ. ಭಾರತೀಯ ಆಲೋಚನೆಯಲ್ಲಿ ಹಾಗೂ ಜೀವನದಲ್ಲಿ ಇದು ಉತ್ತಮತೆಯ ಆದರ್ಶ–ಒಳ್ಳೆಯ ಮನುಷ್ಯನ ನಿಯಮ, ತನ್ನನ್ನೇ ತಾನು ಉನ್ನತ ಮಟ್ಟಕ್ಕೆ ಏರಿಸಿಕೊಳ್ಳುವ

ವ್ಯಕ್ತಿಯ ಶಿಸ್ತು, ಆರ್ಯ, ಶ್ರೇಷ್ಠ, ಸಜ್ಜನ, ಸಾಧು. ಈ ಆದರ್ಶವು ಕೇವಲ ನೈತಿಕ ತತ್ತ್ವವಾಗಿರಲಿಲ್ಲ, ಈ ತತ್ತ್ವವು ಪ್ರಧಾನವಾಗಿತ್ತು ಎಂಬುದನ್ನು ಒಪ್ಪಬಹುದಾದರೂ, ಅದು ಬುದ್ಧಿವಂತಿಕೆಯ, ಧಾರ್ಮಿಕ, ಸಾಮಾಜಿಕ, ಸೌಂದರ್ಯಪೂರ್ಣ, ಮನುಷ್ಯನ ಆದರ್ಶ ಅರಳುವ ವಿಷಯವಾಗಿತ್ತು. ಭಾರತೀಯ ತತ್ತ್ವ 'ಶ್ರೇಷ್ಠ'ದಲ್ಲಿ ಕಂಡುಬರುವ ವಿವಿಧ ಗುಣಗಳು 'ಆರ್ಯ' ಎನಿಸಿಕೊಂಡವು. ಹೃದಯದಲ್ಲಿರುವ ಸಹಾಯ ಮಾಡುವ ಗುಣ, ಪ್ರೀತಿ, ಕರುಣೆ, ಸಹನೆ, ಹೃದಯವೈಶಾಲ್ಯ; ಹಾಗೆ ಗುಣದಲ್ಲಿರುವ ಧೈರ್ಯ, ವೀರ್ಯ, ಶಕ್ತಿ, ನಿಷ್ಠೆ, ಸತ್ಯ, ಗೌರವ, ನ್ಯಾಯ, ನಂಬಿಕೆ, ಗೌರವ, ಶಿಸ್ತು, ಆಡಳಿತ ನಡೆಸುವ ಶಕ್ತಿ, ನಯವಿನಯ ಆದರೆ ಗಟ್ಟಿಯಾದ ಸ್ವಾತಂತ್ರ್ಯ ಹಾಗೂ ಅಹಂಭಾವ; ಇನ್ನೂ ಮನಸ್ಸಿನಲ್ಲಿ ಬುದ್ಧಿವಂತಿಕೆ ಹಾಗೂ ತಿಳುವಳಿಕೆ, ತಿಳಿಯಬೇಕೆಂಬ ಆಸೆ, ಎಲ್ಲಾ ಆಲೋಚನೆಗಳ ಅತ್ಯುತ್ತಮ ತಿಳುವಳಿಕೆ, ಕವಿತೆ, ಕಲೆ ಹಾಗೂ ಸೌಂದರ್ಯಕ್ಕೆ ಮುಕ್ತವಾಗಿರುವುದು; ಅಂತರಾಳದಲ್ಲಿ ಪ್ರಬಲವಾದ ಧಾರ್ಮಿಕ, ದೈವೀಗುಣ, ದೇವರ ಮೇಲೆ ಪ್ರೀತಿ, ಉನ್ನತಕ್ಕಾಗಿ ಆಸೆ ಪಡುವುದು, ಆಧ್ಯಾತ್ಮಿಕ ಪ್ರವೃತ್ತಿ; ಸಾಮಾಜಿಕ ಸಂಬಂಧಗಳಲ್ಲಿ ಹಾಗೂ ವ್ಯವಹಾರದಲ್ಲಿ ಎಲ್ಲಾ ಸಾಮಾಜಿಕ ಧರ್ಮಗಳನ್ನು ತಂದೆ, ಗಂಡ, ಸೋದರ, ಸಂಬಂಧಿ, ಸ್ನೇಹಿತ, ರಾಜ ಹಾಗೂ ಪ್ರಜೆ, ಯಜಮಾನ ಹಾಗೂ ಸೇವಕ, ಪುರೋಹಿತ, ಯೋಧ, ಕೆಲಸಗಾರ, ರಾಜನಾಗಲೀ ಋಷಿಯಾಗಲೀ, ಪಂಗಡದ ಸದಸ್ಯ ಅಥವಾ ಜಾತಿ; ಇದು 'ಆರ್ಯ' ಪದದ ಪೂರ್ಣ ಆದರ್ಶ– ಮೇಲ್ ಸ್ತರದಲ್ಲಿ ಬೆಳೆದ ವನರಾಜ ಪ್ರಕೃತಿ. ಈ ಆದರ್ಶವು ಪ್ರಾಚೀನ ಭಾರತೀಯ ದಾಖಲೆಗಳಲ್ಲಿ ದಾಖಲಾಗಿದೆ. ಎರಡು ದಶಶತಮಾನಗಳ ಈ ದಾಖಲೆಗಳು ಹಿಂದೂ ಮೌಲ್ಯಗಳ ಜೀವನಾಡಿಯಾಗಿವೆ. ಅವು ಆದರ್ಶ ಹಾಗೂ ತಾರ್ಕಿಕ ಮನಸ್ಸಿನ ಸೃಷ್ಟಿ, ಚೇತನಾಶಕ್ತಿ, ಆಳವಾದ ಧಾರ್ಮಿಕ ಅಭಿವ್ಯಕ್ತಿ, ಆದರ್ಶ ಮೌಲ್ಯಗಳು, ವ್ಯವಹಾರಚಾತುರ್ಯ, ದೃಢವಾದರೂ ಬಾಗಬಲ್ಲ ಗುಣವುಳ್ಳ, ಜೀವನದ ಕಷ್ಟಗಳಿಗೆ ಸಹನೆಯಿಂದ ನಡೆದುಕೊಳ್ಳುವ, ಜೀವನದ ದುರ್ಬಲತೆಗೆ ಸಹನೆಯುಳ್ಳ, ಆದರೆ ಸ್ವಶಿಸ್ತುವುಳ್ಳದ್ದಾಗಿವೆ. ಭಾರತೀಯ ಸಭ್ಯತೆಯ ಅಡಿಪಾಯದಲ್ಲಿ ಈ ನಿಲುಮೆಯಿದೆ. ಎಲ್ಲಾ ಸಾಂಸ್ಕೃತಿಕ ವಿಷಯಗಳಿಗೂ ಅದೇ ಮೂಲವಾಗಿದೆ.

ಆದರೆ ಇದು ಕೇವಲ ಅಡಿಪಾಯವಾಗಿತ್ತು. ಈ ಅಡಿಪಾಯವೇ ಮತ್ತೊಂದು ಉನ್ನತ ಸ್ತರದ ಜೀವನವನ್ನು ಆಧ್ಯಾತ್ಮದ ದೈವತಾಶಕ್ತಿಯಿಂದ ಮೇಲಾಗಿ ಕರೆದೊಯ್ಯುವ ಪ್ರಯತ್ನವಾಗಿತ್ತು. ಭಾರತೀಯ ಸಂಸ್ಕೃತಿಯು ಒರಟು ಪ್ರಾಣಿ ಜೀವನದ ಉದ್ದೇಶಗಳಾದ ಆಸೆ, ಸ್ವಾರ್ಥ ಮತ್ತು ಇಚ್ಛಾನುಪೂರ್ತಿಯನ್ನು ತನ್ನ ಕೀಳುಸ್ತರದಿಂದ ಮೇಲಕ್ಕೆತ್ತಲು ಧರ್ಮದ ಉನ್ನತ ಗುರಿಗಳನ್ನು ಅದರಲ್ಲಿ ಸಮಾವೇಶಗೊಳಿಸಿದ್ದು ದೊಡ್ಡ ಸಾಧನೆಯಾಗಿತ್ತು. ಆದರೆ, ಅದಕ್ಕೂ ಮಿಗಿಲಾದ ಉನ್ನತ ಧ್ಯೇಯ– ಈ ವಿಷಯದಲ್ಲಿ ಅದು ಅನನ್ಯವಾಗಿತ್ತು– ಈ ಉನ್ನತತಮ

ಜೀವನವನ್ನು ಮತ್ತೂ ಮೇಲೆತ್ತಿ ತನ್ನ ಸೀಮೋಲ್ಲಂಘನೆ ಮಾಡಿ, ಸ್ವಾತಂತ್ರ್ಯವನ್ನು ಗಳಿಸುವುದರತ್ತ ಕೇಂದ್ರೀಕೃತವಾಗಿತ್ತು. ಅದರಲ್ಲಿ ಆಧ್ಯಾತ್ಮಿಕ ಸ್ವಾತಂತ್ರ್ಯವನ್ನು ಮುಕ್ತಿ, ಮೋಕ್ಷ ಎಂದು ಹೆಸರಿಸಿತ್ತು. ನ್ಯಾಯ ಮತ್ತು ಅದನ್ನು ಪಾಲಿಸುವುದು ಮಾನವನ ಆದಿಯೂ ಅಲ್ಲ, ಅಂತ್ಯವೂ ಅಲ್ಲ. ನ್ಯಾಯದ ಆಚೆ ಪ್ರಜ್ಞೆಯ ಒಂದು ವಿಶಾಲವಾದ ಕ್ಷೇತ್ರವಿದ್ದು, ಅದನ್ನು ಹತ್ತಿದಾಗ ಆತ ಆಧ್ಯಾತ್ಮಿಕ ಸ್ವಾತಂತ್ರ್ಯದ ಮೇಲರಿಮೆಯನ್ನು ಸಾಧಿಸುತ್ತಾನೆ. ಸಾವಿನ ಚೌಕಟ್ಟಿನಲ್ಲಿರುವ ಮಾನವನ ಜೀವನಕ್ಕೆ ಅಮರತ್ವ, ಸ್ವಾತಂತ್ರ್ಯ, ದೈವತ್ವವನ್ನ ಸಾಧಿಸುವ ಅವಕಾಶವಿದೆ. ಪ್ರಾಚೀನ ಭಾರತೀಯ ಸಂಸ್ಕೃತಿಯ ಈ ಅತ್ಯುನ್ನತ ಗುರಿಯನ್ನು ಮನುಷ್ಯನ ಅಂತರಂಗದ ಆತ್ಮದ ಕಣ್ಣಿನ ಎದುರು ನಿತಾಂತವಾಗಿ ಹಿಡಿದು ನಿಂತಿತ್ತು. ಹಾಗೆಯೇ ಆ ಗುರಿಯತ್ತ ಸಾಗಲು ಸತತವಾಗಿ ಸ್ಫೂರ್ತಿಯನ್ನು ನೀಡಿತ್ತು. ವ್ಯಕ್ತಿಯ ಇಡೀ ಜೀವನವು ಈ ಗುರಿಯಿಂದಾಗಿ ಉನ್ನತ ಮಟ್ಟವನ್ನು ಕಾಯ್ದುಕೊಂಡಿತ್ತು. ಇಡೀ ಸಮಾಜದ ಗುರಿಯು ಈ ಕೈಲಾಸಶಿಖರದತ್ತ ದೃಷ್ಟಿ ನೆಟ್ಟಿತ್ತು.

ವ್ಯಕ್ತಿಯ ಮತ್ತು ಸಮಾಜದ ಇರುವಿಕೆಯು ಭಾರತೀಯ ಆಲೋಚನೆಯ ಈ ಮೂರು ಶಕ್ತಿಗಳಲ್ಲಿ ಗುರುತಿಸಲ್ಪಡಬೇಕು. ಪ್ರಾಕೃತಿಕ ಚಟುವಟಿಕೆಗಳನ್ನು ಪೂರ್ಣ ಪ್ರಮಾಣದಲ್ಲಿ ಗುರುತಿಸುವಂತಿರಬೇಕು. ವ್ಯಕ್ತಿಯ ಹಾಗೂ ಸಮಾಜದ ಆಶೋತ್ತರಗಳನ್ನು ಗುರುತಿಸಿ ಅವುಗಳನ್ನು ಒಪ್ಪಿಕೊಳ್ಳುವಂತಿರಬೇಕು. ಈ ಗುರಿಯನ್ನು ಸಾಧಿಸಲು ತಿಳುವಳಿಕೆ ಹಾಗೂ ಕ್ರಿಯೆಯ ಅಗತ್ಯವನ್ನು ಒಪ್ಪಿಕೊಳ್ಳಬೇಕು. ಆದರೆ ಇವೆಲ್ಲವನ್ನೂ ಹತೋಟಿಯಲ್ಲಿಟ್ಟು, ಮೇಲಕ್ಕೆತ್ತಿ, ಅಗಲಿಸಿ ಧರ್ಮದ ಗುರಿಯಲ್ಲಿ ಸೇರಿಸುವಂತಿರಬೇಕು. ಭಾರತವು ನಂಬುವ ಹಾಗೆ, ಉನ್ನತ ಆಧ್ಯಾತ್ಮಿಕ ಪ್ರಜ್ಞೆ ಇರುವುದೇ ಆದರೆ ಅದನ್ನ ಸಾಧಿಸಲು ಮನುಷ್ಯ ಪ್ರಯತ್ನಿಸಬಲ್ಲ ಎನ್ನುವುದೇ ಆದರೆ, ಆ ರೀತಿ ನಡೆಯುವ ಮೇಲ್ ನಡಗೆಯ ದಾರಿಯನ್ನು ಸತತವಾಗಿ ಕಾಣುವಂತಿರಬೇಕು. ಭಾರತೀಯ ಸಂಸ್ಕೃತಿಯು ಒಮ್ಮೆಗೆ ಮನುಷ್ಯನ ಪ್ರಕೃತಿಯನ್ನು ಪ್ರಚೋದಿಸುವ ಹಾಗೂ ಹತೋಟಿಯಲ್ಲಿಡುವ ಕೆಲಸವನ್ನು ಮಾಡಿದೆ. ಹಾಗೆ ಮಾಡಿ ಅವನ ಸಾಮಾಜಿಕ ಪಾತ್ರವನ್ನು ಗಂಭೀರವಾಗಿ ಪರಿಗಣಿಸಿತ್ತು. ಆತನ ಮನಸ್ಸಿನ ಮೇಲೆ ಮಾನವೀಯ ಮೌಲ್ಯಗಳನ್ನು ಅಚ್ಚು ಹಾಕಿತ್ತು. ಅಂತಹ ಮೌಲ್ಯಗಳು ಸಾಮರಸ್ಯಪೂರ್ಣವಾಗಿದ್ದು, ಸಮಾಜದ ಸದಸ್ಯರನ್ನು ಔನ್ನತ್ಯದ ಸ್ಥಿತಿಗೆ ಕರೆದೊಯ್ದಿದ್ದವು. ಹಾಗೆಯೇ ಆತನ ಎದುರಿಗೆ ತಾತ್ತ್ವಿಕ ಆಲೋಚನೆಗಳನ್ನು ಅದರಿಂದಾಗುವ ಪ್ರಾಯೋಗಿಕ ಬದಲಾವಣೆಗಳನ್ನು ತಿಳಿಯಪಡಿಸಿ, ಆಧ್ಯಾತ್ಮಿಕ ಜೀವನದ ಬಗ್ಗೆ ತಿಳಿವನ್ನು ನೀಡಿ, ಅನಂತದ ದೈವೀಗುಣದ ಬಗ್ಗೆ ಹಸಿವು ಹುಟ್ಟಿಸುವುದಕ್ಕೆ ಅಂಕುರಾರ್ಪಣ ಮಾಡಿತ್ತು. ಆತನ ಧರ್ಮದ ಸಂಕೇತಗಳು ಇಂತಹ ನಿರ್ದೇಶನಗಳಿಂದ ತುಂಬಿದ್ದು ಆ ಗುರಿಯನ್ನು ತಲುಪಲು ಸಹಾಯ ಮಾಡುತ್ತಿತ್ತು.

ತನ್ಮೂಲಕ ಮನುಷ್ಯನಿಗೆ ಈ ಭೌತಿಕ ಪ್ರಪಂಚದಿಂದ ಹೊರಗೆ ಒಂದು ಅಸ್ತಿತ್ವವಿದೆ ಎಂಬುದರ ಅರಿವು ಬರುತ್ತಿತ್ತು. ಅದರಿಂದ ಅವನು ಆತ್ಮದ ಹತ್ತಿರ ಬರುತ್ತಿದ್ದ. ಈ ಆತ್ಮವಾದರೋ ತಾನು ಅಕ್ರಮಿಸಿರುವ ದೇಹದ ಜೀವನಕ್ಕಿಂತ ಮಿಗಿಲಾದದ್ದು. ಅದಕ್ಕೊಂದು ಉನ್ನತ ಗುರಿಯಿದೆ, ಅಮರತ್ವವನ್ನು ಪಡೆಯುವ ಸಾಧ್ಯತೆಯಿದೆ, ಸ್ವಾತಂತ್ರ್ಯ, ದೈವೀಪ್ರಜ್ಞೆ, ದೈವೀ ಪ್ರಕೃತಿ ಪಡೆಯುವ ಸಾಧ್ಯತೆಯಿದೆ. ಮನುಷ್ಯನನ್ನು ಮರೆಯಲು ಬಿಡಬಾರದು– ಆತನಲ್ಲಿರುವುದು ಒಂದು ಚಿಕ್ಕ ವೈಯಕ್ತಿಕ ಅಹಂ. ಅದು ಭಗವಂತ, ಅನಂತ, ಆತ್ಮದ ಚೇತನಕ್ಕಿಂತ ತೀರಾ ಚಿಕ್ಕದು ಎಂಬುದನ್ನು ಮರೆಯಲು ಬಿಡಬಾರದು. ಈ ಬಂಧನದಿಂದ ಬಿಡಿಸುವ ತತ್ತ್ವವನ್ನು ದೂರದಿಂದಲಾದರೂ ಹಿಂಬಾಲಿಸಬಲ್ಲ, ತನ್ನ ಶಕ್ತ್ಯನುಸಾರ ಉನ್ನತ ಗುರಿಯನ್ನು ಪಡೆಯುವುದೇ ಅವನ ಪ್ರಕೃತಿ, ಪ್ರಮಾಣ ಹಾಗೂ ಅಧಿಕಾರದ ಮೇಲೆ ನಿರ್ಧಾರವಾಗಿದೆ. ಆತ ತನ್ನ ಸುತ್ತ ಈ ದಿಶೆಯಲ್ಲಿ ಪ್ರಗತಿಯನ್ನು ಸಾಧಿಸಿರುವ ಮಹಾಮಹಿಮರನ್ನು ಕಾಣಬಲ್ಲ. ಈ ಹಿಂದಿನ ಕಾಲದಲ್ಲಿ ಈ ಮಹಾಮಹಿಮರೇ ಆತನ ಯೌವನ ಕಾಲದ ಗುರುಗಳಾಗಿದ್ದರು, ಸಮಾಜದ ಶಿಖರವಾಗಿದ್ದರು, ಸಭ್ಯತೆಯ ಸ್ಫೂರ್ತಿಯಾಗಿ ಉತ್ತುಂಗದಲ್ಲಿದ್ದವರು, ಸಂಸ್ಕೃತಿಯ ಬೆಳಕಾಗಿದ್ದವರು. ಆಧ್ಯಾತ್ಮಿಕ ಸ್ವಾತಂತ್ರ್ಯ, ಆಧ್ಯಾತ್ಮಿಕ ಪರಿಶುದ್ಧತೆ ಎಂಬುದು ದೂರದ ಸಾಧಿಸಲಾಗದ ತತ್ತ್ವವಾಗಿರಲಿಲ್ಲ. ಆದರೆ ಅದು ಮಾನವನ ಉನ್ನತ ಮಟ್ಟದ ಗುರಿ ಎಂಬುದನ್ನು ಅದನ್ನು ಸಾಧಿಸಲು ಎಲ್ಲರೂ ಕಡೆಯಲ್ಲಿ ಪ್ರಯತ್ನಿಸಬೇಕು ಎಂಬುದನ್ನು, ಜೀವನದ ಹಾಗೂ ಧರ್ಮದ ಪ್ರಾಯೋಗಿಕ ಪ್ರಯತ್ನದ ಸಾಫಲ್ಯತೆ ಅದೆಂದು ತಿಳಿಸಲಾಗಿತ್ತು. ಹೀಗಾಗಿ ಆಧ್ಯಾತ್ಮಿಕ ತತ್ತ್ವವು ಎಲ್ಲವನ್ನೂ ಆಳುತ್ತಿತ್ತು, ಬೆಳಕಾಗಿಸುತ್ತಿತ್ತು, ಹಾಗೂ ತನ್ನೆಡೆಗೆ ಎಲ್ಲಾ ನಾಗರಿಕ ಜನಾಂಗದ ಜೀವನಾದರ್ಶಗಳನ್ನು ಸೆಳೆಯುತ್ತಿತ್ತು.

ಭಾರತೀಯ ಸಂಸ್ಕೃತಿಯ ಮೂರು ಹಂತಗಳು

...ಎಲ್ಲಾ ದೊಡ್ಡ ಸಂಸ್ಕೃತಿಗಳಲ್ಲಿ ಹಾಗಾಗಿ ನಾವು ಮೂರು ಹಂತಗಳಲ್ಲಿ ಬೆಳವಣಿಗೆಯಾಗಿರುವುದನ್ನು ಕಾಣುತ್ತೇವೆ. ಈ ಬೆಳವಣಿಗೆಗಳು ಸತ್ಯದ ಆವಶ್ಯಕ ಹೆಜ್ಜೆಗಲು. ಮೊದಲನೆಯ ಹಂತದಲ್ಲಿ ವಿಶಾಲವಾದ ಆದರೆ ಜಾಳು ಜಾಳಾದ ವ್ಯವಸ್ಥೆ ಕಂಡುಬರುತ್ತದೆ. ಎರಡನೆಯ ಹಂತದಲ್ಲಿ ನಮ್ಮ ಕಣ್ಣಿಗೆ ರೂಪವು ಗೋಚರಿಸುತ್ತದೆ. ರೂಪಕ್ಕೆ ಒಂದು ಚೌಕಟ್ಟು ಲಯ ಕಂಡುಬರುತ್ತದೆ. ಮೂರನೆಯ ಅಂತ್ಯದ ಕ್ಲಿಷ್ಟಕರವಾದ ಹಂತದಲ್ಲಿ ಇಳಿಜಾರಿನಲ್ಲಿ ಸಾಗಿರುವ ಲಯವಾಗುತ್ತಿರುವ ನಾಶವಾಗುತ್ತಿರುವುದನ್ನು ನಾವು ಕಾಣುತ್ತೇವೆ. ಈ ಮೂರನೆಯ ಹಂತವೇ ಒಂದು ನಾಗರಿಕತೆಯ ಜೀವನದಲ್ಲಿ ಅತಿ ಮುಖ್ಯ ಹಂತ. ತನ್ನನ್ನು ಈ ಹಂತದಲ್ಲಿ ಅದು ಕಾಪಾಡಿಕೊಳ್ಳದಿದ್ದರೆ ಅದು ನಿಧಾನವಾಗಿ ಇಳಿಜಾರಿನಲ್ಲಿ ಸಾಗಿ ತನ್ನ

ಸಮಕಾಲೀನವಾದ ಪ್ರಬಲವಾದ ಶಕ್ತಿಗಳಿಗೆ ಸಿಲುಕಿ ಆಧುನಿಕತೆಯ ಧಾರೆಯಲ್ಲಿ ಕೊಚ್ಚಿಕೊಂಡು ಹೋಗಿಬಿಡುತ್ತದೆ. ಆದರೆ ಅದೇ ತನ್ನ ಸೀಮಿತ ರೂಪದಿಂದ ಸ್ವಾತಂತ್ರ್ಯ ಪಡೆದಿದ್ದೆ ಆದರೆ, ತನ್ನ ಆದರ್ಶಗಳನ್ನು ಬದಲಾಯಿಸಿಕೊಂಡರೆ, ತನ್ನ ಆತ್ಮಕ್ಕೆ ಹೊಸ ಗುರಿಯನ್ನು ನೀಡಿದರೆ, ಆಧುನಿಕ ಅಗತ್ಯಗಳನ್ನು ಆವಶ್ಯಕತೆಗಳನ್ನು ಬೆಳವಣಿಗೆಗಳನ್ನು ಅದು ಅರ್ಥಮಾಡಿಕೊಂಡಿದ್ದೆ ಆದರೆ, ಆವಾಗ ಅದಕ್ಕೆ ಪುನರ್ಜನ್ಮವಾಗುತ್ತದೆ. ಆ ಸಭ್ಯತೆಗೆ ಹೊಸ ಜೀವನ ಸಿಗುತ್ತದೆ. ವಿಕಾಸವಾಗುತ್ತದೆ. ನಿಜವಾದ ಪುನರ್ಜನ್ಮವಾಗುತ್ತದೆ.

ಭಾರತೀಯ ಸಭ್ಯತೆಯು ತನ್ನದೇ ನಿಧಾನವಾದ ನಡುಗೆಯಲ್ಲಿ ಈ ಎಲ್ಲಾ ಹಂತಗಳ ಮೂಲಕ ನಡೆದುಬಂದಿದೆ. ಅದರ ಮೊದಲ ಹಂತದಲ್ಲಿ ಅತ್ಯುನ್ನತ ಆಧ್ಯಾತ್ಮಿಕ ರೂಪವು ಹೊರಗೆ ಕಂಡಿತು. ಈ ರೂಪದಲ್ಲಿ ಅದು ಮೈತುಂಬಿಕೊಂಡಿತ್ತು, ಬಾಗುವ ದೇಹ ಹೊಂದಿತ್ತು, ಆತ್ಮದ ಅಗತ್ಯಗಳಿಗೆ ಸರಿಯಾಗಿ ಸ್ಪಂದಿಸಿತು. ಈ ದ್ರವಹಂತವು ಮುಂದಕ್ಕೆ ಹೋಗಿ ಬುದ್ಧಿವಂತಿಕೆಯ ಮಹಾಯುಗವನ್ನು ಕಂಡಿತು. ಅದು ಸಾಕಷ್ಟು ಕ್ಲಿಷ್ಟಕರವೂ ಆಗಿತ್ತು. ಆದರೂ ವಿಶೇಷವಾಗಿ ವಿಶಾಲವಾದ ತುಂಬಿದ ಮೈಯಿಂದಲೇ ಕೂಡಿತ್ತು. ಇದರಿಂದಾಗಿ ಅದು ಭಾವನೆಗಳ ಬದಲಾವಣೆ ಹಾಗೂ ರೂಪದ ಬದಲಾವಣೆಯನ್ನು ಎದುರಿಸಬೇಕಾಯಿತು. ಆದರೆ ಕಠಿಣವಾಗಿದ್ದ ಆಳವಾಗಿ ಬೇರೂರಿದ್ದ ಗಟ್ಟಿ ತತ್ತ್ವಗಳು ಗೆದ್ದು ಸ್ಫೂರ್ತಿತರುವ ಆತ್ಮದ ಕೆಲಸ ಕಡಿಮೆಯಾಯಿತು. ಜೀವನದ ಶಕ್ತಿ ಸ್ಥಾವರವಾಯಿತು, ಹೊರರೂಪದ ಕಟ್ಟಡವು ಕುಸಿಯಲು ಆರಂಭಿಸಿತ್ತು. ಈ ಕುಸಿತವು ಕೆಲವು ಕಾಲ ಸ್ಥಗಿತಗೊಂಡಿದ್ದರೂ, ನಂತರದ ಕಾಲದಲ್ಲಿ ಬೇರೆ ಇನ್ನಿತರ ಸಭ್ಯತೆಗಳ ಹೊಡೆತಕ್ಕೆ ಸಿಲುಕಿ ವೇಗವಾಗಿ ಗಳಿಸತೊಡಗಿತು. ಇಂದು ನಾವು ಆ ಹಿಂಸಾತ್ಮಕ ಪಾಶ್ಚಿಮಾತ್ಯ ಪ್ರವಾಹದಲ್ಲಿ ಸಿಲುಕಿದ್ದೇವೆ. ಈ ಪ್ರವಾಹದಲ್ಲಿ ಭಾರತೀಯ ಸಭ್ಯತೆ ಪೂರ್ಣವಾಗಿ ನಾಶವಾಗುತ್ತದೆ ಎಂಬ ಭಯವೂ ಹುಟ್ಟಿತ್ತು. ಆ ನಾಶದಿಂದ ಅದು ಮರುಹುಟ್ಟು ಪಡೆಯುವುದು ಅಸಾಧ್ಯ ಎಂಬ ಭಾವನೆ ಪ್ರಬಲವಾಗಿತ್ತು. ಆದರೆ ಅದಕ್ಕೆ ವಿರುದ್ಧವಾಗಿ ಈಗ ಅದರ ದಿಕ್ಕು ಮೇಲ್ಮುಖವಾಗಿದ್ದು, ಅದು ಮತ್ತೆ ಚೇತರಿಸಿಕೊಳ್ಳುತ್ತದೆ, ಮತ್ತೆ ಪುನರ್ಜನ್ಮ ಪಡೆಯುತ್ತದೆ ಎನ್ನಿಸುತ್ತಿದೆ. ಈ ಮೂರೂ ಹಂತಗಳು ಸಂಸ್ಕೃತಿಯ ವಿದ್ಯಾರ್ಥಿಗೆ ವಿಶೇಷವಾದದ್ದಾಗಿವೆ. ನಾವು ಭಾರತೀಯ ಸಭ್ಯತೆಯ ವಿಶೇಷತೆಯನ್ನು ಅರಿತಿದ್ದೆ, ಆದರೆ, ಅದರ ಆರಂಭಿಕ ದಿನಗಳಿಗೆ ನಾವು ಹೋಗಬೇಕು. ವೇದಕಾಲೀನ ಉಪನಿಷತ್ ಕಾಲೀನ ಹಾಗೂ ಅದರ ವೀರ್ಯವತ್ತಾದ ಬೀಜಾರೋಪಣ ಕಾಲಕ್ಕೆ ನಾವು ಹೋಗಬೇಕು. ಅದರ ಆತ್ಮದ ಗಂಭೀರ ರೂಪವನ್ನು ಅಧ್ಯಯನ ಮಾಡಿದ್ದೆ ಆದರೆ, ಅದು ತನ್ನ ಜೀವನದ ಲಯವನ್ನು ಕಂಡುಕೊಂಡ ಬಗೆಯನ್ನು ಗಮನಿಸಿದ್ದೆ ಆದರೆ, ನಾವು ನಂತರದ ಮಧ್ಯಕಾಲೀನ ಶಾಸ್ತ್ರಗ್ರಂಥಗಳನ್ನು, ಸಾರ್ವಜಕಾಲಿಕ ಮೌಲ್ಯವುಳ್ಳ ಗ್ರಂಥಗಳನ್ನು, ಪ್ರಾಚೀನ ಕಾಲದ

ತತ್ತ್ವಶಾಸ್ತ್ರ, ವಿಜ್ಞಾನ, ಆಡಳಿತ, ರಾಜಕೀಯ ಮತ್ತು ಸಾಮಾಜಿಕ ವಿಷಯಗಳನ್ನು ಹಾಗೂ ಅನೇಕ ಆಯಾಮಗಳನ್ನುಳ್ಳ ತಾರ್ಕಿಕ ಆಲೋಚನೆಗಳು, ಧಾರ್ಮಿಕ ವಿಶೇಷಗಳು, ಕಲೆ, ಶಿಲ್ಪಕಲೆ, ಚಿತ್ರಕಲೆ, ವಾಸ್ತು ಇತ್ಯಾದಿಗಳನ್ನು ಅರಿಯಬಲ್ಲೆವು. ನಾವು ಅದರ ಇತಿಮಿತಿಗಳನ್ನು ಅರಿತರೆ, ಅದು ಎಲ್ಲಿ ತನ್ನ ಪೂರ್ಣತ್ವವನ್ನು ಪಡೆಯದೆ ನಡುವಿನಲ್ಲೆ ನಿಂತು ವಿಕಾಸಗೊಳ್ಳದೆ ತನ್ನ ಆತ್ಮವನ್ನು ಪೂರ್ತ ವಿಕಸಿಸದೆ ಇದ್ದಾಗ ಅದರ ಅವನತಿಯ ಕಾಲದ ಅಧ್ಯಯನ ಮಾಡಬೇಕಾಗುತ್ತದೆ. ಕಡೆಯದಾಗಿ, ನಾವು ಕಂಡುಹಿಡಿದಿದ್ದೆ ಆದರೆ, ಅದು ತನ್ನ ರೂಪಪರಿವರ್ತನೆಯ ನಂತರ ಪುನರ್ಜನ್ಮದ ಹೊಸ ಅವತಾರದಲ್ಲಿ ಅದು ಸಾಗುವ ಕಠಿಣ ದಾರಿಯನ್ನು ಗುರುತಿಸಬಹುದು. ಇವುಗಳನ್ನು ಒಂದರಿಂದ ಮತ್ತೊಂದರಿಂದ ಗೆರೆಯನ್ನು ಕುಯ್ಯುವ ಹಾಗೆ ಬೇರ್ಪಡಿಸಲು ಸಾಧ್ಯವಿಲ್ಲ. ಅದಕ್ಕೆ ಕಾರಣ ಒಂದು ಕಾಲದಲ್ಲಿ ಬೆಳೆದು ಪ್ರಬುದ್ಧವಾದುದ್ದಕ್ಕೆ ಅದರ ಹಿಂದಿನ ಕಾಲದಲ್ಲಿ ನಡೆದ ಬೀಜಾರೋಪಣವೇ ಆಗಿದೆ. ಆದರೂ ಕೆಲವು ವಿಶಾಲವಾದ ಸತ್ಯಗಳ ಆಧಾರದ ಮೇಲೆ ತಾರ್ಕಿಕ ದೃಷ್ಟಿಯಿಂದ ಇಂತಹ ಗೆರೆ ಕುಯ್ಯುವ ಕೆಲಸವನ್ನು ಮಾಡಬಹುದು. ಆದರೆ ಈಗಿನ ಪ್ರಸಕ್ತ ಸನ್ನಿವೇಶದಲ್ಲಿ ಹೆಚ್ಚಿನ ಕಾಲ ಉಳಿದುಬಂದ ವಿಕಸಿತಗೊಂಡ ರೂಪದ ಬಗ್ಗೆ, ರಾಗಬದ್ಧ ಸನ್ನಿವೇಶಗಳ ಬಗ್ಗೆ ನಾವು ವಿಶೇಷವಾಗಿ ಗಮನಹರಿಸ ಬಲ್ಲವಾಗಿದ್ದೇವೆ.

ಭಾರತೀಯ ಸಂಸ್ಕೃತಿ ನಿವಾರಿಸಬೇಕಾಗಿದ್ದ ಸಮಸ್ಯೆ– ಅದರ ಆತ್ಮ ಹಾಗೂ ಅದರ ಜೀವನದ ಆದರ್ಶದ ಬಗ್ಗೆ ಹೊರಾವರಣದಲ್ಲಿ ನೆಲೆಸಿದ್ದ ಪ್ರಾಯೋಗಿಕ ವಿಕಾಸವನ್ನು ಕಂಡುಹಿಡಿಯುವುದೇ ಆಗಿತ್ತು. ನಾವು ಮನುಷ್ಯನ ಪ್ರಾಕೃತಿಕ ಸಹಜವಾದ ಜೀವನವನ್ನು ಹೇಗೆ ಗ್ರಹಿಸಬೇಕು; ಅದಕ್ಕೆ ಸಾಕಷ್ಟು ಸ್ವಾತಂತ್ರ್ಯ, ವೈವಿಧ್ಯತೆ ಇತ್ಯಾದಿಗಳನ್ನು ನೀಡಿದನಂತರವೂ ಅದಕ್ಕೆ ಇರಬೇಕಾದ ನ್ಯಾಯ, ಧರ್ಮ, ನೀತಿ, ಕಾರ್ಯತತ್ಪರತೆಯ ವಿಧಿವಿಧಾನ, ರೀತಿಯ ನ್ಯಾಯ, ಆದರ್ಶವಲ್ಲದ ಮಾನವ ವ್ಯವಹಾರಗಳಿಗೊಂದು ನ್ಯಾಯ, ಹಾಗೆಯೇ ಆದರ್ಶದ ಉನ್ನತತೆಯನ್ನು ಕಾಪಾಡುವಂತಹ ನ್ಯಾಯ – ಇದನ್ನು ಹೇಗೆ ಗ್ರಹಿಸಬೇಕು? ಮತ್ತೆ ಧರ್ಮವು ತನ್ನ ನಿರ್ದಿಷ್ಟ ಗುರಿಯನ್ನು ಮಿತಿಮೀರಿ ನಿಂತಾಗ ಅದರ ಆಧ್ಯಾತ್ಮಿಕ ಜೀವನದ ಸ್ವಾತಂತ್ರ್ಯದ ಪರಿಗಣನೆ ಹೇಗೆ? ಭಾರತೀಯ ಸಂಸ್ಕೃತಿಯು ತನ್ನ ಮಾರ್ಗದರ್ಶನದ ಸಲುವಾಗಿ ಮೊದಲಿನಿಂದಲೂ ಎರಡು ರೀತಿಯ ಭಾವನೆಗಳನ್ನು ಒಪ್ಪಿಕೊಂಡಿತ್ತು. ಅದನ್ನು ಅದು ಸಾಮಾಜಿಕ ಚೌಕಟ್ಟಿನಲ್ಲಿ ಸೇರಿಸಿಬಿಟ್ಟಿತು. ಇದೇ ಎರಡು ವ್ಯವಸ್ಥೆಗಳಿಗೆ ಕಾರಣವಾಗಿತ್ತು– ನಾಲ್ಕು ವರ್ಣಗಳಿಗೆ, ನಾಲ್ಕು ಆಶ್ರಮಗಳಿಗೆ– ನಾಲ್ಕು ಸ್ತರಗಳಲ್ಲಿ ಕಂಡುಬರುವ ಸಮಾಜ ಹಾಗೂ ನಾಲ್ಕು ಒಂದಾದನಂತರ ಒಂದು ಬರುವ ವಿಕಾಸಯುತವಾದ ಮಾನವನ ಜೀವನ.

ನಾಲ್ಕು ವರ್ಣಗಳು

ಪ್ರಾಚೀನ ಚಾತುರ್ವರ್ಣವನ್ನು ಅದರ ನಂತರದ ವಿಚ್ಛಿನ್ನ ವಿಪರೀತಾರ್ಥದ ಜಾತಿಯ ಆಧರದ ಮೇಲೆ ನಾವು ಆಲೋಚಿಸಬಾರದು. ಅದು ಬೇರೆ ನಾಗರಿಕತೆಗಳಲ್ಲಿ ಕಂಡುಬರುವ ಪುರೋಹಿತ, ರಾಜ, ವರ್ಣಿಕ, ಶ್ರಮಿಕನ ವಿಭಜನೆ ರೀತಿಯಲ್ಲೂ ಇರಲಿಲ್ಲ. ನೋಡುವುದಕ್ಕೆ ಅರೆನೋಟಕ್ಕೆ ಅದು ಹಾಗೆ ಕಾಣುತ್ತಿತ್ತು. ಆದರೆ ಅದಕ್ಕಿದ್ದ ವಿಶೇಷವಾದ ಅರ್ಥವೇ ಬೇರೆಯಾಗಿತ್ತು. ಪ್ರಾಚೀನ ಭಾರತದ ಭಾವನೆಯಲ್ಲಿ ಮನುಷ್ಯ ಪ್ರಕೃತಿಯಿಂದ ನಾಲ್ಕು ರೀತಿಯವನಾಗಿರುತ್ತಾನೆ. ಅದರ ಪ್ರಕಾರ, ಮೊದಲನೆಯ ಉನ್ನತ ಸ್ಥಾನದಲ್ಲಿ ತಿಳುವಳಿಕೆಯುಳ್ಳ, ಓದಿದ, ಜ್ಞಾನವನ್ನು ಸಂಪಾದಿಸಿರುವ ಮನುಷ್ಯ ಇರುತ್ತಾನೆ. ತದನಂತರದ ಸ್ಥಾನದಲ್ಲಿ ಶಕ್ತಿ ಸ್ಥಾನದಲ್ಲಿದ್ದು ಕ್ರಿಯಾಶೀಲನಾದ ರಾಜ, ಯೋಧ, ನಾಯಕ, ಆಡಳಿತಗಾರ ಇವರು ಇರುತ್ತಾರೆ. ಅದೇ ತಕ್ಕಡಿಯಲ್ಲಿ, ಮೂರನೆಯ ಸ್ಥಾನದಲ್ಲಿ ಆರ್ಥಿಕ ವ್ಯವಸ್ಥೆಯ ವ್ಯಕ್ತಿ, ಸೃಷ್ಟಿಕರ್ತ, ಐಶ್ವರ್ಯವನ್ನು ಸೃಷ್ಟಿಸುವವನು, ವರ್ಣಿಕ, ಕುಶಲಕರ್ಮಿ, ಬೇಸಾಯಗಾರ ಇರುತ್ತಾರೆ. ಈ ಮೂವರೂ ಎರಡು ಬಾರಿ ಹುಟ್ಟಿದವರು ಎಂಬುದಾಗಿ 'ದ್ವಿಜ' ಎನ್ನಿಸಿಕೊಂಡರು. ಬ್ರಾಹ್ಮಣ, ಕ್ಷತ್ರಿಯ ಹಾಗೂ ವೈಶ್ಯರಿಗೆ ಹಾಗಾಗಿ ಉಪನಯನವಾಗುತ್ತಿತ್ತು. ಕಡೆಯದಾಗಿ ಎಲ್ಲರಿಗಿಂತ ಕಡಿಮೆ ವಿಕಾಸ ಹೊಂದಿದ ಮನುಷ್ಯ ಬಂದ. ಆತ ಅದೇ ತಕ್ಕಡಿಯಲ್ಲಿ ತೂಗುವವನಾಗಿರಲಿಲ್ಲ. ಆತ ಬುದ್ಧಿವಂತನಾಗಿರಲಿಲ್ಲ, ಆತನಿಗೆ ಶಕ್ತಿಯಿರಲಿಲ್ಲ, ಸೃಷ್ಟಿ ಮಾಡಬಲ್ಲ ಶಕ್ತಿಯಿರಲಿಲ್ಲ, ಬುದ್ಧಿವಂತನಂತೆ ಯೋಚಿಸಬಲ್ಲವನಾಗಿರಲಿಲ್ಲ; ಆತ ಕೇವಲ ಕೆಳಸ್ತರದ ಕೌಶಲವಲ್ಲದ ಕೆಲಸಗಳಿಗೆ ಮಾತ್ರ ಅರ್ಹನಾಗಿದ್ದ. ಆತನನ್ನು ಶೂದ್ರ ಎಂದು ಕರೆಯಲಾಯಿತು. ಸಮಾಜದ ಆರ್ಥಿಕ ಸ್ತರವನ್ನು ಈ ನಾಲ್ಕು ಹಂತಗಳಲ್ಲಿ ವಿಭಜಿಸಲಾಯಿತು. ಹಾಗಾಗಿ ಬ್ರಾಹ್ಮಣ ಸಮಾಜವು ಸಮಾಜಕ್ಕೆ ಪುರೋಹಿತರನ್ನು, ಆಲೋಚಕನ್ನು, ಬರೆಯುವವರನ್ನು, ಸಂವಿಧಾನ ಶಿಲ್ಪಿಗಳನ್ನು, ವಿದ್ವಾಂಸರನ್ನು, ಧಾರ್ಮಿಕ ಮುಖಂಡರನ್ನು, ಮಾರ್ಗದರ್ಶಿಗಲನ್ನು ನೀಡಿತು. ಕ್ಷತ್ರಿಯ ಸಮಾಜವು ಹಾಗೆಯೇ ಸಮಾಜಕ್ಕೆ ರಾಜರನ್ನು, ಯೋಧರನ್ನು, ರಾಜ್ಯಾಡಳಿತದಲ್ಲಿ ನಿಷ್ಣಾತರನ್ನು ನೀಡಿತು. ವೈಶ್ಯರ ಸಮಾಜವು ಅಂತೆಯೇ ತಯಾರಕರನ್ನು, ಬೇಸಾಯಗಾರರನ್ನು, ಕುಶಲಕರ್ಮಿಗಳನ್ನು, ವ್ಯಾಪಾರಿಗಳನ್ನು, ವಣಿಕರನ್ನು ನೀಡಿತು. ಇನ್ನು ಶೂದ್ರ ಸಮಾಜವಾದರೋ ಅದು ಕೆಳಸ್ತರದ ಕೈ ಕೆಲಸಗಳನ್ನು ಮಾಡುವವರನ್ನು ನೀಡಿತು. ಇದು ಪ್ರಪಂಚದಲ್ಲಿ ಎಲ್ಲೂ ಕಾಣದ ವಿಭಜನೆಯಾಗಿದ್ದು, ಧರ್ಮಕ್ಕೆ ಅತಿಹೆಚ್ಚಿನ ಮಹತ್ತ್ವವನ್ನು ನೀಡಲಾಗಿದ್ದು, ಅಂತೆಯೇ ಕೆಲವು ನಾಗರಿಕತೆಗಳು ಪರಿಗಣಿಸಿದಂತೆ ಆಲೋಚನೆ ಹಾಗೂ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಮಹತ್ತ್ವ ನೀಡಲಾಗಿತ್ತು.

ನಾಲ್ಕು ವರ್ಣಗಳಲ್ಲಿರುವ ಮೌಲ್ಯಾಧಾರಿತ ಆಧ್ಯಾತ್ಮಿಕ ಆಧಾರಿತ ಅಂಶಗಳು

ಭಾರತೀಯ ಚಿಂತನೆಯು ಮನುಷ್ಯನ ಈ ಸ್ತರಗಳನ್ನು ಹುಟ್ಟಿನಿಂದ ಬಂದವು ಎಂದು ಹೇಳಲಿಲ್ಲ. ಅದು ಆತನ ಸ್ವಶಕ್ತಿಯಿಂದ ಹಾಗೂ ಅಂತಃಶಕ್ತಿಯಿಂದ ಬಂದಿದ್ದು ಎಂದು ಹೇಳಿತ್ತು. ಈ ನಿಯಮವನ್ನು ಸ್ಪಷ್ಟವಾಗಿ ಪರಿಪಾಲಿಸಿದ್ದೇ ಆಗಿದ್ದರೆ, ಅದು ಅನನ್ಯವಾಗಿದ್ದ ಉನ್ನತ ಮಟ್ಟವೇ ಆಗಿರುತ್ತಿತ್ತು. ಆದರೆ ಯಾವುದೇ ಉನ್ನತ ಸಮಾಜವೂ ಒಂದು ಯಂತ್ರವಿದ್ದಂತೆ. ಅದು ಯಂತ್ರದಂತೆ ಭೌತಿಕ ನಿಯಮಗಳ ಕಡೆಗೆ ಒಲಿಯುತ್ತದೆ. ಅಂತಹ ಕಾಲದಲ್ಲಿ ಇಂತಹ ಮನಃಶಾಸ್ತ್ರದ ತತ್ತ್ವವನ್ನು ಆಧರಿಸಿ ಸಮಾಜದ ವ್ಯವಸ್ಥೆಯನ್ನು ಕಟ್ಟುವುದು ಕಷ್ಟದ ಕೆಲಸ ಹಾಗೂ ವ್ಯರ್ಥ ಪ್ರಯತ್ನವಾಗಿರಬೇಕು. ಹಾಗಾಗಿ ಹುಟ್ಟಿನಿಂದ ವರ್ಣ ಎಂದು ಪ್ರಾಯೋಗಿಕವಾಗಿ ಹೇಳುವುದು ಸುಲಭವಾಯಿತು. ನಾವು ಬೇರೊಂದು ಕಡೆ ಈ ಸಾಮಾಜಿಕ ವ್ಯವಸ್ಥೆಯ ಈ ರೂಪಕ್ಕೂ ಈ ಪಾತ್ರಕ್ಕೂ ಕಾರಣವನ್ನು ಹುಡುಕಬೇಕಾಗುತ್ತದೆ.

ಭಾರತೀಯ ಚಾತುರ್ವರ್ಣ ವ್ಯವಸ್ಥೆ ಸುವ್ಯವಸ್ಥಿತವಾದ ಆರ್ಥಿಕ ವ್ಯವಹಾರದಲ್ಲಿ ನೆಲಸಿರಲಿಲ್ಲ. ಅದರ ಮೂರು ಸತ್ಯ ಹಾಗೂ ನಿರಂತರ ಮೌಲ್ಯ ಇವು ಮೌಲಿಕ ಹಾಗೂ ಆಧ್ಯಾತ್ಮಿಕ ನೆಲೆಯಲ್ಲಿ ನಿಂತಿದೆ. ಸಮಾಜದ ಆಲೋಚಕರು ಚಿಂತಕರು ಈ ನೆಲೆಗೆ ತಮ್ಮ ಚಿಂತನೆಯ ಧಾರೆಯನ್ನೆ ಹರಿಸಿದ್ದರು. ಈ ಅಂತರಂಗದ ಚಿಂತನೆ ಆರಂಭವಾಗಿದ್ದೇ ವ್ಯಕ್ತಿಯ ಬೌದ್ಧಿಕ, ಮೌಲಿಕ ಹಾಗೂ ಆಧ್ಯಾತ್ಮಿಕ ಪ್ರಗತಿಯು ಮಾನವ ಜನಾಂಗದ ಕೇಂದ್ರ ವಿಷಯವಾಗಿದೆ ಎಂಬುದನ್ನು ಅರಿಯಬೇಕು. ಸಮಾಜವೇ ಈ ಪ್ರಗತಿಯ ಅವಶ್ಯಕ ಚೌಕಟ್ಟಿನಲ್ಲಿ ಬರುತ್ತದೆ; ಸಂಬಂಧಗಳ ವ್ಯವಸ್ಥೆಯೇ ಅಗತ್ಯವಾದ ಮಾಧ್ಯಮವನ್ನು, ಕ್ಷೇತ್ರವನ್ನು ಹಾಗೂ ಪರಿಸ್ಥಿತಿಯನ್ನು ಪ್ರಭಾವಶಾಲಿಯಾಗಿ ಸೃಷ್ಟಿಸುತ್ತದೆ. ವ್ಯಕ್ತಿಗೆ ಸಮಾಜದಲ್ಲಿ ಸುರಕ್ಷಿತವಾದ ಸ್ಥಾನವನ್ನು ಕಂಡುಹಿಡಿಯಬೇಕಿತ್ತು. ಆ ಸ್ಥಾನದಲ್ಲಿದ್ದುಕೊಂಡು ವ್ಯಕ್ತಿ ಈ ಸಂಬಂಧಗಳನ್ನು ಸೇವಿಸಬಲ್ಲವನಾಗಿದ್ದ. ಅಂತಹವನು ಸಮಾಜವನ್ನು ಸುಸ್ಥಿತಿಯಲ್ಲಿಡಲು ಹಸಕರಿಸುತ್ತಾ ತನ್ನ ಕರ್ತವ್ಯದಿಂದ ಋಣವನ್ನು ತೀರಿಸುತ್ತಿದ್ದ. ಅಲ್ಲಿಂದ ಉತ್ತಮ ಸಾಮಾಜಿಕ ಜೀವನದಿಂದಾಗಿ ತನ್ನ ಪ್ರಗತಿಯನ್ನು ಸಾಧಿಸುತ್ತಿದ್ದ. ಹುಟ್ಟನ್ನು ಮೊದಲಿನ ಪ್ರಕೃತಿಸಹಜವಾದ ಕ್ರಿಯೆ ಎಂದು ಒಪ್ಪಿಕೊಳ್ಳಲಾಗಿತ್ತು. ಭಾರತೀಯ ಮನಸ್ಸಿಗೆ ವಂಶವಾಹಿಯು ಅತಿ ಮುಖ್ಯ ವಿಷಯವಾಗಿ ಅರಿವಿಗೆ ಬಂದಿತ್ತು. ನಂತರದ ಚಿಂತನೆಯಲ್ಲಿ ಅದನ್ನು ಪ್ರಕೃತಿಯ ಚಿಹ್ನೆಯಾಗಿ ಭಾವಿಸಿ, ವ್ಯಕ್ತಿಯ ತನ್ನ ಹಿಂದಿನ ಜನ್ಮಗಳಲ್ಲಿ ಈ ಜನ್ಮಕ್ಕೆ ನಡೆಸಿದ್ದ ಆತ್ಮದ ಸಿದ್ಧತೆ ಎಂದೂ ಪರಿಗಣಿಸಲಾಗಿತ್ತು. ಆದರೆ ವರ್ಣವನ್ನು ಕೇವಲ ಹುಟ್ಟಿನಿಂದ ನಿರ್ಧರಿಸಲು ಸಾಧ್ಯವಿಲ್ಲ. ಮನುಷ್ಯನ ಬೌದ್ಧಿಕ ಗುರುತ್ವ, ಆತನ ಸಹನಾಪೂರ್ಣ ಗುಣ, ಆತನ ಮೌಲಿಕ ಪ್ರಕೃತಿ, ಆತನ ಆಧ್ಯಾತ್ಮಿಕ ನಿಲುವು – ಇವು ಮುಖ್ಯವಾದ ವಿಷಯಗಳು. ಹಾಗಾಗಿ ಕುಟುಂಬದ

ಜೀವನಕ್ಕೊಂದು ನ್ಯಾಯ, ವೈಯಕ್ತಿಕ ಗ್ರಾಹ್ಯತೆಯ ವ್ಯವಸ್ಥೆ, ಸ್ವ–ತರಬೇತಿ, ಇದೆಲ್ಲವನ್ನೂ ಶಿಕ್ಷಣದಲ್ಲಿ ಅಳವಡಿಸಿ ಅದನ್ನು ಚಾಲತಿಯಲ್ಲಿ ತರಬೇಕು. ವ್ಯಕ್ತಿಯಾಗಿ ಮನುಷ್ಯನನ್ನು ಪ್ರಮಾಣದಲ್ಲಿ, ಹವ್ಯಾಸದಲ್ಲಿ, ಗುರಿಯಲ್ಲಿ ತರಬೇತಿ ನೀಡಿ ಅವನ ಜೀವನದಲ್ಲಿ ತೀರ್ಮಾನಿಸಲ್ಪಟ್ಟ ಗೌರವ ಮತ್ತು ಕರ್ತವ್ಯಗಳನ್ನು ಮಾಡಲು ಸಕ್ಷಮವಾಗುವಂತೆ ಮಾಡಬೇಕು. ಆತ ಮಾಡಬೇಕಾದ ಕೆಲಸಕ್ಕೆ ವೈಜ್ಞಾನಿಕವಾಗಿ ಸರಿಯಾದ ಹಿನ್ನೆಲೆಯ ಪರಿಕರಗಳನ್ನು ಹೊಂದಿಸಿಕೊಡಬೇಕು. ಆರ್ಥಿಕವಾಗಿ ಜಯಶಾಲಿಯಾಗುವಂತೆ ಮಾಡಬೇಕು. ಆಡಳಿತದ ಉನ್ನತ ಗುರಿಗಳನ್ನು ಮುಟ್ಟುವಂತಿರಬೇಕು. ಅದರ ಆರ್ಥಿಕ, ರಾಜಕೀಯ, ಧಾರ್ಮಿಕ, ಸಾಹಿತ್ಯಿಕ, ವಿದ್ವಾಂಸಿಕ ಇತ್ಯಾದಿ ಚಟುವಟಿಕೆಗಳನ್ನು ಉನ್ನತ ಸ್ತರದಲ್ಲಿ ನಡೆಸುವಂತಿರಬೇಕು. ಅತಿ ಕ್ಷುಲ್ಲಕವಾದ ಗುರಿಗಳು ಸಹ ಅವುಗಳದೇ ಆದ ವಿದ್ಯಾಭ್ಯಾಸವನ್ನು ಹೊಂದಿರುತ್ತದೆ; ಅದರದೇ ನೀತಿನಿಯಮಗಳನ್ನು, ಅವುಗಳ ಯಶಸ್ಸಿನ ಆಕಾಂಕ್ಷೆಗಳನ್ನು, ಆ ಗುರಿಯನ್ನು ಮುಟ್ಟುವ ಹಂತದಲ್ಲಿ ಪಾಲಿಸಬೇಕಾದ ಗೌರವ–ಮರ್ಯಾದೆಗಳನ್ನು, ಔನ್ನತ್ಯದ ಘನತೆಯನ್ನು ಹೊಂದಿದ್ದು, ಈ ರೀತಿ ಇರುವುದರಿಂದಾಗಿ ಇವುಗಳಲ್ಲೂ ಅತಿ ಕಡಿಮೆ ಮಟ್ಟದ ಆಕರ್ಷಣೆ ಇದೆಯೆಂದಾದರೂ ತಾನು ಹುಡುಕಿ ಪಡೆದವರ ಸ್ವತೃಪ್ತಿ ಇರುತ್ತದೆ. ಈ ವಿಶೇಷ ಕ್ರಿಯೆ ಹಾಗೂ ತರಬೇತಿಯಲ್ಲದೆ ಮತ್ತಿತರ ಸಾಮಾನ್ಯ ಸ್ತರದ ಯಶಸ್ಸು, ವಿಜ್ಞಾನ, ಕಲೆ, ಜೀವನದ ಲಯ, ಬುದ್ಧಿಯನ್ನು ತೃಪ್ತಿಪಡಿಸುವ ವಿಷಯಗಳು, ಮನುಷ್ಯನ ಪ್ರಕೃತಿಯ ಸೌಂದರ್ಯ ಹಾಗೂ ಅಸೌಂದರ್ಯ ಶಕ್ತಿಗಳನ್ನು ತಿಳಿಯಬೇಕಾಗಿರುತ್ತದೆ. ಪ್ರಾಚೀನ ಭಾರತದಲ್ಲಿ ಇವು ವಿಭಿನ್ನವಾಗಿದ್ದು ಹಾಗೂ ಅನೇಕವಾಗಿದ್ದು, ಅವುಗಳ ಸೂಕ್ಷ್ಮ ತಿಳುವಳಿಕೆಯನ್ನು, ವೈಶಾಲ್ಯತೆಯನ್ನು, ತಿಳಿಸಿಕೊಡಲಾಗುತ್ತಿತ್ತು. ಇದು ಆ ಸಂಸ್ಕೃತಿಯ ಎಲ್ಲಾ ಜನರಿಗೆ ಅದು ಲಭ್ಯವಾಗಿತ್ತು.

ಎಲ್ಲಕ್ಕಿಂತ ಮಿಗಿಲಾದ ವಿಷಯ

ಇವುಗಳಿಗೆಲ್ಲ ಅವಕಾಶವಿದ್ದುದೇ ಆದರೂ, ಜೀವಸತ್ತ್ವದ ಅನನ್ಯವಾದ ಸ್ವಾತಂತ್ರ್ಯವನ್ನು ಉಪಯೋಗಿಸಿಕೊಂಡು, ಜೀವನಾದೇಶದ ಉನ್ನತ ಮೌಲ್ಯಗಳನ್ನು ಗಮನದಲ್ಲಿರಿಸಿಕೊಂಡು, ಇನ್ನಿತರ ಪ್ರಾಚೀನ ಸಂಸ್ಕೃತಿಗಳಂತೆ ಭಾರತೀಯ ಸಂಸ್ಕೃತಿಯು ತನ್ನನ್ನು ಸೀಮಿತಗೊಳಿಸಿಕೊಳ್ಳಲಿಲ್ಲ. ಅದು ವ್ಯಕ್ತಿಗೆ ಹೇಳಿತು: "ಇದೇನಿದ್ದರು ಒಂದು ಉಪ ಕಟ್ಟಡ: ಇದು ಮುಖ್ಯವೇನೋ ಹೌದು. ಆದರೆ ಎಲ್ಲವೂ ಇದೇ ಅಲ್ಲ. ಇದೇ ಅಂತ್ಯವಲ್ಲ. ನೀನು ಸಮಾಜಕ್ಕೆ ನಿನ್ನ ಋಣವನ್ನು ತೀರಿಸಿದ ನಂತರ, ಜೀವನದಲ್ಲಿ ಒಂದು ಪರಿಪಕ್ವವಾದ ಸ್ಥಾನವನ್ನು ಪಡೆದನಂತರ, ಆ ಜೀವನವು ಸರಿಯಾಗಿ ನಡೆಯುವಲ್ಲಿ ಸಹಕರಿಸಿದ್ದಾಗ, ಅದರಿಂದ ನಿನಗೆ ಸಲ್ಲಬೇಕಾದ ಇಚ್ಛೆಗಳನ್ನು ತೃಪ್ತಿಗಳನ್ನು ಪೂರೈಸಿಕೊಂಡಾಗ, ಆಗಲೂ ಸಹ ಎಲ್ಲಕ್ಕಿಂತ ಮಿಗಿಲಾದ

ವಿಷಯವೊಂದಿದೆ. ನಿನ್ನದೇ ಆತ್ಮವಿದೆ. ನಿನ್ನ ಒಳ ಅಂತರ್ಯವಿದೆ. ಅನಂತದ ಆಧ್ಯಾತ್ಮಿಕ ಭಾಗವಾದ ಆತ್ಮವಿದೆ. ಅನಂತದ ಸಾರವಾದ ಆತ್ಮವಿದೆ. ಈ ನಿನ್ನಲ್ಲಿರುವ ಆತ್ಮವನ್ನು ನೀನು ಹುಡುಕಬೇಕು. ಇದನ್ನು ಕಂಡುಹಿಡಿಯಲೆಂದೇ ನೀನಿಲ್ಲಿದ್ದೀಯ. ನಾನು ನಿನಗೆ ನೀಡಿದ ತರಬೇತಿಯನ್ನು ಆಧರಿಸಿ ನೀನು ನಿಂತಿರುವ ಸ್ಥಳದಿಂದ ಕಂಡುಹಿಡಿಯಲು ಪ್ರಯತ್ನಿಸಬೇಕು. ಪ್ರತಿ ವರ್ಣಕ್ಕೂ ಅದರದೇ ಆದ ಉನ್ನತ ಆದರ್ಶವನ್ನು ನಾನು ನಿರೂಪಿಸಿದ್ದೇನೆ. ನಿನ್ನ ಪ್ರಕೃತಿ ಮಾಡಬಲ್ಲ ಅತ್ಯುನ್ನತ ಆದರ್ಶವನ್ನು ನಿರೂಪಿಸಿದ್ದೇನೆ. ನಿನ್ನ ಜೀವನವ್ನು ಸಂಸ್ಕೃತಿಯನ್ನು ಆ ಔನ್ನತ್ಯದ ಕಡೆ ತಿರುಗಿಸಿ ನೀನು ಆದರ್ಶದತ್ತ ಬೆಳೆಯಲು ಮಾತ್ರ ಸಾಧ್ಯವಲ್ಲ, ವಿಶ್ವಸಂಸ್ಕೃತಿಯ ಸಾಮರಸ್ಯವನ್ನು ಸ್ವೀಕರಿಸಲು ನಿನ್ನಿಂದ ಸಾಧ್ಯ, ಉನ್ನತ ಪ್ರಕೃತಿಯಾದ ದೈವತ್ತ್ವವನ್ನು ಪಡೆದು ಸಮಾಧಿಸ್ಥಿತಿಯನ್ನು ಪಡೆಯಲು ಸಾಧ್ಯ. ಅದು ನಿನ್ನ ಮುಂದಿರುವ ನಿಜವಾದ ಗುರಿ. ನಾನು ನೀಡಿದ ಜೀವನದ ಆಧಾರದ ಮೇಲೆ ನೀನು ಮೇಲೆದ್ದು ನಿನ್ನನ್ನು ಆಧ್ಯಾತ್ಮಿಕವಾಗಿ ಬಿಡುಗಡೆಗೊಳಿಸಿಕೊಳ್ಳುವ ಮೋಕ್ಷವನ್ನು ಸಾಧಿಸುವೆ. ಈ ಎಲ್ಲ ಮಿತಿಗಳಿಂದ ಮೀರಿ, ನಿನಗಾಗಿರುವ ತರಬೇತಿಯನ್ನು ಮೀರಿಸಿ, ನೀನು ಧರ್ಮದ ಮೂಲಕ ಬೆಳೆಯಬಹುದು, ನಿನ್ನನ್ನು ಮೀರಿ ನಿನ್ನದೇ ಅನಂತತೆಯಲ್ಲಿ ಸೇರಬಹುದು, ಅನಂತವಾದ ಅಮರನಾದ ಆ ಪರಮಾತ್ಮನಲ್ಲಿ ಆತನ ಸ್ವತಂತ್ರ, ಬೃಹತ್, ಪರಿಪೂರ್ಣ ಆನಂದದಲ್ಲಿ ನೀನು ಸೇರಬಹುದು, ಪ್ರತಿಯೊಬ್ಬನ ಮುಖದ ಪರದೆಯ ಹಿಂದೆ ಇರುವುದೇ ಈ ದರ್ಶನ. ನೀನು ಇದನ್ನು ಸಾಧಿಸಿದಾಗ ನೀನು ಸ್ವತಂತ್ರನಾದಂತೆ. ಆಗ ನೀನು ಎಲ್ಲಾ ಧರ್ಮಗಳನ್ನು ಮೀರಿನಿಂತಿರುತ್ತೀಯ. ಆವಾಗ ಎಲ್ಲರ ಒಳಿತಿಗಾಗಿ ದೈವಿಕ ಸ್ವಾತಂತ್ರ್ಯವನ್ನು ಉಪಯೋಗಿಸಿಕೊಂಡು ಎಲ್ಲಾ ಜೀವಿಗಳಿಗೆ ಕಲ್ಯಾಣವುಂಟುಮಾಡುವ ಕೆಲಸದಲ್ಲಿ ನಿರತನಾಗಬಹುದು; ಇಲ್ಲಿ, ಏಕಾಂತದಲ್ಲಿ ಆ ಮಹದಾನಂದವನ್ನು ಅನುಭವಿಸುತ್ತಾ ಸಮಾಧಿ ಸ್ಥಿತಿಯಲ್ಲಿರಬಹುದು.” ನಾಲ್ಕು ವರ್ಣಗಳ ಮೇಲೆ ಆಧಾರಿತವಾಗಿ ನಿಂತ ಇಡೀ ಸಮಾಜದ ವ್ಯವಸ್ಥೆಯನ್ನು ಆತ್ಮನು ದೇಹವು ಹಾಗೂ ಜೀವನು ಮೇಲೇರಲು ಬೇಕಾದ ಸಾಮರಸ್ಯಪೂರ್ಣವಾದ ದಾರಿಯನ್ನಾಗಿ ಮಾಡಲಾಗಿತ್ತು. ಮೊದಲು ನಮ್ಮ ಧರ್ಮದ ನ್ಯಾಯವನ್ನು ಔನ್ನತ್ಯಕ್ಕೇರಿಸಿ, ನಂತರ ಅಂತ್ಯದಲ್ಲಿ ಅದಕ್ಕೆ ಅತಿ ಹೆಚ್ಚಿನ ಆಧ್ಯಾತ್ಮಿಕ ಸ್ವಾತಂತ್ರ್ಯವನ್ನು ನೀಡುವುದಾಗಿತ್ತು. ಮನುಷ್ಯನ ನಿಜವಾದ ಜೀವನದ ಗುರಿ ಈ ಆತ್ಮದ ಸಾಕ್ಷಾತ್ಕಾರವಾಗೇ ಇತ್ತು. ಈ ರೀತಿ ತನ್ನೊಳಗಿನ ಅಂತರಂಗದಲ್ಲಿರುವ ಅನಂತ ಹಾಗೂ ಅಮರವಾದದ್ದನ್ನು ಪಡೆಯುವ ರಹಸ್ಯವೇ ಇದಾಗಿತ್ತು.

ನಾಲ್ಕು ಜೀವನದ ಸಹಜವಾದ ಹಂತಗಳು: ಆಶ್ರಮಗಳು

ಭಾರತೀಯ ವ್ಯವಸ್ಥೆಯು ವ್ಯಕ್ತಿಯನ್ನು ತನ್ನ ಅಂತರಂಗದ ಸಹಾಯವಿಲ್ಲದೆ ಮುಂದುವರೆಯಲು ಬಿಡುವುದಿಲ್ಲ. ಹಾಗಾಗಿ ಅದು ವ್ಯಕ್ತಿಗೆ ಒಂದು ಚೌಕಟ್ಟನ್ನು ಹಾಕಿಕೊಟ್ಟಿತ್ತು. ಅವನು ಜೀವನವನ್ನು ಸರಿಯಾಗಿ ನಡೆಸಲು ಒಂದು ತುಲನಾತ್ಮಕ ವ್ಯವಸ್ಥೆಯನ್ನು ನೀಡಿ, ಜೀವನದ ಏಣಿಯನ್ನು ಹತ್ತಲು ಸಹಕರಿಸಿತ್ತು. ಈ ಸವಲತ್ತನ್ನೇ ನಾವು ನಾಲ್ಕು ಆಶ್ರಮಗಳಲ್ಲಿ ಕಾಣುತ್ತೇವೆ. ಜೀವನವನ್ನು ನಾಲ್ಕು ಸಹಜವಾದ ಭಾಗಗಳಾಗಿ ವಿಭಜಿಸಲಾಯಿತು. ಈ ಪ್ರತಿಯೊಂದು ಭಾಗವೂ ಜೀವನದ ಸಾಂಸ್ಕೃತಿಕ ರೂಪರೇಷೆಯ ಜೊತೆ ಮಿಳಿತವಾಗಿತ್ತು. ವಿದ್ಯಾರ್ಥಿಯ ದೆಸೆಯ ಕಾಲವೊಂದಾಗಿತ್ತು. ಗೃಹಸ್ಥನ ಕಾಲ ಮತ್ತೊಂದಾಗಿತ್ತು. ಕಾಡಿನಲ್ಲಿ ವಾಸಿಸುವ ವಾನಪ್ರಸ್ಥದ ಕಾಲ ಮಗದೊಂದಾಗಿತ್ತು. ಇನ್ನೊಂದು ಸ್ವತಂತ್ರ ಸಾಮಾಜಿಕ ಮನುಷ್ಯ ಪರಿವ್ರಾಜಕನದಾಗಿತ್ತು. ವಿದ್ಯಾರ್ಥಿ ದೆಸೆಯಲ್ಲಿ ಜೀವನದಲ್ಲಿ ಮನುಷ್ಯ ಏನು ತಿಳಿದಿರಬೇಕು ಎಂಬುದರ ಆಧಾರದ ಮೇಲೆ ಅಡಿಪಾಯ ಹಾಕಲಾಗುತ್ತಿತ್ತು. ಆ ದೆಸೆಯಲ್ಲಿ ಕಲೆ, ವಿಜ್ಞಾನ, ಜ್ಞಾನದ ವಿವಿಧ ಶಾಖೆಗಳಲ್ಲಿ ತರಬೇತಿ ನೀಡಲಾಗುತ್ತಿತ್ತು. ಆದರೆ ಅದಕ್ಕಿಂತ ಹೆಚ್ಚಾಗಿ ಮೌಲ್ಯಾಧಾರ ಶಿಕ್ಷಣದ ಶಿಸ್ತನ್ನು ಪ್ರಾರಂಭಿಕ ವೈದಿಕ ಸಾಹಿತ್ಯದ ಅಂಗವಾದ ಆಧ್ಯಾತ್ಮಿಕ ವಿದ್ಯೆಯ ಮೂಲಕ ನೀಡಲಾಗುತ್ತಿತ್ತು. ಪ್ರಾಚೀನ ಕಾಲದಲ್ಲಿ ಇಂತಹ ಶಿಕ್ಷಣವನ್ನು ನಗರಗಳಿಂದ ದೂರವಾಗಿ ಅದಕ್ಕೆ ಸರಿಯಾದ ವಾತಾವರಣದಲ್ಲಿ ನೀಡಲಾಗುತ್ತಿತ್ತು. ಇನ್ನು ಅಧ್ಯಾತ್ಮರಾದರೋ ಇಂತಹದೇ ಶಿಕ್ಷಣದ ಮೂಲಕ ತರಬೇತಿ ಪಡೆದವರಾಗಿ, ಅನೇಕ ಬಾರಿ ಆಧ್ಯಾತ್ಮಿಕ ಜ್ಞಾನದಲ್ಲಿ ಸಾಕ್ಷಾತ್ಕಾರ ಪಡೆದವರೇ ಆಗಿರುತ್ತಿದ್ದರು. ಆದರೆ ನಂತರದ ದಿನಗಳಲ್ಲಿ ವಿದ್ಯಾಭ್ಯಾಸವು ಬೌದ್ಧಿಕವಾಯಿತು, ದಿನನಿತ್ಯದ ವಿಷಯವೇ ಆಯಿತು. ಅದನ್ನು ನಗರಗಳಲ್ಲಿ ವಿಶ್ವವಿದ್ಯಾನಿಲಯಗಳಲ್ಲಿ ನೀಡತೊಡಗಿದ್ದರು. ಹಾಗೂ ಈ ವಿದ್ಯಾಭ್ಯಾಸವು ವ್ಯಕ್ತಿಯ ಅಂತರಂಗದ ಗುಣ ಹಾಗೂ ಜ್ಞಾನವನ್ನು ಸಮೃದ್ಧಗೊಳಿಸುವ ಬದಲು ಬುದ್ಧಿಯ ಚಟುವಟಿಕೆ ಹಾಗೂ ತರಬೇತಿಗೆ ಸೀಮಿತವಾಗಿತ್ತು. ಆದರೆ ಒಬ್ಬ ಆರ್ಯನು ಆರಂಭದಲ್ಲಿ ತನ್ನ ಜೀವನದ ನಾಲ್ಕು ಪ್ರಮುಖ ವಿಷಯಗಳಿಗೆ ಕೆಲವುಮಟ್ಟಿಗೆ ಸಿದ್ಧನಾಗಿಯೇ ಇರುತ್ತಿದ್ದ – ಅರ್ಥ, ಕಾಮ, ಧರ್ಮ, ಮೋಕ್ಷ. ಗೃಹಸ್ಥಾಶ್ರಮಕ್ಕೆ ಬರುತ್ತಿದ್ದಂತೆ ತನ್ನ ತಿಳುವಳಿಕೆಯಿಂದಾಗಿ ಅವನು ಮೊದಲ ಮೂರನ್ನು ಪಾಂಗಿತವಾಗಿ ಮಾಡುತ್ತಿದ್ದ. ತನ್ನ ಜೀವನಕ್ಕೆ ತೃಪ್ತಿ ನೀಡಲು ತನ್ನ ಜೀವನದಲ್ಲಿ ಸಂತೋಷವನ್ನು ಅನುಭವಿಸುತ್ತಿದ್ದ. ಅವನು ಸಮಾಜಕ್ಕೆ ಹಿಂತಿರುಗಿಸಬೇಕಾದ ಋಣವನ್ನು ಹಿಂತಿರುಗಿಸುತ್ತಿದ್ದ. ಹಾಗೂ ಜೀವನದ ಅಂತಿಮ ಗುರಿಯನ್ನು ಮನಸ್ಸಿನಲ್ಲಿಟ್ಟುಕೊಂಡು ಅವನು ತನ್ನ ಜೀವನವನ್ನು ತರಬೇತುಗೊಳಿಸುತ್ತಿದ್ದ. ಮೂರನೆಯ ಹಂತದಲ್ಲಿ ಅವನು ಕಾಡಿನಲ್ಲಿ ವಿಶ್ರಾಂತಿ ಪಡೆಯುತ್ತಿದ್ದ. ಹಾಗೆ ಪಡೆಯುವಾಗ ಏಕಾಂತದಲ್ಲಿ ತನ್ನ ಅಂತರಾತ್ಮನ ಸತ್ಯವನ್ನು

ತಿಳಿಯಲು ಪ್ರಯತ್ನಿಸುತ್ತಿದ್ದ. ಆತ ಸಮಾಜದ ಕಟ್ಟುಪಾಡುಗಳಿಂದ ದೂರವಾಗಿ ವಿಹಿತವಾದ ಸ್ವಾತಂತ್ರ್ಯವನ್ನು ಅನುಭವಿಸುತ್ತಿದ್ದ. ಆಗ ತನ್ನ ಸುತ್ತ ಪ್ರಶ್ನೆ ಕೇಳುವ ಯುವಕರನ್ನು ಸೇರಿಸಿಕೊಳ್ಳುತ್ತಿದ್ದ. ಹೀಗೆ ಸತ್ಯಶೋಧಕರಾಗಿ ಬರುವ ಯಾರೇ ಇದ್ದರೂ ಅವರನ್ನು ಸ್ವಾಗತಿಸುತ್ತಿದ್ದ. ಮುಂದೆ ಬರುತ್ತಿದ್ದ ಯುವ ಪೀಳಿಗೆಗೆ ತಾನು ಕಲಿತ ಜ್ಞಾನವನ್ನು, ಪಡೆದ ಅನುಭವವನ್ನು ಹಂಚುತ್ತಿದ್ದ. ಹಾಗಾಗಿ ಅವನು ಆಚಾರ್ಯ ಎಂದು, ಗುರು ಎಂದು ಎನಿಸಿಕೊಳ್ಳುತ್ತಿದ್ದ. ಜೀವನದ ಕಡೆಯ ಹಂತದಲ್ಲಿ ಉಳಿದ ಎಲ್ಲಾ ಸಂಬಂಧಗಳನ್ನು ಕಿತ್ತೆಸೆಯುವ ಹಾಗೂ ಪ್ರಪಂಚದಲ್ಲಿ ಸಂನ್ಯಾಸಿಯಾಗಿ ಅಲೆಯುವ ಆಧ್ಯಾತ್ಮಿಕವಾಗಿ ಸ್ವತಂತ್ರನಾಗಿ ಎಲ್ಲಾ ರೀತಿಯ ಸಾಮಾಜಿಕ ಬಂಧನಗಳಿಂದ ವಿಹಿತನಾಗಿ, ತೀರಾ ಉಳಿದ ಆವಶ್ಯಕತೆಗಳನ್ನು ಮಾತ್ರ ಗಮನದಲ್ಲಿಟ್ಟುಕೊಂಡು, ವಿಶ್ವಚೇತನದ ಜೊತೆ ತನ್ನ ಸಂಪರ್ಕವನ್ನು ಸಾಧಿಸಿ, ಅನಂತದತ್ತ ಪಯಣ ನಡೆಸಲು ಅವನು ಸಿದ್ಧನಾಗುತ್ತಿದ್ದ. ಈ ಚಕ್ರ ಎಲ್ಲರಿಗೂ ನಿಯಮವಾಗೇನೂ ಇರಲಿಲ್ಲ. ಅನೇಕರು ಮೊದಲೆರಡು ಆಶ್ರಮವನ್ನು ದಾಟಿ ಹೋಗುತ್ತಿರಲಿಲ್ಲ. ಇಂಕೆಲವರು ವಾನಪ್ರಸ್ಥಕ್ಕೆ ಹೋದವರು ಅಲ್ಲಿಯೇ ತೀರಿಹೋಗುತ್ತಿದ್ದರು. ಕೆಲವೇ ಕೆಲವರು ಕಡೆಯ ಆಶ್ರಮಕ್ಕೆ ಕಾಲಿಟ್ಟು ತಿರುಗಾಡುವ ಸಂನ್ಯಾಸಿಯ ಜೀವನವನ್ನು ಸಾಗಿಸುತ್ತಿದ್ದರು. ಆದರೆ ಈ ಚಕ್ರವು ಮನುಷ್ಯನ ಅಂತಃಶಕ್ತಿಯನ್ನು ಗಮನದಲ್ಲಿಟ್ಟುಕೊಂಡು ಒಂದು ಯೋಜನೆಯನ್ನು ಸಿದ್ಧಪಡಿಸುತ್ತಿತ್ತು. ಅದರ ಅನುಕೂಲವನ್ನು ಪ್ರತಿಯೊಬ್ಬನೂ ತಮ್ಮ ಪ್ರಗತಿಗೆ ಅನುಕೂಲವಾಗಿ ಪಡೆಯಬಲ್ಲವರಾಗಿದ್ದರು. ಕೆಲವರು ಈ ಜನ್ಮದಲ್ಲಿ ಸಾಕಷ್ಟು ವಿಕಾಸಗೊಂಡು ಈ ಜೀವನಚಕ್ರವನ್ನು ಪೂರ್ಣವಾಗಿ ಮಾಡಬಲ್ಲವರಾಗಿದ್ದರು.

ಈ ಗಟ್ಟಿಯಾದ ಅರ್ಥವತ್ತಾದ ಅಡಿಪಾಯದ ಮೇಲೆ ಭಾರತೀಯ ಸಭ್ಯತೆಯು ಪ್ರೌಢಿಮೆಯನ್ನು ಪಡೆದಿದ್ದು, ಶ್ರೀಮಂತವಾಗಿ, ಅನನ್ಯವಾಗಿ, ಭವ್ಯವಾಗಿ ಬೆಳೆದು ನಿಂತಿತ್ತು. ಅದು ತನ್ನ ಕಣ್ಣೆದುರಿಗೆ ಭವ್ಯವಾದ ಪರ್ವತ ಶಿಖರದ ಕಡೆ ತನ್ನ ದೃಷ್ಟಿಯನ್ನು ನೆಟ್ಟಿದ್ದರೂ, ಕೆಳಸ್ತರದ ಜೀವನವನ್ನು ಅದು ಕಡೆಗಾಣಿಸಲಿಲ್ಲ. ಅದು ನಗರದ ವ್ಯಸ್ತ ಜೀವನದ ಜೊತೆಗೆ ವಿಶ್ರಾಂತ ಗ್ರಾಮಜೀವನವನ್ನು ತನ್ನದಾಗಿಸಿಕೊಂಡಿತ್ತು. ಕಾಡಿನ ಏಕಾಂತ ಹಾಗೂ ಸ್ವಾತಂತ್ರ್ಯವನ್ನು ತನ್ನದಾಗಿಸಿಕೊಂಡಿತ್ತು. ಹಾಗೂ ಅನಂತರವಾಗಿ ವಿಸ್ತರಿಸಿರುವ ಆಕಾಶವನ್ನು ತನ್ನದಾಗಿಸಿಕೊಂಡಿತ್ತು. ಜೀವನ ಮತ್ತು ಸಾವಿನ ನಡುವೆ ಗಟ್ಟಿಯಾಗಿ ಕಾಲು ಹಾಕುತ್ತಾ ಅವೆರಡಕ್ಕಿಂತಲೂ ಮಿಗಿಲಾಗಿ ನೋಡುವ ಶಕ್ತಿಯನ್ನು ಬೆಳೆಸಿಕೊಂಡು, ಅಮರತ್ವಕ್ಕೆ ನೂರಾರು ದಾರಿಯನ್ನು ಹುಡುಕಿತ್ತು. ಹೊರಾವರಣದ ಪ್ರಕೃತಿಯನ್ನು ಬೆಳೆಸಿ ಅದನ್ನು ಅಂತರಂಗದೊಳಗೆ ಸೇರಿಸಿಕೊಂಡಿತ್ತು. ಜೀವನವನ್ನು ಅಂತರಂಗದ ಆತ್ಮನೊಳಗೆ ಸಮಾವೇಶಗೊಳ್ಳುವಂತೆ ಮಾಡಿತ್ತು. ಹೀಗೆ ಅಡಿಪಾಯ ಹಾಕಲಾದ, ತರಬೇತಿ ಪಡೆದ, ಪ್ರಾಚೀನ ಭಾರತೀಯ

ಸಂಕುಲವು ಸಂಸ್ಕೃತಿ ಹಾಗೂ ಸಭ್ಯತೆಯ ಉತ್ತುಂಗಶಿಖರವನ್ನು ಹತ್ತಿತ್ತು. ಅಂತಹ ಸಂಸ್ಕೃತಿ–ಸಭ್ಯತೆಯ ಆಯಾಮ ವಿಶಾಲವಾಗಿದ್ದು, ಶಕ್ತಿಯುತವಾಗಿದ್ದು, ಸ್ವತಂತ್ರವಾಗಿತ್ತು. ಅದು ಒಂದು ಮಹತ್ತಾದ ಸಾಹಿತ್ಯವನ್ನು ಸೃಷ್ಟಿಸಿತ್ತು. ವಿಜ್ಞಾನ, ಕಲೆ, ಕರಕುಶಲತೆ, ಉದ್ಯಮಗಳನ್ನು ಸೃಷ್ಟಿಸಿತ್ತು. ಆದರ್ಶದ ಉತ್ತುಂಗವನ್ನು ಅದು ಮುಟ್ಟಿತ್ತು. ಜ್ಞಾನ ಮತ್ತು ಅದರ ಉಪಯೋಗದ ಮಹತ್ತನ್ನು ಅದು ಸಾಧಿಸಿತ್ತು. ಒಂದು ಕಡೆ ವೀರ್ಯವಂತರಿದ್ದರೆ ಮತ್ತೊಂದು ಕಡೆ ಮಹಾದಾನಿಗಳಿದ್ದರು, ಮಹಾಕರುಣಾಳುಗಳು ಇದ್ದರು. ಆಧ್ಯಾತ್ಮಿಕ ತತ್ತ್ವಶಾಸ್ತ್ರಕ್ಕೆ ಅದು ಭದ್ರವಾದ ಬುನಾದಿ ಹಾಕಿತ್ತು. ಅದು ಹೊರಪ್ರಕೃತಿಯ ರಹಸ್ಯಗಳನ್ನು ಪರೀಕ್ಷಿಸಿ ಅರ್ಥೈಸಿತ್ತು. ಹಾಗೇ ಅಂತರಂಗದ ಸತ್ಯವನ್ನು ಕಂಡುಹಿಡಿದು ತೆರೆದಿಟ್ಟಿತ್ತು. ಅದು ಆತ್ಮವನ್ನು ಪರಿಶೋಧಿಸಿತ್ತು, ಪ್ರಪಂಚವನ್ನೇ ತನ್ನದಾಗಿಸಿಕೊಂಡಿತ್ತು. ಸಭ್ಯತೆಯು ಐಶ್ವರ್ಯವಂತನಾಗಿ, ಸಂಕೀರ್ಣವಾಗಿ ಬೆಳೆದಂತೆ, ಅದು ತನ್ನ ಮೊದಲಿದ್ದ ಅಮೋಘವಾದ ಸರಳತೆಯನ್ನು ಕಳೆದುಕೊಂಡಿತ್ತು. ಬೌದ್ಧಿಕ ವಿಕಾಸ ಹಿರಿದಾಯಿತು, ಅಗಲವಾಯಿತು. ಆದರೆ ಸ್ಫೂರ್ತಿ ಮಾಯವಾಯಿತು. ಅಥವಾ ಋಷಿಮುನಿಗಳ ಅಂತರಂಗದೊಳಗೆ ಹೋಗಿ ಕುಳಿತುಕೊಂಡಿತು ಎಂದು ಹೇಳಬಹುದು. ವೈಜ್ಞಾನಿಕ ವ್ಯವಸ್ಥೆಯನ್ನು ಕುರಿತು ಮಾತನಾಡಲು ಹೆಚ್ಚು ಪ್ರಯತ್ನಿಸಲಾಯಿತು. ಸ್ಪಷ್ಟವಾಗಿರಬೇಕು, ವ್ಯವಸ್ಥಿತವಾಗಿರಬೇಕು, ಜೀವನ ಮತ್ತು ಮನಸ್ಸಿನ ವ್ಯವಹಾರದಲ್ಲಿ ಮಾತ್ರವಲ್ಲದೆ, ಆತ್ಮನ ವಿಚಾರದಲ್ಲಿ ಹೀಗೆ ಇರಬೇಕು ಎಂದು ಒತ್ತಡ ಹೇರಲಾಯಿತು. ಸ್ಫೂರ್ತಿಯುತವಾದ ಜ್ಞಾನ ಏನಿತ್ತು, ಅದು ನಿರಾಳವಾಗಿ ಚಲಿಸುವ ಬದಲು ಕೆದರಿದ ಕಾಲುವೆಗಳ ಮೂಲಕ ಹರಿಯಲಾರಂಭಿಸಿತ್ತು. ಸಮಾಜವು ಕೃತಕವಾಯಿತು, ಸಂಕ್ಷಿಪ್ತವಾಯಿತು. ಸ್ವಾತಂತ್ರ್ಯ ಕಡಿಮೆಯಾಯಿತು. ಆದರ್ಶ ಮೊಟಕುಗೊಂಡಿತು. ವ್ಯಕ್ತಿಯ ಮೇಲೆ ಬಂಧನದ ಹೊರೆ ಕಾಣಿಸಿತು. ವ್ಯಕ್ತಿಯ ಆಧ್ಯಾತ್ಮಿಕ ಉತ್ಥಾನಕ್ಕೆ ಅಡ್ಡಿ ಕಾಣಿಸಿತ್ತು. ಪುರಾತನವಾದ ಸೂಕ್ಷ್ಮವಾದ ಅಂತರ್ಗತ ಸಾಮರಸ್ಯವು ವಿಪರೀತ ಒತ್ತಡಕ್ಕೆ ಕಾರಣವಾಯಿತು. ಧರ್ಮದ ಬದಲು ಅರ್ಥ ಹಾಗೂ ಕಾಮಕ್ಕೆ ಹೆಚ್ಚು ಒತ್ತುಕೊಡಲಾಯಿತು. ಧರ್ಮದ ರೇಖೆಗಳು ಎಷ್ಟು ಗಟ್ಟಿಗೊಂಡವೆಂದರೆ ಅವು ಆತ್ಮನ ಸ್ವಾತಂತ್ರ್ಯಕ್ಕೆ ಅಡ್ಡಗೆರೆಗಳಾದವು. ಆಧ್ಯಾತ್ಮಿಕ ಮುಕ್ತಿಯನ್ನು ಜೀವನದಿಂದ ವಿಮುಖವಾಗಿ ಕಾಣುವ ಪ್ರಯತ್ನ ನಡೆಯಿತು. ಆದರೂ ಪ್ರಾಚೀನ ಜ್ಞಾನವು ಅಲ್ಲಲ್ಲಿ ಉಳಿದಿದ್ದು ಅವು ಸ್ಫೂರ್ತಿದಾಯಕವಾಗಿದ್ದು, ಸಾಮರಸ್ಯವನ್ನು ತರಲು ಪ್ರಯತ್ನಿಸಿದ್ದು, ಭಾರತದ ಆತ್ಮವನ್ನು ಒಂದಾಗಿ ಇಡಲು ಪ್ರಯತ್ನಿಸಿತ್ತು. ವಿನಾಶದ ದಾರಿಯಲ್ಲಿ ಭಾರತವು ನಡೆದಾಗ, ಅದರ ಪತನವಾದಾಗ, ಅದರ ಸಾಮಾಜಿಕ ಜೀವನದಲ್ಲಿ ಅಧಃಪತನ ಕಂಡಾಗ, ಘನೀಭೂತವಾದ ಅಜ್ಞಾನ ಮತ್ತು ಗೊಂದಲಮಯ ವಾತಾವರಣವಿದ್ದಾಗಲೂ ಅದೇ ಹಳೆಯ ಆತ್ಮಶಕ್ತಿಯ ಗುರಿ ಹಾಗೂ ಸಾಂಪ್ರದಾಯಿಕ ತತ್ತ್ವಗಳು ಭಾರತೀಯ ಜನರನ್ನು ಒಂದಾಗಿರಿಸುವಲ್ಲಿ

ಅವರ ಜೀವನವನ್ನು ಸಹಜವಾಗಿರಿಸುವಲ್ಲಿ ಸಹಾಯ ಮಾಡಿತ್ತು. ಅದಕ್ಕೆ ಕಾರಣ ಜೀವ ನೀಡುವ ಮಹಾಶಕ್ತಿ, ದೀಪ ಪ್ರಜ್ವಲಿಸುವಂತಹ ಆಧ್ಯಾತ್ಮಿಕ ಮನಸ್ಸು ಹಾಗೂ ಹೃದಯ; ಅದು ಈಗ ಮತ್ತೆ ಪುನರುಜ್ಜೀವನದ ಕಡೆ ತಲೆ ಎತ್ತುತ್ತಿರುವುದು ಕಂಡುಬರುತ್ತದೆ.

ಸತ್ಯಾನ್ವೇಷಣೆಯ ಅನೇಕ ಮಾರ್ಗಗಳು– ಭಾರತೀಯ ಧರ್ಮದ ಕೇಂದ್ರ ಸ್ಥಾನ

ಭಾರತೀಯ ಧರ್ಮವು ಬೌದ್ಧಿಕ ಅಥವಾ ಧಾರ್ಮಿಕ ತತ್ತ್ವಗಳನ್ನು ಪರಮ ಸತ್ಯದಿಂದ ಮೇಲಾಗಿ ಎಂದೂ ಕಂಡಿರಲಿಲ್ಲ. ಸತ್ಯಶೋಧನೆಯನ್ನು, ಯಾವುದೇ ರೂಪದಲ್ಲಿರುವ ಯಾವುದೇ ಭಾವದಲ್ಲಿರುವ ಸತ್ಯಾನ್ವೇಷಣೆಯನ್ನು, ಅಂತರಂಗದ ಅನುವದ ಮೂಲಕ ಪಡೆಯಲು, ಪ್ರಜ್ಞಾವಂತರಾಗಿ ಬಾಳಲು, ಜೀವನದ ಒಂದೇ ಗುರಿ ಎಂದು ಅದು ಭಾವಿಸಿತ್ತು. ಒಂದು ಜ್ಞಾನಶಾಖೆಯು ಜೀವನು ಪರಮಾತ್ಮನಿಂದ ಭಿನ್ನವಲ್ಲ ಎಂದು ಭಾವಿಸುತ್ತದೆ. ಆದರೆ ಮತ್ತೊಂದು ಜ್ಞಾನಶಾಖೆಯು ಜೀವನು ಪರಮಾತ್ಮನ ಅಂಶವೇ ಆದರೂ ಪ್ರಕೃತಿಯಲ್ಲಿ ಅವನಿಗಿಂತ ಭಿನ್ನ ಎಂದು ಭಾವಿಸುತ್ತದೆ. ಮೂರನೆಯ ಜ್ಞಾನ ಶಾಖೆಯು ಭಗವಂತ, ಪ್ರಕೃತಿ ಹಾಗೂ ಜೀವನನ್ನು ಮೂರು ಭಿನ್ನವಾದ ಶಕ್ತಿಗಳು ಎಂದು ಪರಿಗಣಿಸುತ್ತದೆ. ಆದರೆ ಆತ್ಮನ ಸತ್ಯದ ಬಗ್ಗೆ ಸಮಾನವಾಗಿ ನಂಬಿಕೆಗಳು ಇದ್ದಾಗ್ಗೆಯೂ, ಭಾರತೀಯ ತತ್ತ್ವದ ದ್ವೈತ ಪಂಥೀಯನಿಗೆ ಭಗವಂತನು ಪರಮಾತ್ಮನು. ಅವನಲ್ಲಿಯೇ ಪ್ರಕೃತಿ ಮತ್ತು ಮನುಷ್ಯನು ಜೀವಿಸುತ್ತಾರೆ. ಚಲಿಸುತ್ತಾರೆ. ಭಗವಂತನನ್ನು ಬೇರೆಯಾಗಿಸಿದ್ದೇ ಆದರೆ ಪ್ರಕೃತಿ ಹಾಗೂ ಮನುಷ್ಯನಿಗೆ ಯಾವುದೇ ಅರ್ಥ ಉಳಿಯುವುದಿಲ್ಲ. ಆತ್ಮನು ವಿಶ್ವಪ್ರಕೃತಿಯಾಗಿದ್ದು, (ಮಾಯೆ, ಪ್ರಕೃತಿ, ಶಕ್ತಿ ಎಂದು ಕರೆಯಲ್ಪಡುವ) ಅದು ಜೀವರುಗಳಲ್ಲಿದೆ. ಇವು ಮೂರು ಸತ್ಯಗಳು ಎಲ್ಲಾ ಭಾರತೀಯ ಧಾರ್ಮಿಕ ಪಂಥಗಳಿಂದ, ವಿಭಿನ್ನವಾದ ಧಾರ್ಮಿಕ ತತ್ತ್ವಶಾಸ್ತ್ರಗಳಿಂದ ಮಾನ್ಯತೆ ಪಡೆದಿವೆ. ಇದೇ ರೀತಿ ಸಾರ್ವತ್ರಿಕವಾಗಿ ಒಪ್ಪುವ ಮಾತು ಎಂದರೆ, ಮನುಷ್ಯ ತನ್ನೊಳಗೆ ಕಾಣುವ ಅಂತರಾತ್ಮನು, ಪರಬ್ರಹ್ಮ ಸ್ವರೂಪಿಯ ಶುದ್ಧ ಆತ್ಮನೇ ಆಗಿರುತ್ತಾನೆ. ಈ ಅನಂತ ಶಕ್ತಿಯನ್ನು ನಮ್ಮಲ್ಲಿ ಕಾಣುವ ನಮ್ಮದೇ ವೈಯಕ್ತಿಕವಲ್ಲದ, ಆದರೆ ಅನಂತವಾದುದ್ದೆಂದು ಅರಿಯುವ ಶಕ್ತಿ ನಮ್ಮಲ್ಲೇ ಇದೆ. ನಾವು ಹೇಗೇ ಅವನನ್ನು ಕಾಣುವುದೇ ಆದರೂ, ಆಧ್ಯಾತ್ಮಿಕ ಅನುಭವದ ಸತ್ಯವೆಂದರೆ ಆತ ನಮ್ಮ ಹೃದಯದಲ್ಲಿದ್ದಾನೆ. ನಮ್ಮೆಲ್ಲ ವ್ಯವಸ್ಥೆಯ ಕೇಂದ್ರದ ಒಳಗೆ ಇದ್ದಾನೆ, ಹಾಗೂ ಅವನೇ ವ್ಯವಸ್ಥೆಯಾಗಿದ್ದಾನೆ ಎಂಬುದೇ ಆಗಿದೆ. ಭಾರತೀಯ ಮನಸ್ಸಿನಲ್ಲಿರುವ ನಂಬಿಕೆಯ ವಿರೋಧಾಭಾಸಗಳು ಕೇವಲ ಭಗವಂತನನ್ನು ಎಲ್ಲದರಲ್ಲೂ, ಆತ್ಮನಲ್ಲಿ ಭಗವಂತನನ್ನು ಕಾಣುವುದೇ ಆಗಿದೆ. ಆತ್ಮಸಾಕ್ಷಾತ್ಕಾರವು ಅಗತ್ಯದ್ದು, ಅದರಿಂದ ಆತ್ಮವು ಬಿಚ್ಚಿಕೊಳ್ಳುತ್ತದೆ. ಅನಂತದಲ್ಲಿ ಇರುವುದು, ಅನಂತವನ್ನು

ಹುಡುಕಿ ಅದರಲ್ಲಿ ನಮ್ಮನ್ನು ಕಾಣುವುದು, ಭಗವಂತನ ಜೊತೆ ನಮ್ಮನ್ನು ಒಂದಾಗಿ ಕಾಣುವುದು, ಇವೇ ಧರ್ಮದ ಗುರಿ, ಇವೇ ಆಧ್ಯಾತ್ಮಿಕ ಸಾಕ್ಷಾತ್ಕಾರದ ಸಾರ. ಇದರ ಅರ್ಥವಾದಾಗ ಈ ಸತ್ಯವು ನಮಗೆ ತೃಪ್ತಿ ತಂದು ನಮ್ಮನ್ನು ಮುಕ್ತರನ್ನಾಗಿಸುತ್ತದೆ. ಈ ಉನ್ನತ ಸತ್ಯದ ಹಿಂದೆ ಜಂಗಮನಾಗಿ ಹಿಂಬಾಲಿಸುವುದು ಭಾರತೀಯ ಧರ್ಮದ ಹಾಗೂ ಅದರ ಸಾವಿರ ರೂಪಗಳ ಏಕಮೇವ ಸಾರವಾಗಿದೆ...

...ಭಾರತೀಯ ಧರ್ಮವು ಸಮಯಾತೀತವಾದ, ನಾಮಾತೀತವಾದ, ರೂಪಾತೀತವಾದ ಭಾವದ ಮೇಲೆ ನೆಲೆನಿಂತಿದೆ. ಹಾಗೆಂದು ಅದು ಕಿರಿಯ ಇತ್ತೀಚಿನ ಧರ್ಮಗಳು ಪ್ರತಿಪಾದಿಸುವ ಏಕದೇವತಾ ಉಪಾಸನೆಯನ್ನು ಮಾತ್ರ ಮಾಡುತ್ತಾ ಮಿಕ್ಕೆಲ್ಲವನ್ನು ನಿಷೇಧಿಸುವ ತತ್ತ್ವವನ್ನು ಅಂಗೀಕರಿಸುವುದಿಲ್ಲ. ಬಣ್ಣ ರಹಿತವಾದ ಏಕದೇವತಾ ಉಪಾಸನೆಯಾಗಲೀ, ಅಥವಾ ನಿರ್ವಣ್ಣವಾದ ಅನುಮಾನಾಸ್ಪದ ದೇವತಾ ಉಪಾಸನೆ ಅದರ ಆದಿಯೂ ಆಗಿರಲಿಲ್ಲ, ಮಧ್ಯವೂ ಆಗಿರಲಿಲ್ಲ, ಅಂತ್ಯವೂ ಆಗಿರಲಿಲ್ಲ. ಒಂದು ದೇವತಾ ತತ್ತ್ವವನ್ನು ಎಲ್ಲಾ ಎಂದು ಪೂಜಿಸುವುದು, ವಿಶ್ವದಲ್ಲಿರುವುದೆಲ್ಲ ಆತನೇ ಎಂದೊ ಅಥವಾ ಆತನ ಪ್ರಕೃತಿಯೆಂದೋ ತಿಳಿಯುವುದು ಒಂದು. ಹಾಗಾಗಿ ಭಾರತೀಯ ಧರ್ಮವು ಬಹು ದೇವತಾತ್ಮಕವಾದದ್ದೇನೂ ಅಲ್ಲ. ಕಾರಣ ಅದು ಈ ವಿಶ್ವಾತೀತ ಭಾವವಾಗಿ ವಿಶ್ವೋಲ್ಲಂಘನ ಅನಂತ ಚೇತನವನ್ನು ಅಂಗೀಕರಿಸುತ್ತದೆ. ಭಾರತೀಯ ಬಹುದೇವತಾ ಪೂಜೆ ಪ್ರಾಚೀನ ಯೂರೋಪಿನ ಬಹುದೇವತಾ ಪೂಜೆಯಂತಲ್ಲ. ಕಾರಣ ಬಹುದೇವತಾ ಉಪಾಸಕನಾದ ಭಾರತೀಯನಿಗೆ ತಾನು ಭಿನ್ನ ಭಿನ್ನವಾದ ರೂಪಗಳಲ್ಲಿ ಭಾವಗಳಲ್ಲಿ ಪೂಜಿಸುವ ದೇವತೆಯು ಒಬ್ಬನೇ ಎಂಬುದು ತಿಳಿದಿದೆ; ಆತನ ದೇವತೆಯು ಒಂದು ಪುರುಷನಿಂದ ಹುಟ್ಟಿದ್ದು, ಆತನ ಸ್ತ್ರೀ ದೇವತೆಗಳು ಒಂದು ಪರಮಶಕ್ತಿಯಿಂದ ಬಂದವು ಎಂದು ಅವನಿಗೆ ತಿಳಿದಿದೆ. ಜನಪ್ರಿಯವಾದ ದೇವತೋಪಾಸನೆಯಂತೆ ಕಾಣುವ ಭಾರತೀಯ ಸಂಪ್ರದಾಯಗಳು ತಾನು ತೋರುವುದಕ್ಕಿಂತ ಹೆಚ್ಚಿನದನ್ನೂ ಹೇಳುತ್ತವೆ. ಅವು ಭಗವಂತನ ಅನೇಕ ತತ್ತ್ವಗಳನ್ನು ಹೇಳುತ್ತವೆ. ಯಾವುದನ್ನು ಬಿಡುವುದಿಲ್ಲ. ಭಾರತೀಯರಲ್ಲಿರುವ ಮೂರ್ತಿಪೂಜೆ ಅರೆಬೆಂದ ಮನಸ್ಸಿನ ಅಪಕ್ವವಾದ ಚಿಂತನೆಯಲ್ಲ. ಇದು ಒಂದು ಸಂಕೇತ ಎಂಬುದನ್ನು ಆ ಸಂಕೇತವನ್ನು ಬೇಕಾದಾಗ ದೂರೀಕರಿಸಬಹುದು ಎಂದು ಮೂರ್ತಿಪೂಜಕ ತಿಳಿದಿರುತ್ತಾನೆ. ಅನಂತರದ ಧರ್ಮಗಳು ಇಸ್ಲಾಂ ಧರ್ಮದ ಭಾವನೆಯಿಂದ ಪ್ರಭಾವಿತವಾದವು. ಉದಾಹರಣೆಗೆ ನಾನಕರ ಕಾಲಾತೀತವಾದ ಮಾತು, ಅಕಾಲ. ಇಂದಿನ ಪಾಶ್ಚಿಮಾತ್ಯ ಪ್ರಭಾವಕ್ಕೆ ಸಿಲುಕಿರುವ ಬದಲಾವಣೆ ತರಲು ಪ್ರಯತ್ನಿಸುತ್ತಿರುವವರೂ ಸಹ ಪಾಶ್ಚಿಮಾತ್ಯ ಏಕದೇವತೋಪಾಸನೆಯಿಂದ ದೂರವಿರುತ್ತಾರೆ. ವಿಶೇಷವಾಗಿ ಅವರು ಇಲ್ಲಿ ಪ್ರಚಲಿತವಿರುವ ಬಾಲಿಶ ತತ್ತ್ವಗಳಿಂದ

ದೂರವಾಗಿ ಆಳವೇ ಕಾಣದ ವೇದಾಂತದ ತತ್ತ್ವಕ್ಕೆ ಆಕರ್ಷಿತರಾಗುತ್ತಿದ್ದಾರೆ. ಭಗವಂತನ ದಿವ್ಯ ವ್ಯಕ್ತಿತ್ವವು ಹಾಗೂ ಅವನ ಮತ್ತು ಮನುಷ್ಯರ ನಡುವೆ ಇರುವ ಸಂಬಂಧಗಳನ್ನು ವೈಷ್ಣವ ಮತ್ತು ಶೈವಪಂಥದವರು ಬಹಳ ಪ್ರಭಾವಶಾಲಿಯಾಗಿ ಜಂಗಮ ತತ್ತ್ವವಾಗಿ ಹೊರಂದಿದ್ದಾರೆ. ಆದರೆ ಕಾಲವೊಂದೇ ಈ ಎಲ್ಲ ತತ್ತ್ವಗಳ ಸಾರವಲ್ಲ. ಹಾಗೆಯೇ ಈ ದಿವ್ಯವ್ಯಕ್ತಿತ್ವವು ಪಾಶ್ಚಿಮಾತ್ಯರು ವೈಭವೀಕರಿಸಿರುವ ಮಾನವ ವ್ಯಕ್ತಿಗತ ದೇವತೆಯಲ್ಲ. ಭಾರತೀಯ ಧರ್ಮವನ್ನು ಪಾಶ್ಚಿಮಾತ್ಯರ ಜ್ಞಾನದ ಒರೆಯಲ್ಲಿ ಹಚ್ಚಿ ನೋಡುವುದು ಸಾಧ್ಯವಿಲ್ಲ. ಅದರ ಪೂರ್ಣ ಸ್ವರೂಪದಲ್ಲಿ ಈ ಧರ್ಮವು ಸ್ವತಂತ್ರವಾದ ಸಹನಾಭರಿತವಾದ ಎಲ್ಲಾ ಆಧ್ಯಾತ್ಮಿಕ ಪೂಜೆ ಮತ್ತು ಅನುಭವವನ್ನು ಒಳಗೊಂಡಿದೆ. ಸತ್ಯವನ್ನು ಎಲ್ಲಾ ದೃಷ್ಟಿಕೋನಗಳಿಂದ ನೋಡಲು ಹೋಗಿ, ಅದು ಎಲ್ಲರಿಗೂ ಬಾಗಿಲನ್ನು ತೆರೆದಿದೆ. ಅದು ತನಗೊಂದು ಹೆಸರನ್ನು ಕೊಡಲಿಲ್ಲ, ತನಗೊಂದು ಇತಿಮಿತಿಗಳನ್ನು ಎಳೆದುಕೊಳ್ಳಲಿಲ್ಲ. ತನ್ನೊಳಗೆ ಹುಟ್ಟಿಹಾಕಿದ ಅನೇಕ ಸಿದ್ಧಾಂತಗಳಿಗೆ ಅದು ಹೆಸರನ್ನು ನೀಡಿತಾದರೂ, ತನಗೆ ಮಾತ್ರ ಯಾವ ಹೆಸರನ್ನೂ ಕೊಟ್ಟುಕೊಳ್ಳಲಿಲ್ಲ. ಅದು ನಾಮಾತೀತವಾಗಿ, ರೂಪಾತೀತವಾಗಿ, ವಿಶ್ವರೂಪಿಯಾಗಿ, ಬ್ರಹ್ಮನಂತೆ ಅನಂತವಾಗಿ ಉಳಿದುಹೋಯಿತು. ಇನ್ನಿತರ ಧರ್ಮಗಳನ್ನು ಹೋಲಿಸಿ ನೋಡಿದಾಗ ಸಾಂಪ್ರದಾಯಿಕವಾಗಿ ಕಾಣುವ ಶಾಸ್ತ್ರಗ್ರಂಥಗಳಿಂದಾಗಿ, ಸಂಕೇತಗಳಿಂದಾಗಿ, ಗುಂಪುಗಳಿಂದಾಗಿ ಬೇರೆಯಾಗಿ ಕಂಡರೂ ಅದು ಗುಂಪುಗಾರಿಕೆಯನ್ನು ಹುಟ್ಟುಹಾಕುವ ಧರ್ಮವಾಗಿರಲಿಲ್ಲ. ಆದರೆ ಅದು ವಿಶಾಲವಾದ, ಬಹುಮುಖಿಯಾದ, ಏಕತೆಯನ್ನು ತರಲು ಪ್ರಯತ್ನಿಸುವ, ಪ್ರಗತಿಪರವಾದ ಹಾಗೂ ತನ್ನಲ್ಲೇ ಆಧ್ಯಾತ್ಮಿಕ ಸಂಸ್ಕೃತಿಯನ್ನು ಬೆಳೆಸಿಕೊಳ್ಳಬಲ್ಲ ಶಕ್ತಿಯನ್ನುಳ್ಳ ಧರ್ಮವಾಗಿತ್ತು.

ಪ್ರಾಯೋಗಿಕ ಆಧ್ಯಾತ್ಮಿಕತೆ

...ಭಾರತದಲ್ಲಿ ಅನೇಕ ಸಂತರು, ಋಷಿಗಳು, ಚಿಂತಕರು, ಧಾರ್ಮಿಕ ಮುಖಂಡರು, ಕವಿಗಳು, ಸೃಷ್ಟಿಕರ್ತರು, ವಿಜ್ಞಾನಿಗಳು, ವಿದ್ವಾಂಸರು, ನೀತಿಕಾರರು ಮಾತ್ರ ಇರಲಿಲ್ಲ; ಭಾರತದಲ್ಲಿ ರಾಜರು, ಆಡಳಿತಗಾರರು, ಯೋಧರು, ಗೆದ್ದವರು, ವೀರರು, ಗಟ್ಟಿಯಾದ ಕ್ರಿಯಾತ್ಮಕ ಕೆಲಸಗಳನ್ನು ಮಾಡಿದವರು, ಯೋಜನಾ ಚಿಂತಕರು, ಕಟ್ಟುವವರು ಇವರೂ ಇದ್ದರು. ಭಾರತದಲ್ಲಿ ಯುದ್ಧಗಳು ನಡೆದಿವೆ. ಆಡಳಿತ ನಡೆದಿದೆ. ವ್ಯಾಪಾರ ವಹಿವಾಟು, ದೇಶಾಂತರ ಪ್ರಯಾಣಗಳು ನಡೆದಿವೆ. ಭಾರತವು ತನ್ನ ಸೀಮೋಲ್ಲಂಘನೆ ಮಾಡಿ ಬೇರೆ ದೇಶಗಳಲ್ಲಿ ತನ್ನ ನಾಗರಿಕತೆಯನ್ನು ಹರಡಿದೆ. ಸಾಮ್ರಾಜ್ಯಗಳನ್ನು ಕಟ್ಟಿದೆ. ಅದು ಹಿರಿಯ ನಾಗರಿಕತೆಯ ಜನರು ಮಾಡಬಹುದಾದ್ದೆಲ್ಲವನ್ನು ಮಾಡಿದೆ. ಒಂದು ರಾಷ್ಟ್ರವು ತನ್ನ ಸ್ವಭಾವಕ್ಕೆ ತಕ್ಕುದಾದ

ತನ್ನ ಭಾವನೆಯನ್ನು ಸರಿಯಾಗಿ ಹೊರಹಾಕಬಲ್ಲ ಕ್ರಿಯೆಯಲ್ಲಿ ತನ್ನನ್ನು ತಾನು ತೊಡಗಿಸಿಕೊಳ್ಳುತ್ತದೆ. ಯಾವ ರೀತಿ ರೋಮ್ ಸಾಮ್ರಾಜ್ಯವು ತನ್ನ ಯೋಧರ ಮೂಲಕ ತನ್ನ ಆಡಳಿತಗಾರರ ಮೂಲಕ ಪ್ರಸಿದ್ಧವಾಯಿತೊ, ಹಾಗೆಯೇ ಭಾರತವು ತನ್ನ ಋಷಿಮುನಿಗಳ ಮೂಲಕ, ಧಾರ್ಮಿಕ ಮುಖಂಡರ ಮೂಲಕ ಪ್ರಸಿದ್ಧವಾಯಿತು. ಈ ಮಹಾತ್ಮರ ದೇಶದ ಮುಂಚೂಣಿಯಲ್ಲಿ ನಿಂತು ಮಾರ್ಗದರ್ಶಿ ತತ್ತ್ವಗಳನ್ನು ತೋರಿಸಿಕೊಟ್ಟರು. ಪ್ರಾಚೀನ ಭಾರತದಲ್ಲಿ ಋಷಿಗೆ ಅಗ್ರಪೂಜೆ ಆಗುತ್ತಿತ್ತು. ಆತನ ಹಿಂದೆ ಒಬ್ಬ ವೀರ ಬರುತ್ತಿದ್ದ. ನಂತರದ ಕಾಲದಲ್ಲಿ ಒಂದು ಮಹಾಪಂಕ್ತಿಯೇ ಈ ದೇಸೆಯಲ್ಲಿ ಹುಟ್ಟಿ ಬಂದಿತ್ತು. ಬುದ್ಧ, ಮಹಾವೀರರಿಂದ ರಾಮಾನುಜ, ಚೈತನ್ಯ, ನಾನಕ, ರಾಮದಾಸ, ತುಕಾರಾಮ, ಆನಂತರ ರಾಮಕೃಷ್ಣ, ವಿವೇಕಾನಂದ ಮತ್ತು ದಯಾನಂದ, ಅದರೊಟ್ಟಿಗೆ ಅನೇಕ, ರಾಜರುಭವ್ಯವಾಗಿ ರಾಜ್ಯಾಡಳಿತ ನಡೆಸಿದ ಉದಾಹರಣೆ ಇವೆ. ಇತಿಹಾಸದ ಪರಿಚಿತ ಮುಖಗಳಾಗಿ ಆರಂಭಕಾಲೀನ ಚಂದ್ರಗುಪ್ತ, ಚಾಣಕ್ಯ, ಅಶೋಕ ಗುಪ್ತ ಸಾಮ್ರಾಟರು ಇವರಿಂದ ಆರಂಭಿಸಿ ಪ್ರಸಿದ್ಧ ಹಿಂದೂ ಮತ್ತು ಮಹಮ್ಮದೀಯ ರಾಜರವರೆಗೆ ಹಾಗೂ ಆಧುನಿಕ ಕಾಲದವರೆಗೆ ಅನೇಕ ಪ್ರಸಿದ್ಧ ರಾಜರು ಆಗಿಹೋಗಿದ್ದಾರೆ. ಪ್ರಾಚೀನ ಭಾರತದಲ್ಲಿ ಗಣರಾಜ್ಯಗಳು ಇದ್ದ ಸೂಚನೆ ಸಿಗುತ್ತದೆ. ಪ್ರಜಾರಾಜ್ಯಗಳು, ಚಿಕ್ಕ ರಾಜ್ಯಗಳು, ಇದ್ದು, ಅವುಗಳ ಬಗ್ಗೆ ಹೆಚ್ಚಿನ ವಿವರಗಳು ತಿಳಿದುಬಂದಿಲ್ಲ. ನಂತರ ಬೃಹತ್ ಸಾಮ್ರಾಜ್ಯಗಳನ್ನು ಕಟ್ಟುವ ಪ್ರಯತ್ನ ನಡೆದವು. ಸಿಲೋನ್‌ನಲ್ಲಿ ವಸಾಹತುವನ್ನು ನೆಲಸಲಾಯಿತು.

ಪೂರ್ವ ದ್ವೀಪಸಮುದಾಯದಲ್ಲಿ ಭಾರತೀಯ ವಸಾಹತುಗಳು ಹುಟ್ಟಿಕೊಂಡವು. ಪಠಾಣ ಮತ್ತು ಮೊಘಲ್ ವಂಶಗಳ ಏರಿಳಿತ, ದಕ್ಷಿಣದಲ್ಲಿ ಹಿಂದೂ ಸಾಮ್ರಾಜ್ಯಗಳ ಉಳಿವಿಗೆ ಪ್ರಯತ್ನ, ರಜಪೂತ್ ಶೂರರ ವೀರಗಾಥೆಗಳು, ಮಹಾರಾಷ್ಟ್ರದಲ್ಲಿ ನಡೆದ ರಾಷ್ಟ್ರೀಯ ಆಂದೋಲನ, ಸಿಖ್ ಖಾಲಸಾದ ವಿಶಿಷ್ಟ ಇತಿಹಾಸ ಎಲ್ಲವೂ ಗಮನಿಸಬೇಕಾದ್ದೆ. ಆ ಎಲ್ಲದರ ಸರಿಯಾದ ಚಿತ್ರಣವನ್ನು ಇನ್ನೂ ಕೊಡಬೇಕಾಗಿದೆ. ಆ ಚಿತ್ರ ಸಿಕ್ಕಾಗ ಅನೇಕ ಊಹಾಪೋಹಗಳಿಗೆ ತೆರೆ ಬೀಳುತ್ತದೆ. ಈ ಎಲ್ಲವೂ ನಡೆದಿದ್ದು ಬುದ್ಧಿವಂತರಲ್ಲದ, ಚಿತ್ತಸ್ಥೈರ್ಯವಿಲ್ಲದ ಮನುಷ್ಯರಿಂದಲ್ಲ; ಮನುಷ್ಯನ ಧೀಮಂತಶಕ್ತಿಯನ್ನು ಕಳೆದುಕೊಂಡವರಿಂದ ಅಲ್ಲ; ಸಂನ್ಯಾಸಿ ದೀಕ್ಷೆಯನ್ನು ಕೊಟ್ಟು ಎಲ್ಲವನ್ನು ಪರಿತ್ಯಜಿಸಿದವರಿಂದ ಅಲ್ಲ; ಆಧ್ಯಾತ್ಮಿಕ ಚಿತ್ತದಿಂದ ಪ್ರೇರಿತರಾಗಿ ಕನಸುಗಾರರಾಗಿ ಜೀವನದಿಂದ ದೂರ ಹೋದವರಿಂದ ಅಲ್ಲ. ಅವರು ಹುಲ್ಲಿನ ಮನುಷ್ಯರಾಗಿರಲಿಲ್ಲ. ತೆಳುರಕ್ತದ ಕನಸು ಕಾಣುತ್ತ ಕುಳಿತವರಾಗಿರಲಿಲ್ಲ. ಅಂತಹ ಧೀಮಂತ ಮಂದಿಯೇ ಹಾಗೆ ರಾಷ್ಟ್ರವನ್ನು ಕಟ್ಟುವ ಯೋಜನೆಯನ್ನು ರೂಪಿಸಿದ್ದರು, ರಾಜ್ಯಗಳನ್ನು ಗೆದ್ದಿದ್ದರು, ಆಡಳಿತವನ್ನು ಬೃಹತ್ ವ್ಯವಸ್ಥೆಗಳನ್ನು ಹುಟ್ಟುಹಾಕಿದ್ದರು, ರಾಷ್ಟ್ರಗಳನ್ನು ಕಟ್ಟಿದ್ದರು. ಅವರಿಂದ ಅನೇಕ

ಕವಿಗಳಿಗೆ ಆಶ್ರಯ ಸಿಕ್ಕಿತ್ತು. ಕಲಾಕಾರರು, ವಾಸ್ತು ವಿನ್ಯಾಸಕಾರರು ಇವರನ್ನು ಗೌರವಿಸಿದ್ದರು. ಇದೇ ರಾಜರು ತಮ್ಮ ರಾಜ್ಯವನ್ನು ಉಳಿಸಿಕೊಳ್ಳಲು ವೀರ್ಯವನ್ನು ತೋರಿಸುತ್ತಾ ಹೋರಾಡಿದ್ದರು. ಭಾರತವು ಮುರಿದು ಹೋದ ಸಾಮ್ರಾಜ್ಯವಾಗಿರಲಿಲ್ಲ. ಜನಗಳಿಲ್ಲದ, ಜೀವನವೇ ಇಲ್ಲದ ಯಾವುದೋ ಒಂದು ರೀತಿ ಬದುಕಿ ಬಾಳಬೇಕು ಎಂದು ತನ್ನ ಸಂಸ್ಕೃತಿಗೆ ಜೋತುಬಿದ್ದು ಕಾಲೆಳೆದುಕೊಂಡು ಬಾಳಿದ ಸಾಮ್ರಾಜ್ಯಗಳಾಗಿರಲಿಲ್ಲ; ವಿಪರೀತ ಪರಿಸ್ಥಿತಿಗಳಲ್ಲಿ ನಾಶವಾಗಿ ಮತ್ತೆ ಹುಟ್ಟಿಬಂದ ಸಾಮ್ರಾಜ್ಯಗಳಾಗಿರಲಿಲ್ಲ. ಆಧುನಿಕ ಭಾರತದ ಪುನರ್ನವ ಧಾರ್ಮಿಕ, ಸಾಂಸ್ಕೃತಿಕ, ರಾಜಕೀಯ, ಇವೆಲ್ಲವನ್ನೂ ಪುನರ್ಜನ್ಮ ಎಂದೂ ಕರೆಯಲಾಗುತ್ತದೆ, ಆದರೆ ಈ ಟೀಕೆಯನ್ನು ಒಪ್ಪದ ಭಾರತೀಯ ಇತಿಹಾಸ, ಇದು ಹಿಂದೆಯೂ ನಡೆದಂತಹ ಪರಿಸ್ಥಿತಿಗೆ ತಕ್ಕಂತೆ ನಡೆದ ಪ್ರಕ್ರಿಯೆ ಎಂದು ಹೇಳುತ್ತದೆ. ಈ ಪ್ರಕ್ರಿಯೆ ಬದಲಾದ ರೂಪದಲ್ಲಿ, ಜನತಾ ಚಳವಳಿಯ ರೂಪದಲ್ಲಿ, ಶತಮಾನಗಳ ಕಾಲ ಭಾರತದ ಭೂಭಾಗದ ಮೇಲೆ ನಡೆದು ಬಂದಿದೆ.

ಮತ್ತೆ ನಾವು ಇದನ್ನು ನೆನಪಿನಲ್ಲಿ ಇಟ್ಟುಕೊಳ್ಳಬೇಕು – ಭಾರತದ ವಿಶಿಷ್ಟ ಸಂಸ್ಕೃತಿಯಿಂದಾಗಿ, ಅದರ ವ್ಯವಸ್ಥೆಯಿಂದಾಗಿ ಇಡೀ ರಾಷ್ಟ್ರವು ತನ್ನ ಜೀವನದಲ್ಲಿ ಸಮಾನವಾಗಿ ಆಚರಣೆಗೆ ತಂದಿತ್ತು. ಪ್ರಾಚೀನ ಕಾಲದಲ್ಲಿ ಎಲ್ಲಾ ದೇಶಗಳಲ್ಲಿ ಜನಸಾಮಾನ್ಯರು ಅಷ್ಟು ಸಕ್ರಿಯವಾಗಿ ಅಷ್ಟು ವೈವಿಧ್ಯಮಯವಾಗಿ ಭಾಗವಹಿಸಿಲ್ಲ– ಕೆಲವೊಮ್ಮೆ ಬಾಳಿನ ಮೂಲ ತತ್ತ್ವದೊಂದಿಗೆ, ಯಾವುದೇ ಐಸಿರಿಯನ್ನು ಕಾಣದೆ– ಹಾಗೆಂದು ಆಧುನಿಕ ನಾಗರಿಕತೆಗೆ ಈ ವ್ಯತ್ಯಾಸವನ್ನು ಅಳಿಸಿ ಹಾಕಲು ಆಗಿಲ್ಲ. ಆದರೂ ಹೆಚ್ಚು ಮಂದಿಗೆ ಆಲೋಚನೆ ಮತ್ತು ಜ್ಞಾನದ ಆಧಾರದ ಮೇಲೆ ಅವಕಾಶಗಳ ಬಾಗಿಲನ್ನು ತೆರೆದಿದೆ. ಆದರೆ ಪ್ರಾಚೀನ ಭಾರತದಲ್ಲಿ ಉನ್ನತ ವರ್ಗದವರು ಮುಂಚೂಣಿಯಲ್ಲಿದ್ದು, ಅಧಿಕಾರ ಮತ್ತು ಶ್ರೀಮಂತಿಕೆಯ ಬಹುದೊಡ್ಡ ಪಾಲನ್ನು ತಮ್ಮದಾಗಿಸಿಕೊಂಡಿದ್ದರು ಎಂಬುದು ನಿಜವಾದರೂ, ಅನೇಕರು ಕಡಿಮೆ ಅಧಿಕಾರ ಮತ್ತು ಶ್ರೀಮಂತಿಕೆಯಿಂದ ಉತ್ತಮ ಜೀವನ ನಡೆಸಿದ್ದರು. ಅವರ ಧಾರ್ಮಿಕ ಜೀವನವು ಬೇರೆ ರಾಷ್ಟ್ರಗಳಿಗೆ ಹೋಲಿಸಿದರೆ ತೀವ್ರವಾಗಿತ್ತು. ಅವರು ಸುಲಭವಾಗಿ ತತ್ತ್ವಶಾಸ್ತ್ರಗಳ ಆಲೋಚನೆಗಳನ್ನು ತತ್ತ್ವಗಳನ್ನು ಅರ್ಥಮಾಡಿ ಕೊಳ್ಳುತ್ತಿದ್ದರು. ಸಂತರಿಂದ ಪ್ರಭಾವಿತರಾಗುತ್ತಿದ್ದರು. ಅವರು ಬುದ್ಧನ ಮಾತುಗಳನ್ನು ಕೇಳಿದರು, ಆತನನ್ನು ಹಿಂಬಾಲಿಸಿದರು. ಬುದ್ಧನ ನಂತರ ಬಂದವರ ಮಾತುಗಳನ್ನು ಕೇಳಿದರು. ಸಂನ್ಯಾಸಿಗಳ ಮಾತುಗಳನ್ನು ಗಮನವಿಟ್ಟು ಕೇಳಿದರು. ಭಕ್ತರು, ಬಾಲ್ ಪಂಥದವರು (ಹಾಡುವವರು) ಹಾಡುವ ಹಾಡುಗಳನ್ನು ತಾವೂ ಹಾಡಿದರು. ಹಾಗಾಗಿ ಅತ್ಯುತ್ತಮ ಸೂಕ್ಷ್ಮವಾದ ಕವಿತಾ ಸಾಹಿತ್ಯವನ್ನು ಉಳಿಸಿಕೊಂಡು ಬಂದರು. ನಮ್ಮ ಧರ್ಮದ ಅನೇಕ ಹೆಸರುಗಳಿಗೆ ಅವರು ಕಾರಣರಾದರು. ಅಸ್ಪೃಶ್ಯರು

ಎಂದು ಕರೆಯುವ ಜನಾಂಗದಿಂದಲೇ ಇಡೀ ಸಮಾಜವು ಗೌರವಿಸುವಂತಹ ಸಂತರು ಹುಟ್ಟಿಕೊಂಡರು. ಪ್ರಾಚೀನ ಕಾಲದಲ್ಲಿ ಹಿಂದೂಗಳು ತಮ್ಮದೇ ರಾಜಕೀಯ ಜೀವನವನ್ನು ಶಕ್ತಿಯನ್ನು ಪಡೆದಿದ್ದರು. ಆ ಜನರನ್ನು ವೇದವು 'ವಿಸಃ' ಎಂದು ಕರೆಯುತ್ತದೆ. ಅವರಿಂದ ನಾಯಕರು ರಾಜರ ಆಯ್ಕೆಯಾಗುತ್ತಿತ್ತು. ಅವರಿಂದಲೇ ಆ ರಾಜಮನೆತನಗಳಿಂದಲೇ ಋಷಿಗಳ ಉದಯವಾಯಿತು. ಅವರು ತಮ್ಮ ಹಳ್ಳಿಗಳನ್ನೇ ಗಣರಾಜ್ಯದಂತೆ ನಡೆಸುತ್ತಿದ್ದರು; ಮಹಾಸಾಮ್ರಾಜ್ಯಗಳ ಕಾಲದಲ್ಲಿ ಅವರು ಪಂಚಾಯತಿಗಳಲ್ಲಿ ಕುಳಿತು, ನಗರದ ಆಡಳಿತ ಕಚೇರಿಗಳಲ್ಲಿ ಕುಳಿತು ಆಡಳಿತ ನಡೆಸುತ್ತಿದ್ದರು. ಈ ಆಡಳಿತಗಳ ವ್ಯಾಖ್ಯೆಗಳನ್ನು ಬರೆದವರು ಬ್ರಾಹ್ಮಣ ಪಂಡಿತರಾಗಿರಲಿಲ್ಲ, ಕ್ಷತ್ರಿಯ ಯೋಧರಾಗಿರಲಿಲ್ಲ. ಅವರೆಲ್ಲ ಜನಸಾಮಾನ್ಯರಾಗಿದ್ದರು, ವೈಶ್ಯರಾಗಿದ್ದರು. ಬಹಳ ಕಾಲದವರೆಗೆ ಅವರು ರಾಜನ ಮೇಲೆ ತಮ್ಮ ಅಭಿಪ್ರಾಯವನ್ನು ಹೇರಬಲ್ಲವರಾಗಿದ್ದರು. ಯಾವುದೇ ಹೋರಾಟದ ಆವಶ್ಯಕತೆ ಇಲ್ಲದೆ ರಾಜನು ತಮ್ಮ ಮಾತಿನಂತೆ ನಡೆಯುವುದನ್ನು ನೋಡಿಕೊಂಡಿದ್ದರು. ಯಾವುದು ಸರಿಯಲ್ಲವೋ ಅದನ್ನು ತಮಗೆ ಒಪ್ಪಿಗೆಯಾಗಲಿಲ್ಲ ಎಂದು ಸೂಚಿಸುತ್ತಿದ್ದರು. ಎಲ್ಲಿಯವರೆಗೆ ಹಿಂದೂ ರಾಜ್ಯಗಳು ಉಳಿದುಬಂದವೊ ಅಲ್ಲಿಯವರೆಗೆ ಇದೆಲ್ಲ ಸ್ವಲ್ಪಮಟ್ಟಿಗಾದರೂ ಉಳಿದುಬಂದಿತ್ತು. ಭಾರತದೊಳಗೆ ಏಷ್ಯಾ ಕೇಂದ್ರದಿಂದ ಬಂದು ನೆಲೆಸಿದ ಘೋರ ಸರ್ವಾಧಿಕಾರಿ ಶಕ್ತಿಯು ಭಾರತದ ಸ್ವಂತದ್ದಾಗಿರಲಿಲ್ಲ. ಆ ಕಾಲದಲ್ಲೂ ಭಾರತದ ಪ್ರಾಚೀನ ಭಾವನೆಗಳು ಉಳಿದು ಬಂದಿದ್ದವು. ಹಾಗಾಗಿ ಜನರು ತಮ್ಮತನವನ್ನು ಕಲೆಗಳಲ್ಲಿ ತೋರಿಸುತ್ತಿದ್ದರು. ಕವಿತೆಗಳ ಮೂಲಕ ತಮ್ಮ ಭಾವನೆಗಳನ್ನು ವ್ಯಕ್ತಪಡಿಸುತ್ತಿದ್ದರು. ಇದರ ಮೂಲಕ ಜನಸಾಮಾನ್ಯರಿಗೆ ಸಂಸ್ಕೃತಿಯನ್ನು ಹರಡುತ್ತಿದ್ದರು. ವಿಶ್ವವಿದ್ಯಾನಿಲಯಗಳ ಜೊತೆಗೆ ಪ್ರಾಥಮಿಕ ಮಟ್ಟದ ಶಿಕ್ಷಣದ ವ್ಯವಸ್ಥೆಯಿತ್ತು. ನಾಟಕ ರಂಗವು ಜನಪ್ರಿಯವಾದ ಮಾಧ್ಯಮವಾಗಿತ್ತು. ಅದು ಇಂದಿಗೂ ದೇಶದ ಕೆಲವು ಭಾಗಗಳಲ್ಲಿ ಪ್ರಚಲಿತವಿದೆ. ಈ ನಾಟಕರಂಗವು ಭಾರತಕ್ಕೆ ಕಲಾಕಾರರನ್ನು ನೀಡಿತ್ತು. ವಾಸ್ತುಶಿಲ್ಪಗಾರರನ್ನು ನೀಡಿತ್ತು. ಜನಪ್ರಿಯ ಭಾಷೆಗಳಲ್ಲಿ ಪ್ರಸಿದ್ಧ ಕವಿಗಳು ಆಗಿಹೋದರು. ಅವರೆಲ್ಲ ತಮ್ಮ ಪ್ರಾಚೀನ ಪರಂಪರೆಯನ್ನು ಆಧರಿಸಿ ಸೌಂದರ್ಯಪ್ರಜ್ಞೆಯನ್ನು ಹುಟ್ಟುಹಾಕಿದ್ದರು. ಅದು ಭಾರತೀಯ ಕಲಾಕಾರರಲ್ಲೂ ಕಂಡುಬಂದಿದ್ದು, ಆಧುನಿಕ ನಾಗರಿಕತೆಯ ಕಾಲ ಬರುವ ವೇಳೆಗೆ ಆ ಕಲಾಕಾರರಲ್ಲಿ ಅವನತಿ ಕಂಡುಬಂದಿತ್ತು. ಭಾರತದ ಜೀವನವು ತಾರ್ಕಿಕರು ಹೇಳುವಂತೆ ವಿರಾಗಿಯ ದುಃಖಮಯವಾದ, ನಿರಾಶಾದಾಯಕವಾದದ್ದಾಗಿರಲಿಲ್ಲ. ಇಲ್ಲಿಯ ಹೊರರೂಪವು ಬೇರೆ ದೇಶಕ್ಕೆ ಹೋಲಿಸಿದರೆ ಶಾಂತವಾಗಿ ಕಂಡುಬರುತ್ತದಾದರೂ ಅದು ಅಪರಿಚಿತರ ಎದುರಿಗೆ ಗಾಂಭೀರ್ಯವನ್ನು ಪ್ರದರ್ಶಿಸುವ ರೀತಿಯಾಗಿ, ಪಾಶ್ಚಿಮಾತ್ಯರಿಗೆ ಭಿನ್ನವಾಗಿ

ಕಂಡುಬರುತ್ತದೆ. ಇತ್ತೀಚಿನ ದಿನಗಳಲ್ಲಿ ವೈರಾಗ್ಯವು ಮತ್ತು ಬಡತನವು ಹಾಗೂ ಸಂಪ್ರದಾಯದ ಸ್ವಚ್ಛತೆಯನ್ನು ಕಾಪಾಡುವ ಪ್ರಯತ್ನ ಹೆಚ್ಚು ಕಂಡು ಬಂದು, ಅದರ ಪ್ರಭಾವ ಕಂಡುಬಂದಿದೆ. ಆದರೆ ನಾಡಿನಲ್ಲಿರುವ ಜೀವನವನ್ನು ಪ್ರತಿಫಲಿಸುವ ಸಾಹಿತ್ಯವು ಸಂತೋಷಪ್ರದವಾಗಿದ್ದು, ವರ್ಣಮಯವಾಗಿದೆ. ಇಂದೂ ಅನೇಕ ವಿಧವಾದ ವ್ಯಕ್ತಿ ಸಂಬಂಧ ವೈರುಧ್ಯ ಗುಣಗಳು ಕಂಡುಬಂದರೂ, ನಗೆ, ಹಾಸ್ಯ, ಸಾಂದ್ರತೆ, ಸಮಾನತೆ ಇವು ಜೀವನದ ಅಂಶವಾಗಿ ಭಾರತೀಯ ಜೀವನದಲ್ಲಿ ಕಂಡುಬರುತ್ತದೆ.

* * * *

೩. ಭಾರತೀಯ ಕಲೆ

ಪ್ರಾಚೀನ ಭಾರತೀಯ ಕಲೆಯ ಅತ್ಯುನ್ನತ ತತ್ತ್ವ– ಈ ಅತ್ಯುನ್ನತ ತತ್ತ್ವವೇ ಮಿಕ್ಕವುಗಳಿಗೆ ಅವುಗಳ ಗುಣವನ್ನು ನಿಗದಿಪಡಿಸುತ್ತವೆ ಹಾಗೂ ಅದರ ಮೇಲೆ ತನ್ನತನವನ್ನು ಅಚ್ಚು ಒತ್ತುತ್ತದೆ... ಇದು ತನ್ನನ್ನು ತಿಳಿಯಪಡಿಸುವ ರೀತಿಯೂ ಹೌದು. ಅನಂತ, ಆತ್ಮನಿಗೆ ದೊರೆಯುವ ದಿವ್ಯತೆ, ಆತ್ಮನು ತನ್ನನ್ನು ಹೇಳಿಕೊಳ್ಳುವ ರೀತಿ, ಅನಂತವು ತನ್ನ ಮಿತಿಗಳ ಸಂಕೇತಗಳ ಮೂಲಕ ಜೀವಿಸುವುದು, ದಿವ್ಯತೆಯು ತನ್ನ ಶಕ್ತಿಯಿಂದಾಗಿ ಆವಿರ್ಭವಿಸುವುದು. ಅಥವಾ ದೇವತಾಶಕ್ತಿಗಳನ್ನು ಪ್ರಕಟಿಸುವುದು, ಪ್ರಕಾಶಮಾನವಾಗಿ ಅರ್ಥೈಸುವುದು ಅಥವಾ ಆತ್ಮಗ್ರಾಹಿಯಾಗುವುದು ಅಥವಾ ಅದರ ಭಕ್ತಿಯಲ್ಲಿ ಪರವಶವಾಗುವುದು ಅಥವಾ ತೀರಾ ಕಡಿಮೆಯೆಂದರೂ ಆಧ್ಯಾತ್ಮಿಕ ಅಥವಾ ಧಾರ್ಮಿಕ ಸೌಂದರ್ಯವನ್ನು ಪ್ರಕಟಪಡಿಸುವುದು. ಯಾವಾಗ ಈ ಪೂಜಾವಿಧಾನದ ಕಲೆಯು ತನ್ನ ಎತ್ತರದಿಂದ ಕೆಳಗೆ ಇಳಿದು ಮಧ್ಯಮ ಸ್ತರಕ್ಕೆ ಬರುತ್ತದೊ ಕಡಿಮೆ ಮಟ್ಟದ ದೇವತೆಗಳ, ಭೂತಪ್ರೇತಗಳ ಪ್ರತಿನಿಧಿಯಾದಾಗಲೂ ಅದು ಮೇಲ್‌ಸ್ತರದ ಭಾವಗಳನ್ನು ತನ್ನಲ್ಲಿ ಅಳವಡಿಸಿಕೊಂಡಿರುತ್ತದೆ. ಮತ್ತೆ ಅದು ಈ ಭೌತಿಕ ಪ್ರಪಂಚಕ್ಕೆ ಮೆಲ್ಲಗೆ ಇಳಿದು ಬಂದಾಗ, ಮನುಷ್ಯನ ಜೀವನಕ್ಕೆ, ಹೊರಪ್ರಕೃತಿಯ ವಿಷಯಕ್ಕೆ ಬಂದಾಗ, ಅದು ತನ್ನಲ್ಲಿದ್ದ ಹಿರಿಯ ದೃಷ್ಟಿಯನ್ನು ಉಳಿಸಿಕೊಂಡಿರುತ್ತದೆ, ಪೂಜಾವಿಧಾನದ ಗುರುತು, ಆಧ್ಯಾತ್ಮಿಕದ ಸೆಳೆತ ಹಾಗೂ ಅತಿ ಹೆಚ್ಚಿನ ಕೆಲಸಗಳಲ್ಲಿ– ಆರಾಮದ ಪ್ರಸಂಗಗಳಲ್ಲಿ ಬಿಟ್ಟು, ಹಾಸ್ಯ ಮತ್ತು ಸ್ಪಷ್ಟ ವಿಷಯಗಳಲ್ಲಿ ಬಿಟ್ಟು– ಜೀವನವನ್ನು ತೋರಿಸುವ ರೀತಿಯು ಸರಾಗವಾಗಿ ಹರಿಯುವ ಅಭೌತಿಕವಾದ ಕ್ರಿಯೆಯಂತೆ ಕಂಡುಬರುತ್ತದೆ. ಜೀವನವನ್ನು ಆತ್ಮನಲ್ಲಿ ನೋಡಲಾಗುತ್ತದೆ ಅಥವಾ ಅನಂತದ ಅಂಗವಾಗಿ ಕಾಣಲಾಗುತ್ತದೆ. ಅಥವಾ ಎಲ್ಲಕ್ಕಿಂತ ದೂರವಾಗಿ ಅಥವಾ ಇವುಗಳ ಸ್ವಲ್ಪಮಟ್ಟಿನ ಪ್ರಭಾವದಿಂದಾಗಿ ಅದರ ರೂಪ ಹಾಗೂ ತೋರಿಕೆಯಲ್ಲಿ ವ್ಯತ್ಯಾಸವಾಗುತ್ತದೆ. ಎಲ್ಲಾ ಭಾರತೀಯ ಕುಶಲಕರ್ಮಿಗಳು ಇದೇ ಆದರ್ಶದ ದಾರಿಯಲ್ಲಿ ಸಾಗುತ್ತದೆ ಎಂದು ಹೇಳಬರುವುದಿಲ್ಲ. ಅನೇಕವು ಈ ಆದರ್ಶದಿಂದ ತುಂಬಾ ದೂರ ಉಳಿದುಬಿಡುತ್ತವೆ. ಕೆಳಸ್ತರಕ್ಕೆ ಇಳಿಯುತ್ತವೆ. ಪ್ರಭಾವಶಾಲಿಯಾಗಿರುವುದಿಲ್ಲ ಅಥವಾ ಅಶ್ಲೀಲವಾಗಿರುತ್ತದೆ. ಆದರೆ, ಅದರ ಉನ್ನತ ಸ್ತರದ ಗುಣಗಳನ್ನು, ಪ್ರಭಾವಗಳನ್ನು ಗಮನಿಸಿದಾಗ

ಕಲೆಯ ನೈಜ ಅಂಶ ತಿಳಿದು, ಅದರ ಮೇಲೆ ಅದನ್ನು ನಾವು ಮೌಲಿಕವಾಗಿ ಕಾಣಬೇಕಾಗುತ್ತದೆ. ಭಾರತೀಯ ಕಲೆಯು ಭಾರತೀಯ ಸಂಸ್ಕೃತಿಗೆ ಸಮಾನವಾದ ಆಧ್ಯಾತ್ಮಿಕ ಗುರಿಯನ್ನು, ತತ್ತ್ವವನ್ನು ಹೊಂದಿದೆ.

ಆತ್ಮಾನ್ವೇಷಣೆ, ಹಾಗಾಗಿ ಭಾರತೀಯ ಕಲಾಕಾರನ ಮೂಲ ಮಾಧ್ಯಮವಾಗುತ್ತದೆ ಹಾಗೂ ಧಾರ್ಮಿಕ ಆಜ್ಞೆಯ ಪ್ರತಿಬಿಂಬವಾಗುತ್ತದೆ. ಆತ ಮೊದಲು ತನ್ನ ಒಳಗಿರುವ ಆತ್ಮನಲ್ಲಿ ಸತ್ಯಾನ್ವೇಷಣೆ ಮಾಡಿ ತನ್ನ ಸ್ಫೂರ್ತಿ ನೀಡುವ ಮನಸ್ಸಿನಿಂದ ಅವನ ಕೃತಿಗೆ ಒಂದು ರೂಪವನ್ನು ತರಬಲ್ಲ. ತನ್ನ ಮಾದರಿಗಾಗಿ ಅವನು ಹೊರಪ್ರಪಂಚದ ಜೀವನವನ್ನಾಗಲೀ, ಪ್ರಕೃತಿಯನ್ನಾಗಲೀ ನೋಡಬೇಕಾಗಿಲ್ಲ. ಇದು ಅವನ ಅಧಿಕಾರ, ಆಳ್ವಿಕೆ, ಆತನ ಗುರು, ಅಥವಾ ಗುರುವಿನಿಂದ ಬರುವ ಸೂಚನೆಗಳಿಗೂ ಸಲ್ಲುತ್ತದೆ. ಒಳಗಡೆ ಅಂತರಂಗದಲ್ಲಿ ಇರುವುದನ್ನು ಆತ ಏಕಾದರೂ ತನ್ನ ಭಾವದಲ್ಲಿ ಮೂಡಿಸಬೇಕು? ಅದು ಬುದ್ಧಿಯ ಭಾವವಲ್ಲ, ಮನಸ್ಸಿನ ಕಲ್ಪನೆಯಲ್ಲ, ತನ್ನ ಸ್ಫೂರ್ತಿಗಾಗಿ ಹೊರಗಡೆಯಿಂದ ಪಡೆಯುವ ಭಾವವಲ್ಲ. ಆದರೆ ಆತ್ಮದ್ದೇ ಆದ ಒಂದು ಭಾವ, ಕಲ್ಪನೆ, ರಸಾನುಭವ ಮತ್ತು ಮಾನಸಿಕ ಸಮವಾಯಗಳು ಈ ಸಾಗಿಸುವ ಕೆಲಸದಲ್ಲಿ ಸಹಾಯಮಾಡಿ ಅದಕ್ಕೆ ಬಣ್ಣವನ್ನು ರೂಪವನ್ನು ನೀಡುತ್ತದೆ. ಭೌತಿಕ ರೂಪ, ಬಣ್ಣ, ರೇಖೆ ಹಾಗೂ ಮಾದರಿ ಇವು ಆತನ ಭಾವನೆಗೆ ಮೆರಗು ನೀಡುವ ವಿಷಯಗಳು. ಹಾಗೆಂದು ಪ್ರಕೃತಿಯನ್ನೇ ಯಥಾವತ್ತಾಗಿ ಆತ ಪ್ರತಿಬಿಂಬಿಸಬೇಕು ಎಂದೇನೂ ಇಲ್ಲ. ಆದರೆ ತನ್ನ ದೃಷ್ಟಿಯ ಮೂಲ, ರೂಪ ಮತ್ತು ಎಲ್ಲವನ್ನೂ ವಿಶಿಷ್ಟವಾಗಿ ಮಾಡಬೇಕು. ಅದನ್ನು ಮೊದಲು ಭೌತಿಕ ಪ್ರಕೃತಿಯಿಂದ ಭಿನ್ನವಾಗಿ ಒಂದು ಸಣ್ಣ ಬದಲಾವಣೆಯೊ, ಒಂದು ಭಂಗಿಯೊ, ಒಂದು ಸ್ಪರ್ಶವೊ, ಒಂದು ಸಾಂಕೇತಿಕ ಬದಲಾವಣೆಯೊ ಸಾಕಾಗಬಹುದು. ಅದನ್ನು ಆತ ಉಪಯೋಗಿಸಲು ಪೂರ್ಣ ಸ್ವಾತಂತ್ರ್ಯವಿರುತ್ತದೆ. ಆತನ ದೃಷ್ಟಿ ಆತನದೇ ಸತ್ಯವಾದ್ದರಿಂದ ಆತ ನೋಡುತ್ತಿರುವುದರಲ್ಲಿ ಏಕಾತ್ಮತೆ ಇರುವುದರಿಂದ ಅದನ್ನು ಬಿಡಿಸುವುದು ಮೂಡಿಸುವುದು ಅವನದೇ ವ್ಯವಹಾರವಾಗಿರುತ್ತದೆ. ರೇಖೆ, ಬಣ್ಣ ಮತ್ತಿನ್ನಿತರವು ಮೊದಲು ಮೂಡುವುವಲ್ಲ. ಅದು ಕಡೆಯ ಹಂತ. ಏತಕ್ಕೆಂದರೆ ಇವು ಅವನ ಆಧ್ಯಾತ್ಮಿಕ ರೂಪವನ್ನು ಮನಸ್ಸಿನಿಂದ ಹಸ್ತಾಂತರಿಸುವ ವಿಷಯಗಳು. ಉದಾಹರಣೆಗೆ ಅವನು ಬುದ್ಧನ ಮುಖವನ್ನು ಆಗಲೀ, ಬುದ್ಧನ ಜೀವನದ ಒಂದು ಘಟನೆಯನ್ನೇ ಆಗಲಿ ಪುನಸ್ಸೃಷ್ಟಿಸುವುದು ಅವನ ಕೆಲಸವಲ್ಲ. ಆದರೆ ಆತನ ಕೆಲಸ ಆ ಪ್ರಶಾಂತನಾದ ಬುದ್ಧನ ಮುಖದಲ್ಲಿ ನಿರ್ವಾಣದ ಭಾವವನ್ನು ತರುವುದೇ ಆಗಿದೆ. ಹಾಗಾಗಿ ಆ ಪ್ರಯತ್ನದಲ್ಲಿ ಅವನು ಎಳೆಯುವ ಒಂದೊಂದು ಗೆರೆಯೂ ಆ ಭಾವವನ್ನು ಗಟ್ಟಿಮಾಡುವಂತಿರಬೇಕು. ಹಾಗೂ ಒಂದು ಮಾನವ ಭಾವವನ್ನೊ, ಒಂದು ಘಟನೆಯನ್ನೊ ಪ್ರತಿಬಿಂಬಿಸುತ್ತಿದ್ದಾಗಲೂ ಸಾಧಾರಣವಾಗಿ

ಅದಷ್ಟು ಮಾತ್ರ ಇರುವುದಿಲ್ಲ, ಅದಕ್ಕಿಂತ ಮಿಗಿಲಾದದ್ದು ಆತ್ಮಕ್ಕೆ ಸಂಬಂಧಿಸಿದ್ದು ಅಥವಾ ಆತ್ಮದಿಂದ ಹುಟ್ಟಿದ್ದು ಅಥವಾ ತಾನು ಚಿತ್ರಿಸುತ್ತಿರುವ ಕೃತಿಯ ಆತ್ಮದ ನಮೂನೆಯೊಳಗಿಂದ ಎದ್ದು ನಿಲ್ಲುವ ಮಾತಾಗಿರುತ್ತದೆ. ಯಾವ ಕಣ್ಣಿಂದ ನಾವು ಆ ಕೃತಿಯನ್ನು ನೋಡುತ್ತೇವೋ, ಆ ಕಣ್ಣುಗಳಿಗೆ ಆ ಕೃತಿ ಬಾಹ್ಯ ಮೆಚ್ಚುಗೆಯ ಭಾವವನ್ನು ಮಾತ್ರವಲ್ಲದೆ, ಅಂತರಾತ್ಮ ಮೆಚ್ಚುವಂತೆ ಇರಬೇಕು. ಇದಕ್ಕಾಗಿ ನೋಡುವವನು ಸೌಂದರ್ಯಪ್ರಜ್ಞೆಯನ್ನು ಬೆಳೆಸಿಕೊಳ್ಳಬೇಕು ಎಂದು ಸಾಧಾರಣವಾಗಿ ಹೇಳುವೆವಾದರೂ, ಭಾರತೀಯ ಕಲಾತ್ಮಕ ಸೃಷ್ಟಿಯನ್ನು ಅರಿತುಕೊಳ್ಳಲು ಆಧ್ಯಾತ್ಮಿಕ ಅಂತರ್ದೃಷ್ಟಿಯ ಅಗತ್ಯವಿರುತ್ತದೆ ಎಂಬುದನ್ನು ಮರೆಯಬಾರದು. ಇಲ್ಲವಾದರೆ ನಾವು ಹೊರ ಆವರಣದ ವಸ್ತುಗಳ ವಿಷಯವಾಗಿ ಅಥವಾ ಒಂದು ಪದರ ಕೆಳಗೆ ವಿಮರ್ಶಿಸುವ ಶಕ್ತಿ ಪಡೆಯುತ್ತೇವೆ. ಅದು ಸ್ಫೂರ್ತಿದಾಯಕವಾದ ಆಧ್ಯಾತ್ಮಿಕ ಕಲೆ. ಅದನ್ನು ಸ್ಫೂರ್ತಿದಾಯಕ ಆಧ್ಯಾತ್ಮಿಕ ಕಣ್ಣುಗಳಿಂದಲೇ ನೋಡಬೇಕು.

ಇದು ಭಾರತೀಯ ಕಲೆಯ ವೈಶಿಷ್ಟ್ಯ ಹಾಗೂ ಇದನ್ನು ಗಮನಿಸದೇ ಇರುವುದು ಕಲೆಯನ್ನು ಸರಿಯಾಗಿ ಅರ್ಥೈಸುವಲ್ಲಿ ಸಫಲವಾಗುವುದಿಲ್ಲ ಅಥವಾ ತಪ್ಪಾಗಿ ಅರ್ಥೈಸುವ ಸಾಧ್ಯತೆಯಿದೆ. ಭಾರತೀಯ ವಸ್ತು, ಚಿತ್ರಕಲೆ, ಶಿಲ್ಪಕಲೆ ಇವು ಭಾರತೀಯ ತತ್ತ್ವಶಾಸ್ತ್ರ, ಧರ್ಮ, ಯೋಗ, ಸಂಸ್ಕೃತಿ ಇವುಗಳ ಒಂದು ವಿಶಿಷ್ಟ ಅಭಿವ್ಯಕ್ತಿಯಾಗಿರುತ್ತದೆ. ಸಾಹಿತ್ಯವನ್ನು ಅಧ್ಯಯನ ಮಾಡುವಾಗ ಇವುಗಳ ಪರಿಚಯವಿಲ್ಲದೇ ಹೋದರೂ ಸಾಹಿತ್ಯವನ್ನು ಅದರದೇ ದೃಷ್ಟಿಕೋನದಲ್ಲಿ ನೋಡುವುದು ಓದುಗನಿಗೆ ಸಾಧ್ಯವಾಗುತ್ತದೆ. ಆದರೆ ಕಲೆಯ ವಿಷಯದಲ್ಲಿ ಈ ಮಾತು ಹೇಳಲು ಸಾಧ್ಯವಿಲ್ಲ. ಹಿಂದೂ ಮತ್ತು ಬೌದ್ಧ ಕಲೆಗಳಲ್ಲಿ ಈ ಮಾತು ಸತ್ಯ. ಪೂಜಾವಿಧಾನ, ಆಧ್ಯಾತ್ಮಿಕ, ಆಲೋಚನಾತ್ಮಕ, ಧಾರ್ಮಿಕ ಆಯಾಮಗಳನ್ನು ಹೊಂದಿರುವ ಈ ಕಲೆ ಒಂದು ಅನುಭವವೇ ಸರಿ.

ಭಾರತೀಯ ವಾಸ್ತು

ಭಾರತದ ಪೂಜಾರ್ಹ ವಾಸ್ತು ಯಾವುದೇ ಕಾಲದ್ದಾಗಿರಲಿ, ತನ್ನ ಮೂಲವನ್ನು ಪ್ರಾಚೀನ ತತ್ತ್ವಗಳಲ್ಲಿ ಹೊಂದಿದೆ. ಪುರಾತನ ನಂಬಿಕೆಗಳಲ್ಲಿ ಹೊಂದಿದೆ. ಭಾರತದಿಂದ ಹೊರಗಿದ್ದ ವಾಸ್ತು ಪೂರ್ಣವಾಗಿ ಕಳೆದುಹೋಗಿದೆ, ಆದರೂ ಅದು ಮುಂದಾಗುವುದನ್ನು ಕಾಣಬಲ್ಲದು. ಈ ತಾರ್ಕಿಕ ಮನಸ್ಸಿಗೆ ಅದು ಸುಲಭವಾಗಿ ಅರ್ಥವಾಗುವುದಿಲ್ಲ. ಆದರೂ ಅದು ಮತ್ತೆ ಹಿಂತಿರುಗಿ ಬರಬಲ್ಲದು, ಅಷ್ಟೇಕೆ, ಅದು ಹಿಂತಿರುಗಿ ಬರುತ್ತಿದೆ. ಇದು ಭವಿಷ್ಯತ್ತಿಗೆ ಸೇರಿದ್ದು. ಭಾರತೀಯ ದೇವಾಲಯ ಯಾವುದೇ ದೇವತೆಗಾಗಲಿ ಕಟ್ಟಲ್ಪಟ್ಟಿದ್ದರೂ, ದಿವ್ಯ ಆತ್ಮನಿಗಾಗಿ ಎತ್ತಿ ಕಟ್ಟಲಾದ ದಿವ್ಯಪೀಠ, ವಿಶ್ವಚೇತನಕ್ಕಾಗಿ ನಿರ್ಮಿಸಲಾದ ಗೃಹ, ಅನಂತದ ಒಂದು ಭಾವ. ಆ

ದೃಷ್ಟಿಯಿಂದ ಅದನ್ನು ನೋಡಬೇಕು ಹಾಗೂ ಅರ್ಥಮಾಡಿಕೊಳ್ಳಬೇಕು. ಬೇರೆಲ್ಲವನ್ನೂ ಆ ದೃಷ್ಟಿಯಿಂದಲೇ ನೋಡಬೇಕು. ಆಗಷ್ಟೇ ನಾವು ಅದನ್ನು ಸರಿಯಾಗಿ ಅರ್ಥೈಸಬಲ್ಲೆವು...

ಭಾರತೀಯ ಶಿಲ್ಪಕಲೆ

ಅತಿ ಪ್ರಾಚೀನ ಭಾರತೀಯ ಶಿಲ್ಪಕಲೆ ಉಪನಿಷತ್‌ನ ಆಲೋಚನೆಗಳಿಂದ ಪ್ರೇರಿತವಾಗಿದ್ದು, ಮಹಾಭಾರತ ಮತ್ತು ರಾಮಾಯಣದ ಪದಗಳನ್ನು ಜೀವಗೊಳಿಸುವ ಪ್ರಯತ್ನವಾಗಿತ್ತು. ಈ ಶಿಲ್ಪಕಲೆಯು ವಾಸ್ತುಕಲೆಯಂತೆ ಆಧ್ಯಾತ್ಮಿಕ ಸಾಕ್ಷಾತ್ಕಾರದ ಮೇಲೆ ನೆಲೆ ನಿಂತಿದೆ. ಅದು ಸೃಷ್ಟಿಸುವ ಹಾಗೂ ತೋರ್ಪಡಿಸುವ ಭಾವವು ಅತಿ ಉನ್ನತವಾದ ಆತ್ಮವು ಪಡೆಯುವ ರೂಪ, ದೇಹದೊಳಗೆ ಇರುವ ಆತ್ಮನಂತೆ. ಮನುಷ್ಯನ ರೂಪದಲ್ಲಿ ದೈವವನ್ನು ಕಾಣುವ ಪ್ರಯತ್ನ. ವಿಶ್ವದ ಸಂಕೇತವನ್ನು ವ್ಯಕ್ತಿಯ ಮಟ್ಟಕ್ಕೆ ಇಳಿಸುವ ಆದರೆ ಅದರಲ್ಲಿ ಕಳೆದು ಹೋಗದಿರುವ ಯತ್ನ. ವೈಯಕ್ತಿಕವಲ್ಲದ್ದು ವ್ಯಕ್ತಿತ್ವದ ವಿಕಾಸದಲ್ಲಿ ಕೆಲಸ ಮಾಡುವ ಯತ್ನ. ಅನಂತದ ನೆಲೆಸುವ ಕ್ಷಣಗಳು. ಆತ್ಮವು ತನ್ನ ಕ್ರಿಯೆಯಲ್ಲಿ ತನ್ನ ಸೃಷ್ಟಿಯಲ್ಲಿ ಅಸ್ತಿತ್ವವನ್ನು, ಭಾವವನ್ನು, ಶಕ್ತಿಯನ್ನು, ಶಾಂತತೆಯನ್ನು ಅಥವಾ ಚಿರಂತನ ಆನಂದವನ್ನು ತೋರಿಸುವುದು. ಎಲ್ಲವನ್ನು ಸಮೀಕರಿಸಿದರೆ ಕಲೆಯು ಇಂತಹ ಮನಃಸ್ಥಿತಿಯನ್ನು ತೋರಿಸುವುದು. ಹಾಗೇ ಉಳಿಯುವುದು. ಶಿಲ್ಪಿಯ ಮನಸ್ಸನ್ನು ಪೂರ್ಣವಾಗಿ ಆವರಿಸಿದ್ದರೂ ಅದನ್ನು ತೋರಿಸದಿರುವುದು. ವಾಸ್ತುಶಿಲ್ಪದಲ್ಲಿರುವಂತೆ ಶಿಲ್ಪಕಲೆಯಲ್ಲೂ ಬೇರೊಂದು ಮನಸ್ಸನ್ನು ನಾವು ತರಬೇಕು. ಬೇರೊಂದು ದೃಷ್ಟಿ ಮತ್ತು ಪ್ರತಿಕ್ರಿಯೆಯನ್ನು ತರಬೇಕು. ನಮ್ಮೊಳಗೆ ಆಳವಾಗಿ ನಾವು ಹೋಗಬೇಕು. ಯೂರೋಪಿನ ಹೊರಾವರಣದ ಕಲ್ಪನೆಯ ಕಲೆಗಿಂತ ಭಿನ್ನವಾಗಿ ನೋಡಬೇಕು.

ಭಾರತೀಯ ಚಿತ್ರಕಲೆ

ಭಾರತೀಯ ಚಿತ್ರಕಲೆಯ ಆತ್ಮ ಹಾಗೂ ಗುರಿ ಭಾರತೀಯ ಕಲ್ಪನೆಯ ಶಿಲ್ಪಕಲೆಯಂತೆ ತನ್ನ ಕೇಂದ್ರದಲ್ಲಿ ತತ್ತ್ವವನ್ನು ರೂಪವನ್ನು ಹೊಂದಿದೆ. ಎಲ್ಲಾ ಭಾರತೀಯ ಕಲೆಯು ಆತ್ಮ ದೃಷ್ಟಿಯ ಗಂಭೀರ ಆರೋಪವಾಗಿರುತ್ತದೆ. ಅದು ತನ್ನೊಳಗೆ ರೂಪ ಹಾಗೂ ನೋಟದ ರಹಸ್ಯಮಯ ವಿಶೇಷತೆಯನ್ನು ಹುಡುಕುತ್ತಿರುತ್ತದೆ. ಒಬ್ಬಾತನ ಅಂತರಾಳದಲ್ಲಿ ಹುಡುಕಾಟ ನಡೆಸಿದಂತೆ. ಆ ಕಲ್ಪನೆಗೆ ಆತ್ಮರೂಪವನ್ನು ಕೊಟ್ಟಂತೆ. ಹಾಗೂ ಆ ರಹಸ್ಯಮಯ ಸತ್ಯದ ಅತಿ ಶುಭ್ರಾವಸ್ಥೆಯಲ್ಲಿ ಕಲೆಯ ಉತ್ತುಂಗತೆಯನ್ನು ಗಮನದಲ್ಲಿಟ್ಟು ಮತ್ತೊಂದು ಹೊಸ ಅಚ್ಚಿನಲ್ಲಿ ಹಾಕಿದಂತೆ. ಅದಕ್ಕೆ ಅತಿಹೆಚ್ಚಿನ ಸಾಧ್ಯತೆಯ ತಾಳಬದ್ಧವಾದ ಏಕೀಭವನದ ವಿಶಿಷ್ಟತೆಯನ್ನು

ಸೇರಿದಂತೆ. ಯಾವುದೇ ಭಾರತೀಯ ಚಿತ್ರಕಲೆಯ ಅದ್ಭುತ ಚಿತ್ರಗಳನ್ನು ತೆಗೆದುಕೊಳ್ಳಿ. ಅದರಲ್ಲಿ ಈ ಸ್ಥಿತಿಗಳನ್ನು ಕಾಣುತ್ತೇವೆ. ಈ ತತ್ತ್ವದ ಜಯ, ಜಯದಿಂದಾಗಿ ಬರುವ ಸೌಂದರ್ಯ, ಅದನ್ನು ನಿರೂಪಿಸುವುದು ಕಂಡುಬರುತ್ತದೆ. ಮಿಕ್ಕ ಕಲೆಗಳಿಗೆ ಹೋಲಿಸಿದರೆ ಕಂಡುಬರುವ ವ್ಯತ್ಯಾಸವೆಂದರೆ ಸಹಜವಾದದ್ದು ಸೌಂದರ್ಯದ ಮೂಸೆಯಲ್ಲಿ ಎದ್ದು ನಿಲ್ಲುವುದು. ಆತ್ಮದ ಸಂಚಲನೆ ಎಂದು ಹೇಳಬಹುದಾದದ್ದು ಹಾಗೂ ಸ್ಥಾವರ ಅನಂತವಲ್ಲದ್ದು. ರಹಸ್ಯಾತ್ಮಕ ಹಾಗೂ ಶಕ್ತಿಯುತವಾದ ಜೀವನದ ಕ್ಷಣಗಳನ್ನು ಚಾರುವಾಗಿಸುವುದು. (ಎಲ್ಲಾ ಕಲೆಗಳಲ್ಲಿರುವಂತೆ ಒಂದು ಇತಿಮಿತಿಗಳೊಳಗೆ) ಗುಣ ಮತ್ತು ತತ್ತ್ವದ ಅನಂತ ಗುಣಗಳನ್ನು ತತ್ತ್ವಗಳನ್ನು ಜೀವನದಲ್ಲಿ ಸಾಂದ್ರೀಕರಿಸುವುದು.

ಭಾರತೀಯ ಸಾಹಿತ್ಯ

ಕಣ್ಣಿನ ಮೂಲಕ ಆತ್ಮಕ್ಕೆ ಹಿತವಾಗಿ ಕಾಣುವ ಕಲೆ ಒಂದು ವಿಧದಲ್ಲಿ ಆತ್ಮದ ಅಭಿವ್ಯಕ್ತಿಯಾಗಿ ಸೌಂದರ್ಯ ಮತ್ತು ಮಾನವ ಸೃಷ್ಟಿಯ ಸಂಕೇತವಾಗಿಬಿಡುತ್ತದೆ. ಆದರೆ ನಮಗೆ ಇದರ ಅತ್ಯಂತ ಸುಲಲಿತವಾದ ಬಹುಮುಖೀ ಅಭಿವ್ಯಕ್ತಿ ಕಂಡುಬರುವುದು ಸಾಹಿತ್ಯದಲ್ಲಿ. ಕಾರಣ ಪದಗಳು ತಮ್ಮೊಳಗೆ ಭಾವನೆಯ ಪರಿಪೂರ್ಣ ಶಕ್ತಿಯನ್ನು ಹೊಂದಿದ್ದು ಅಥವಾ ಸಲಹೆಗಳನ್ನು ಹೊಂದಿದ್ದು ಅದು ನಮ್ಮೊಳಗೆ ಇರುವ ಆತ್ಮವನ್ನು ಕಾಣಲು ಸಹಕಾರಿಯಾಗುತ್ತದೆ. ಸಾಹಿತ್ಯದ ಹಿರಿಯತನ ಇರುವುದು ಅದರ ವಿಷಯದಲ್ಲಿ. ಅದರ ಆಲೋಚನೆಯಲ್ಲಿ. ಅದರ ರೂಪದ ಸೌಂದರ್ಯದಲ್ಲಿ. ಅದರೊಟ್ಟಿಗೆ ವಾಕ್‌ಶಕ್ತಿಯ ಉನ್ನತ ಮಟ್ಟವನ್ನು ಸಾಧಿಸುವಲ್ಲಿ. ಮನುಷ್ಯನ ಆದರ್ಶ ಮನಸ್ಸನ್ನು ಜೀವನವನ್ನು ಮೇಲೆತ್ತುವುದರಲ್ಲಿ. ಹಾಗೆಯೇ ಒಂದು ಯುಗದ, ಸಂಸ್ಕೃತಿಯ ಔನ್ನತ್ಯವನ್ನು ಅದರ ಪ್ರತಿನಿಧಿಗಳ ಮೂಲಕ ಮೇಲೆತ್ತುವುದರಲ್ಲಿ. ನಾವು ಈ ಎರಡೂ ವಿಷಯಗಳಲ್ಲಿ ಭಾರತೀಯ ಮನಸ್ಸು ಏನು ಸಾಧಿಸಿದೆ ಎಂದು ಕೇಳಿದ್ದೇ ಆದರೆ ಸಂಸ್ಕೃತ ಭಾಷೆಯಲ್ಲಿ ಮತ್ತಿತರ ಭಾಷಾ ಸಾಹಿತ್ಯಗಳಲ್ಲಿ ಇರುವ ಸಮೃದ್ಧ ಸಾಹಿತ್ಯ ಎಂತಹ ನಿರಾಶಾವಾದಿ ಮನಸ್ಸಿಗೂ, ಜಗಳಗಂಟಿ ಮನಸ್ಸಿಗೂ ವಿರೋಧಿಸಲಾಗದ ಸತ್ಯಜೀವನದ ಮೇಲೆ ಸಂಸ್ಕೃತಿಯ ಮೇಲೆ ಆದ ಪ್ರಭಾವದ ಸತ್ಯ. ಸಂಸ್ಕೃತ ಭಾಷೆಯಲ್ಲಿರುವ ಶಾಸ್ತ್ರೀಯ ಸಾಹಿತ್ಯದ ಅಗಾಧ ಭಂಡಾರ ಎಂತಹುದು ಎಂದರೆ ಪ್ರಪಂಚದ ಇತರ ಭಾಷಾ ಸಾಹಿತ್ಯಗಳ ಪೈಕಿ ಮೊದಲ ಸಾಲಿನಲ್ಲಿ ತನ್ನೆಲ್ಲ ವೈಭವದಿಂದ ಸಮೃದ್ಧತೆಯಿಂದ ಎದ್ದುನಿಲ್ಲುತ್ತದೆ. ಭಾಷೆಯನ್ನು ತೆಗೆದುಕೊಂಡದ್ದೇ ಆದರೂ, ಅದು ಈ ಭೂಮಿಯ ಮೇಲೆ ಇರುವ ಪ್ರಬುದ್ಧ ಜೀವಿಗಳಿಂದ ನಿರ್ಮಾಣವಾದ ಸಾಹಿತ್ಯಕ್ಕೆ ಹೇಳಿ ಮಾಡಿಸಿದಂತಹ ಭಾಷೆಯಾಗಿದೆ. ಈ ಭಾಷೆಯು ಒಮ್ಮೆಗೆ ಗಂಭೀರವಾಗಿ, ಲಾಲಿತ್ಯಪೂರ್ಣವಾಗಿ,

ವ್ಯಾಕರಣಬದ್ಧವಾಗಿ, ಆದರೆ ಅಷ್ಟೇ ಲಲಿತವಾಗಿ, ಅದನ್ನು ಉಪಯೋಗಿಸುತ್ತಿದ್ದ ಜನಾಂಗದ ಬಗ್ಗೆ ಮೆಚ್ಚುಗೆಯನ್ನು ಸೂಚಿಸುವಂತೆ ಅವರ ಸಂಸ್ಕೃತಿಯನ್ನು ಪ್ರತಿಬಿಂಬಿಸುವಂತಹ ಭಾಷೆ ಅದಾಗಿತ್ತು. ಅದರ ಕವಿಗಳು ಆ ಭಾಷೆಯನ್ನು ಹೇಗೆ ಉಪಯೋಗಿಸಿದರು ಎಂದರೆ ಅದರ ವೈಭವ ಎಂದೂ ಕೆಳಗಿಳಿಯಲಲಿಲ್ಲ. ಬರೀ ಸಂಸ್ಕೃತದಲ್ಲಿ ಮಾತ್ರವೆಂದಲ್ಲ, ಇತರ ಭಾರತೀಯ ಭಾಷೆಗಳಲ್ಲೂ ಸುಂದರವಾದ, ಗಟ್ಟಿಯಾದ, ಸೃಷ್ಟಿಗೆ ಯೋಗ್ಯನಾದ ಕೃತಿಗಳು ಹುಟ್ಟಿಕೊಂಡವು. ಆದರೂ ಭಾರತದ ಮಹತ್ತ್ವದ ಸಾಹಿತ್ಯದ ಕೃತಿಗಳು ಸಂಸ್ಕೃತದಲ್ಲಿ ಹುಟ್ಟಿಕೊಂಡವು ಎಂಬುದನ್ನು ಗಮನದಲ್ಲಿರಿಸಲೇಬೇಕು. ಒಂದು ಪೂರ್ಣಚಿತ್ರಣವನ್ನು ಪಡೆಯಬೇಕಾದರೆ ಪಾಳಿಯಲ್ಲಿರುವ ಬೌದ್ಧ ಸಾಹಿತ್ಯವನ್ನು ಪರಾಮರ್ಶಿಸಬೇಕಾಗುತ್ತದೆ. ಕಾವ್ಯಾತ್ಮಕ ಕೃತಿಗಳು ಈ ಭಾಷೆಗಳಲ್ಲಿ ಸಮೃದ್ಧವಾಗಿ ಬಂದಿದ್ದಲ್ಲದೆ, ದ್ರಾವಿಡ ಭಾಷೆಗಳಲ್ಲೂ ಸಂಸ್ಕೃತದ ಉಪಭಾಷೆಗಳಲ್ಲೂ ಕಂಡುಬಂದಿತು. ಇವೆಲ್ಲವೂ ಇಡೀ ಭೂಖಂಡದ ಮೇಲೆ ಪ್ರಭಾವವನ್ನು ಬೀರಿದ್ದವು. ಈ ರೀತಿ ಬರೆಯಲಾದ ಸಾಹಿತ್ಯದ ಪ್ರಮಾಣದಲ್ಲಿ ಕಡಿಮೆಯಿಲ್ಲದೇ ಇದ್ದರೂ ಮಧ್ಯಕಾಲೀನ ಹಾಗೂ ಆಧುನಿಕ ಯೂರೋಪಿನ ಸಾಹಿತ್ಯದ ಗುಣಮಟ್ಟದಲ್ಲಿ ಅದು ಕಡಿಮೆಯೇನೂ ಇರಲಿಲ್ಲ. ಜನರು ಹಾಗೂ ಭಾರತದ ನಾಗರಿಕತೆ ಹಿರಿಯದಾದದ್ದು ಎಂದು ನೆನಪಿಸಿಕೊಳ್ಳುವ ಕೆಲವೇ ಕೆಲವು ಕೃತಿಗಳ ಪೈಕಿ ವೇದಗಳು, ಉಪನಿಷತ್ತುಗಳು, ಬೃಹತ್ ಕಾವ್ಯಗಳಾದ ಮಹಾಭಾರತ ಹಾಗೂ ರಾಮಾಯಣ, ಕವಿಗಳಾದ ಕಾಳಿದಾಸ, ಭವಭೂತಿ, ಭರ್ತೃಹರಿ, ಜಯದೇವನ ಕೃತಿಗಳು, ಮತ್ತಿತರ ಸಾರ್ವಕಾಲಿಕ ಶ್ರೇಷ್ಠ ನಾಟಕಗಳು, ಕಾವ್ಯಗಳು, ಧಮ್ಮಪದ ಹಾಗೂ ಜಾತಕಗಳು, ಪಂಚತಂತ್ರ, ಕವಿಗಳಾದ ತುಳಸೀದಾಸ, ವಿದ್ಯಾಪತಿ, ಚಂಡೀದಾಸ, ರಾಯದಾಸ, ರಾಮದಾಸ. ತುಕಾರಾಮ, ತಿರುವಳ್ಳುವರ್, ಕಂಬನ್ ಅವರ ಕೃತಿಗಳು, ನಾನಕ, ಕಬೀರ ಹಾಗೂ ಮೀರಾಬಾಯಿಯ ಹಾಡುಗಳು, ದಕ್ಷಿಣದ ಶಿವಸಂತರ ಆಳ್ವರುಗಳ ವಚನಗಳು ಸೇರಿಹೋಗುತ್ತವೆ. ಇವು ಕೆಲವೇ ಕೆಲವು ಅತಿ ಖ್ಯಾತವಾದ ಲೇಖಕರ ಹಾಗೂ ಅವರ ಕೃತಿಗಳ ಹೆಸರಾಗಿತ್ತು. ಎರಡನೆಯ ಸ್ತರದ ಇನ್ನೂ ಅಗಾಧವಾದ ಸಾಹಿತ್ಯ ಭಂಡಾರ ಬೇರೆ ಭಾಷೆಗಳಲ್ಲಿ ಪ್ರಕಟವಾಗಿತ್ತು. ಇದರಿಂದ ಭಾರತದ ನಾಗರಿಕತೆಯು ಅತಿ ಮುಂದುವರೆದ ಕ್ರಿಯಾಶೀಲರಾದ ಮನುಷ್ಯರಿಂದ ಒಡಗೂಡಿತ್ತು ಎಂಬುದರಲ್ಲಿ ಸಂಶಯವಿಲ್ಲ. ಮೂರು ಸಾವಿರ ವರ್ಷಗಳ ಹಿಂದೆ ಆರಂಭಿಸಿದ ಈ ಮಾನಸಿಕ ಕ್ರಿಯಾಶೀಲತೆ ಇನ್ನೂ ಕುಂದಿಲ್ಲ. ಅಂತಹದೇ ಅನನ್ಯವಾದ ಉತ್ತಮವಾದ ನಮ್ಮ ಮುಂದೆ ಕಾಣುತ್ತಿವೆ ಎಂಬುದು ಈ ನಾಗರಿಕತೆಯ ಗಟ್ಟಿತನಕ್ಕೆ ಸಾಕ್ಷಿಯಾಗಿದೆ...

ಭಾರತವು ಇನ್ನು ಅದ್ಭುತ ಯುವಕನಾಗಿದ್ದಾಗ ಪ್ರಾಚೀನ ಕಾಲದಲ್ಲಿ ಅದರ ಕ್ರಿಯಾಶೀಲತೆ ಉತ್ತುಂಗಕ್ಕೆ ಏರಿದ್ದಾಗ ಆಧ್ಯಾತ್ಮಿಕ ಒಳನೋಟ ಕೆಲಸ ಮಾಡುತ್ತಿದ್ದಾಗ,

ಆಳವಾದ ದೃಷ್ಟಿ ಸ್ಫೂರ್ತಿಗೆ ಕಾರಣವಾಗಿ, ಸ್ಪಷ್ಟವಾದ ಬೌದ್ಧಿಕ ಹಾಗೂ ಮೌಲಿಕ ಚಿಂತನೆ ಇದ್ದಾಗ, ಭಾರತದ ಅನನ್ಯವಾದ ಸಂಸ್ಕೃತಿ ಹಾಗೂ ಸಭ್ಯತೆಗೆ ಒಂದು ಸದೃಢ ಕಟ್ಟಡದ ನಿರ್ಮಾಣವಾಗುತ್ತಿದ್ದಾಗ, ನಾಲ್ಕು ಮಹಾಕೃತಿಗಳು ಬೆನ್ನೆಲುಬಾಗಿ ನಿಂತವು– ವೇದಗಳು, ಉಪನಿಷತ್ತುಗಳು ಹಾಗೂ ಎರಡು ಮಹಾಕಾವ್ಯಗಳು– ಇದು ಪ್ರಪಂಚದ ಯಾವ ಇತಿಹಾಸದಲ್ಲೂ ಕಾಣಬರದ ವಿಷಯ. ಮೊದಲ ಎರಡು ಕೃತಿಗಳು ಈ ದೇಶದ ಆಧ್ಯಾತ್ಮಿಕ ಹಾಗೂ ಧಾರ್ಮಿಕ ಅಡಿಪಾಯಕ್ಕೆ ಕಾರಣವಾದರೆ, ಮಿಕ್ಕ ಎರಡು ಭಾರತದ ಮಹತ್ತ್ವದ ಇತಿಹಾಸದ ಕಾಲದ ವಿವರಣೆಯಾಗಿ, ಅದರ ಆದರ್ಶವನ್ನು ಎತ್ತಿ ಹಿಡಿಯುವ, ತನ್ನ ನೆಲದ ಮೇಲೆ ಪ್ರಕೃತಿ, ಮನುಷ್ಯ, ದೇವರು ಹಾಗೂ ವಿಶ್ವಶಕ್ತಿಯನ್ನು ಪ್ರದರ್ಶಿಸುವ ಕೃತಿಗಳಾಗಿದ್ದವು. ವೇದಗಳು ನಮಗೆ ಮೊದಲ ಬಾರಿಗೆ ಇಂತಹ ಮಾದರಿಯ ಆಧ್ಯಾತ್ಮಿಕ ಸ್ಫೂರ್ತಿಯ, ಮಾನಸಿಕ ಹಾಗೂ ಧಾರ್ಮಿಕ ಅನುಭವ ನೀಡಿದ ಕೃತಿಗಳಾಗಿದ್ದವು. ಉಪನಿಷತ್ತುಗಳು ನಿರಂತರವಾಗಿ ರೂಪಾತೀತವಾಗಿ, ಸಂಕೇತಗಳಿಂದ ಪರವಾಗಿ, ಆದರೆ ಅವುಗಳನ್ನು ದೂರೀಕರಿಸದೆ ನಿಂತ ಕೃತಿಗಳಾಗಿದ್ದಿತು. ಅವು ಎಂದೆಂದಿಗೂ ಮೂಲವನ್ನು ತಿಳಿಯುವ ಸಹಕಾರೀ ಕೃತಿಗಳಾಗಿ ಎದ್ದುನಿಂತವು. ಅನನ್ಯವಾದ ರೀತಿಯಲ್ಲಿ ಬರೆದ ಕವಿತೆಗಳಾಗಿದ್ದವು. ಆತ್ಮ ಹಾಗೂ ಭಗವಂತನ ರಹಸ್ಯವಾದ ಅತ್ಯುನ್ನತ ಚಿಂತನೆಯ ತತ್ತ್ವಗಳಾಗಿದ್ದವು. ಮನುಷ್ಯ ಹಾಗೂ ಪ್ರಪಂಚದ ರಹಸ್ಯವನ್ನು ತಿಳಿಸುವ ತತ್ತ್ವಗಳಾಗಿದ್ದವು. ಈ ತತ್ತ್ವಗಳು ಸಹ ತೀರಾ ಮೂಲಭೂತ ವಿಚಾರಗಳಾಗಿದ್ದು, ಅತಿ ಆಳವಾಗಿ ಯೋಚನೆ ಮಾಡಲಾದ, ರಹಸ್ಯವನ್ನು ತಿಳಿಸುವ ಸತ್ಯವನ್ನು ಮುಂದಿಡುವ ವಿಚಾರಗಳಾಗಿದ್ದವು. ಇವು ಮಾನಸಿಕ ಹಾಗೂ ಸ್ಫೂರ್ತಿಯ ಮಟ್ಟವನ್ನು ದಾಟಿ ತೀರಾ ಆಧ್ಯಾತ್ಮಿಕ ದೃಷ್ಟಿಯನ್ನು ಬೆಳೆಸಿಕೊಂಡಿದ್ದವು. ಇದಾದ ನಂತರ ಬುದ್ಧ ಹಾಗೂ ಜೀವನದ ಮುನ್ನಡೆಯನ್ನು ನಾವು ಅದರ ಆದರ್ಶ, ಮೌಲಿಕ, ಸೌಂದರ್ಯಾತ್ಮಕ, ರಹಸ್ಯಾತ್ಮಕ, ಭಾವನಾತ್ಮಕ, ಇಂದ್ರಿಯಾತ್ಮಕ ಹಾಗೂ ಭೌತಿಕ ತಿಳುವಳಿಕೆಯಲ್ಲಿ ಕಾಣುತ್ತೇವೆ. ಈ ದೃಷ್ಟಿ ಹಾಗೂ ಅನುಭವದ ಪ್ರತಿಬಿಂಬವಾಗಿ ರಾಮಾಯಣ, ಮಹಾಭಾರತ ಮಹಾಕಾವ್ಯಗಳು ಆರಂಭಕಾಲೀನ ದಾಖಲೆಗಳಾಗಿ, ಹಾಗೂ ಇನ್ನುಳಿದ ಸಾಹಿತ್ಯಗಳು ಅದರ ಮುಂದುವರೆದ ದರ್ಶನಗಳಾಗಿ ಕಂಡುಬರುತ್ತವೆ. ಆದರೆ ಅಡಿಪಾಯವು ಉದ್ದಕ್ಕೂ ಒಂದೇ ಆಗಿರುತ್ತದೆ. ಹಾಗೆಯೇ ನಂತರದ ದಿನಗಳಲ್ಲಿ ಇದಕ್ಕೆ ಭಿನ್ನವಾಗಿ ಕಾಣುವಂತಹ ಕಟ್ಟಡಗಳು ಕಂಡವಾದರೂ ಅವಾವೂ ಮೂಲದೃಷ್ಟಿಯಿಂದ ಭಿನ್ನವಾಗಿರಲಿಲ್ಲ. ಅವು ಮೂಲದೃಷ್ಟಿಯಿಂದ ಹುಟ್ಟಿಕೊಂಡ ಅಥವಾ ಸಿಡಿದ ದೃಷ್ಟಿಗಳಾಗಿದ್ದವು. ಮೊದಲ ಆಧ್ಯಾತ್ಮಿಕ ಅನುಭವದ ಮುಂದುವರೆದ ರೂಪಗಳೇ ಆಗಿದ್ದವು. ಅದರಿಂದ ಎಂದೂ ದೂರ ಸರಿದಿರಲಿಲ್ಲ. ಹಾಗಾಗಿ ಭಾರತೀಯ ಮನಸ್ಸು ತನ್ನ ಸಾಹಿತ್ಯಕ ಸೃಷ್ಟಿಯಲ್ಲಿ ಬಹಳಷ್ಟು ಅಡೆತಡೆಗಳನ್ನು

ಎದುರಿಸಿದ್ದರೂ, ಶಿಲ್ಪಕಲೆ ಹಾಗೂ ಚಿತ್ರಕಲೆಯಲ್ಲಿ ಕಂಡಂತೆ ಅದೇ ಮೂಲದ ಜೊತೆ ಸಂಪರ್ಕ ಉಳಿಸಿಕೊಂಡಿದೆ.

ವೇದವು ಆರಂಭಕಾಲೀನ ಮನಸ್ಸಿನ ಸ್ಫೂರ್ತಿದಾಯಕ ಸಾಂಕೇತಿಕವಾದ ಸೃಷ್ಟಿಯಾಗಿತ್ತು... ಅದೊಂದು ದೈವಿಕ ಅನ್ವೇಷಣೆಯಾಗಿತ್ತು. ಪದಗಳ ಶಕ್ತಿಯನ್ನು ಉಪಯೋಗಿಸಿಕೊಂಡು ಪರದೆ ಸರಿಸುವ ಪ್ರಯತ್ನವಾಗಿತ್ತು. ತಾರ್ಕಿಕ ಪದಗಳ, ಬೌದ್ಧಿಕ ಸೌಂದರ್ಯದ ಪದಗಳನ್ನಲ್ಲ, ಬದಲಾಗಿ ಸ್ಫೂರ್ತಿ ನೀಡುವ ಲಯಬದ್ಧವಾದ ಮಂತ್ರಗಳ ಮೂಲಕ ನಡೆಸಿದ ಪ್ರಯತ್ನ ಅದಾಗಿತ್ತು. ಬಿಂಬಗಳನ್ನು ಕಲ್ಪನೆಯ ಕಥೆಗಳನ್ನು ಯಥೇಚ್ಛವಾಗಿ ಉಪಯೋಗಿಸಲಾಯಿತು. ಕೇವಲ ಕಲ್ಪನೆಗಾಗಿ ಮಾತ್ರವಲ್ಲ, ಜೀವಂತ ಕಥೆಗಳಾಗಿ. ಮಾತಾಡುವವರಿಗೆ ಬಹಳ ಸಹಜವಾಗಿ ಬರುವಂತ ಮಾತುಗಳಾಗಿ. ಅವಿಲ್ಲದೆ ಬೇರೊಂದು ಮಾರ್ಗದಲ್ಲಿ ಆ ಮಾತುಗಳನ್ನು ಆಡಲು ಸಾಧ್ಯವಿರಲಿಲ್ಲ. ಕಲ್ಪನೆಯಾದರೋ ಅದೇ ಒಂದು ನೈಜತೆಯು ಮಹಾಪುರೋಹಿತವಾಗಿತ್ತು. ಕೇವಲ ಕೆಲವು ನಿಮಿಷಗಳಿಗೆ ಭೇಟಿಯಾಗುವ ಕೈ ಕೈ ಹಿಡಿದುಕೊಳ್ಳುವ ಹೊರಾವರಣದ ಮಿತಿಯ ಸಂಪರ್ಕವದಾಗಿರಲಿಲ್ಲ. ಇದು ಅವರ ಪವಿತ್ರ ಕವಿಯ ಚಿತ್ರವಾಗಿತ್ತು– ಒಂದು ಮನಸ್ಸು, ಅದನ್ನು ಭೇಟಿ ನೀಡಿರುವ ಬೆಳಕು, ಆ ಬೆಳಕು ಭಾವನೆಗಳ ಮತ್ತು ಪದಗಳ ಚಿತ್ರವನ್ನು ನೀಡುವಂತಹದು. ಕವಿಗಳು ಸತ್ಯವನ್ನು ಕೇಳುವವರು 'ಕವಯಃ ಸತ್ಯಶ್ರುತಯಃ' ಎಂಬ ಮಾತು ದಾಖಲಾಗಿದೆ. ಆಧುನಿಕ ವಿದ್ವಾಂಸರು ತಿಳಿದಿರುವಂತೆ ವೇದಕಾಲೀನ ಕವಿಗಳು ತಮ್ಮನ್ನ ಉತ್ತಮ ವೈದ್ಯ ಎಂದಾಗಲೀ, ಋಕ್‌ಗಳನ್ನು ಕಾಣುತ್ತಿದ್ದ ದ್ರಷ್ಟಾರ ಎಂದಾಗಲೀ, ಒಂದು ಗಡುಸಾದ ಪಂಗಡಕ್ಕೆ ಪೌರೋಹಿತ್ಯ ಮಾಡುವವರೆಂದಾಗಲೀ ಅವರು ತಿಳಿದುಕೊಂಡಿರಲಿಲ್ಲ. ಬದಲಾಗಿ ತಾವು ಋಷಿಗಳು, ಧೀರರು, ಆಲೋಚಕರು, ಚಿಂತಕರು ಎಂದು ತಿಳಿದಿದ್ದರು. ಈ ಕವಿಗಳು, ಹಾಡುಗಾರರು ಕಾವ್ಯ ಉನ್ನತ ಮಟ್ಟದ ರಹಸ್ಯಮಯವಾದ ಸತ್ಯವನ್ನು ಹೊಂದಿದ್ದೇವೆ ಎಂದು ತಿಳಿದಿದ್ದರು. ದಿವ್ಯಜ್ಞಾನವನ್ನು ಬೋಧಿಸುವಂತಹ ವಾಕ್‌ಗೆ ತಾವು ದಾಸರು ಎಂದು ಹೇಳಿಕೊಂಡಿದ್ದರು. ಹಾಗಾಗಿ 'ಕವಯೇ ನಿವಚನಾನಿ ನಿತ್ಯ ವಚಾಂಸೀ' ಎಂಬ ಮಾತು ಬಂದಿತ್ತು. ಇದರಿಂದ ಈ ಪದಗಳ ಅರ್ಥ ಒಬ್ಬ ಋಷಿಗೆ ಮಾತ್ರ ಅರಿವಿಗೆ ಬರುತ್ತದೆ ಎಂಬಂತಾಯಿತು. ಆನಂತರದಲ್ಲಿ ಬಂದವರಿಗೆ ವೇದವು ಜ್ಞಾನದ ಪುಸ್ತಕವಾಗಿ ಕಂಡಿತು. ಪರಮೋಚ್ಚ ಜ್ಞಾನವನ್ನು ತಿಳಿಸುವುದು, ಸಾಕ್ಷಾತ್ಕಾರ ನೀಡುವುದು, ಅನಂತವಾದ ಅವೈಯಕ್ತಿಕ ಸತ್ಯವನ್ನು ತಿಳಿಸುವಂತಹದು, ಆಂತರ್ಯದಲ್ಲಿ ಸ್ಫೂರ್ತಿಗೊಂಡು ಅನುಭವಿಸಿದ ವಿಷಯವಾಗಿ ಅರೆದಿವ್ಯ ಚಿಂತಕರಿಗೂ ಕಂಡು ಬಂದಿತ್ತು. ಋಕ್‌ಗಳ ಸುತ್ತ ಹೆಣೆದುಕೊಂಡ ಯಜ್ಞದ ವಿಧಿಗಳು ಒಂದು ಸಾಂಕೇತಿಕವಾದ ಮಾನಸಿಕವಾದ ಶಕ್ತಿಯನ್ನು ಹೊಂದಿದ್ದವು. ಇದು ಪ್ರಾಚೀನ

ಬ್ರಾಹ್ಮಣ ಗ್ರಂಥಗಳನ್ನು ಬರೆದವರಿಗೆ ಚೆನ್ನಾಗಿ ತಿಳಿದಿತ್ತು. ಪ್ರತಿಯೊಂದು ಪವಿತ್ರ ಋಕ್ ಸಹ ದಿವ್ಯ ಅರ್ಥವನ್ನು ಹೊಂದಿದ್ದು ಉಪನಿಷತ್ತಿನ ಚಿಂತಕರಿಗೆ ಸತ್ಯದ ಬೀಜ ರೂಪದ ಪದಗಳೆಂದು ತಿಳುವಿಗೆ ಬಂದು ಅದಕ್ಕೆ ಉನ್ನತ ಸ್ಥಾನವನ್ನು ನೀಡಿ, ತಮ್ಮದೇ ಮಾತುಗಳನ್ನು ಅದರೊಟ್ಟಿಗೆ ಸೇರಿಸುವ ಪ್ರಯತ್ನ ಮಾಡಿದ್ದರು– 'ತದ್ ಏಷಾ ರಿಚಭ್ಯುಕ್ತಾ...'

ಉಪನಿಷತ್ತುಗಳು ಭಾರತೀಯ ಮನಸ್ಸಿನ ಅತ್ಯುತ್ತಮ ಕೃತಿಗಳು. ಅದರ ಮಹಾಮೇಧಾವಿ ಶಕ್ತಿಯ, ದಿವ್ಯ ಕವಿತೆಯ, ಆಲೋಚನೆಯ ಹಾಗೂ ಪದಗಳ ಅತ್ಯುತ್ತಮ ಸೃಷ್ಟಿ. ಅವು ಸಾಹಿತ್ಯದ ಅಥವಾ ಕಾವ್ಯದ ಸಾಧಾರಣ ಮಟ್ಟದ ಆಲೋಚನೆಯಲ್ಲಿ ಅತ್ಯುತ್ತಮ ಕೃತಿಗಳು ಎಂದಲ್ಲ. ಆಧ್ಯಾತ್ಮಿಕ ಸಾಕ್ಷಾತ್ಕಾರದ ಮಹಾಧಾರೆ. ಅನನ್ಯವಾದ ಬುದ್ಧಿಮತ್ತೆಯ ಸಾಕ್ಷಿ. ಆತ್ಮಶಕ್ತಿಯ ವಿಶೇಷವಾದ ಅರಿವು, ಉಪನಿಷತ್ತುಗಳು ಅತ್ಯಂತ ಗಹನವಾದ ಧಾರ್ಮಿಕ ಗ್ರಂಥಗಳು ಆಗಿರುವಂತೆ, ಅವು ಆಳವಾದ ಆಧ್ಯಾತ್ಮಿಕ ಅನುಭವದ ದಾಖಲೆಗಳಾಗಿವೆ. ಸಾಕ್ಷಾತ್ಕಾರ ಮಾಡುವಂತಹ ಸ್ಫೂರ್ತಿದಾಯಕ ತತ್ತ್ವದ ಎಂದಿಗೂ ಕಡಿಮೆಯಾಗದ ಬೆಳಕು, ಶಕ್ತಿ ಹಾಗೂ ವೈಶಾಲ್ಯತೆಯನ್ನು ಒಳಗೊಂಡ ಕೃತಿಗಳು. ಅವು ಗದ್ಯ ಮತ್ತು ಪದ್ಯದಲ್ಲಿ ಇದ್ದು, ಆಧ್ಯಾತ್ಮಿಕ ಕವಿತೆಗಳಾಗಿ ಲಯಬದ್ಧವಾದ ಸೃಷ್ಟಿಗಳಾಗಿವೆ. ಅವು ತತ್ತ್ವಶಾಸ್ತ್ರ, ಧರ್ಮ ಹಾಗೂ ಕವಿತೆಯನ್ನು ಒಂದು ಕಡೆ ಏಕೀಭವಿಸಿದ ರೂಪಗಳು, ಭಾವನೆಗಳು. ಅದಕ್ಕೆ ಕಾರಣ ಈ ಧರ್ಮವು ಒಂದು ಪಂಗಡದೊಂದಿಗೆ ಮುಗಿಯುವುದಿಲ್ಲ. ಒಂದು ಧಾರ್ಮಿಕ–ಮೌಲಿಕ ವ್ಯಕ್ತ ಭಾವನೆಯೂ ಅಲ್ಲ. ಆದರೆ ಅದು ಪರಮಾತ್ಮ ಹಾಗೂ ಆತ್ಮನ ಅನಂತ ಅನ್ವೇಷಣೆಯ ಪ್ರಯತ್ನ. ನಮ್ಮ ಆತ್ಮ ಹಾಗೂ ದೇಹದ ಬಗ್ಗೆ ಬೆಳಕು ಚೆಲ್ಲುವಂತಹ ಚಿಂತನೆ ಅದರಲ್ಲಿದೆ. ಇದರಲ್ಲಿ ಬರುವ ತತ್ತ್ವವು ಸತ್ಯದ ಮೇಲೆ ಬೌದ್ಧಿಕ ಊಹಾಪೋಹವಲ್ಲ. ಆದರೆ ಕಂಡ, ಅನುಭವಿಸಿದ, ಜೀವಿಸಿದ, ಅಂತರಂಗದ ಮನಸ್ಸಿನ ಮೂಲಕ ಆತ್ಮಸಂತೋಷವನ್ನು ಸತ್ಯ ಅನ್ವೇಷಣೆಯನ್ನು ಅನುಭವಿಸಿದ ಋಷಿಗಳ ಕೃತಿ. ಈ ಕೃತಿಗಳನ್ನು ರಚಿಸಿದ್ದ ಮನಸ್ಸು ಎಂತಹ ಪಕ್ವವಾಗಿತ್ತೆಂದರೆ ಅದು ಸಾಧಾರಣ ಮಟ್ಟದಿಂದ ಅನೇಕ ಪಾಲು ಮೀರಿ ಅಪರೂಪವಾದ ಆಧ್ಯಾತ್ಮಿಕ ದೃಷ್ಟಿಯನ್ನು ಆತ್ಮ ಪರಮಾತ್ಮ ಹಾಗೂ ವಿಶ್ವದ ಬಗ್ಗೆ ಅದ್ಭುತ ದೃಷ್ಟಿಯನ್ನು ಬೆಳೆಸಿಕೊಂಡ ಧೀಮಂತ ಮನಸ್ಸುಗಳಾಗಿದ್ದವು. ಇದರಲ್ಲಿ ವೈದಿಕ ಋಷಿಗಳ ಮಾನಸಿಕ ಅನುಭವ ಪರಮೋಚ್ಚವಾಗಿದ್ದು, ಕಠೋಪನಿಷತ್ತಿನಲ್ಲಿ ಹೇಳಿದ ಹಾಗೆ ಅದು ತನ್ನನ್ನು ತಾನೇ ತೆರೆದುಕೊಳ್ಳುತ್ತದೆ. ಆತ್ಮಾನುಭವದ ಸಾಕ್ಷಾತ್ಕಾರವನ್ನು ಆಧ್ಯಾತ್ಮಿಕ ಹಿನ್ನೆಲೆಯಲ್ಲಿ ನೋಡಿ ತರುವ ತೃಪ್ತಿ ಹಾಗೂ ಆತ್ಮಜ್ಞಾನದ ತುತ್ತತುದಿಗೆ ಕರೆದೊಯ್ಯುವ ಪ್ರಯತ್ನವಾಗಿದೆ...

ಆ ಕಾಲದ ಶುದ್ಧ ಸಾಹಿತ್ಯದ ಪ್ರತಿನಿಧಿಯಾಗಿ ಮಹಾಭಾರತ, ರಾಮಾಯಣಗಳು ಎದ್ದುನಿಲ್ಲುತ್ತವೆ. ಮಹಾಭಾರತದ ಸೃಷ್ಟಿಯಲ್ಲಂತೂ ಕೆಲವು ಶತಮಾನಗಳ ಕಾಲವೇ ಕಳೆದು ಅದರ ಚೌಕಟ್ಟಿನಲ್ಲಿ ಕಾವ್ಯಾತ್ಮಕ ಸೃಷ್ಟಿ ಮೇರು ಸದೃಶವಾಗಿತ್ತು. ಈ ಎರಡು ಕಾವ್ಯಗಳು, ಮಹಾಕಾವ್ಯಗಳು ಎನ್ನಿಸಿಕೊಂಡು, ಎರಡೂ ತಮ್ಮ ತಮ್ಮದೇ ವೈಯಕ್ತಿಕ ಮಹತ್ತ್ವವನ್ನು ಹೊಂದಿದ್ದು, ಬೇರೆ ಕಾವ್ಯಗಳಿಗೆ ಹೋಲಿಸಿದರೆ ಆಯಾಮದಲ್ಲಿ ಬೇರೆಯೇ ಆಗಿವೆ. ಈ ಕೃತಿಗಳು ಆರಂಭಕಾಲೀನ ಶೌರ್ಯದ ಗಾಥೆಯಾಗಿದ್ದರೂ, ಮಾನವಕುಲದ ಮೂಲಭಾವನೆಗಳ ವ್ಯಕ್ತ ಕಥಾನಕವೇ ಆದರೂ, ಅವು ಬಹಳ ಸಮೃದ್ಧ, ಗಂಭೀರ, ಬುದ್ಧಿವಂತ ಮನಸ್ಸಿನ ಪರಿಪಕ್ವ ಕೃತಿಗಳಾಗಿದ್ದವು. ಅವುಗಳನ್ನು ಮೇಲಕ್ಕೆತ್ತುವ ಶಕ್ತಿ ಬಂದಿದ್ದಕ್ಕೆ ಕಾರಣ ಅದು ಹೊಂದಿದ್ದ ಮೌಲಿಕ ಮಾತುಗಳು. ಹಾಗಾಗಿ ಇವು ಜಾನಪದ ಮಟ್ಟದ ಕಾವ್ಯಗಳಿಂದ ಮೇಲೆದ್ದು, ತಮ್ಮ ದೃಷ್ಟಿಯನ್ನು ಹೆಚ್ಚು ವಿಶಾಲವಾಗಿ ನೋಡುವ ಆಳವಾಗಿ ನೋಡುವ– ನಾನು ಈಗ ಅದರ ಸೌಂದರ್ಯದ ಬಗ್ಗೆ, ಕಾವ್ಯ ಗುಣಗಳ ಬಗ್ಗೆ ಮಾತನಾಡುತ್ತಿಲ್ಲ– ಹೋಮರ್‌ನ ಕೃತಿಗಳಿಗಿಂತ ಮೇಲಾಗಿ, ಅದೇ ವೇಳೆಗೆ ಅಷ್ಟೇ ಪ್ರಮಾಣದ ಶಕ್ತಿಯನ್ನು ಹೊಂದಿ ನಂತರ ಬಂದ ವರ್ಜಿಲ್ ಅಥವಾ ಮಿಲ್ಟನ್, ಫಿರ್ದೌಸಿ ಅಥವಾ ಕಾಳಿದಾಸರ ಕೃತಿಗಳಿಗಿಂತ ಭಿನ್ನವಾಗಿ ಉಳಿದುಬಿಟ್ಟಿತು. ಈ ರೀತಿಯ ವಿಶಿಷ್ಟವಾದ ಆರಂಭಕಾಲೀನ, ಶೌರ್ಯಪೂರ್ಣ, ಚುರುಕಾದ, ಜೀವನದ ಓಟವನ್ನು ತಿಳಿಸುವ, ಮೌಲ್ಯಾಧಾರಿತ ವಿಷಯದ ಬಗ್ಗೆ ವಿಶೇಷವಾಗಿ ಮಾತನಾಡುವ ಬುದ್ಧಿವಂತಿಕೆಯನ್ನು ಈ ಕೃತಿಗಳು ಪ್ರದರ್ಶಿಸಿದವು. ಈ ಕೃತಿಗಳು ಒಂದು ಜನಾಂಗದ ಯುವಪೀಳಿಗೆಯ ಧ್ವನಿಯೂ ಆಗಿತ್ತು. ಅದೆಂತಹ ಯುವಕರಾಗಿದ್ದರೆಂದರೆ ಅವರು ಉತ್ಸಾಹವಂತರಾಗಿದ್ದು, ಉನ್ನತ ಆದರ್ಶಗಳನ್ನು ಹೊಂದಿದ್ದವರಾಗಿದ್ದರು. ರಾಜಗಾಂಭೀರ್ಯವನ್ನು ಹೊಂದಿದ್ದು ತಮ್ಮ ಗುರಿಯನ್ನು ಸಾಧಿಸುವಂತಹವರಾಗಿದ್ದರು.

...ಪ್ರಾಚೀನ ವೈದಿಕ ವಿದ್ಯಾಭ್ಯಾಸದ ಒಂದು ಪ್ರಧಾನ ಅಂಶವೆಂದರೆ ಸಂಪ್ರದಾಯದ ಮುಖ್ಯ ಜ್ಞಾನವನ್ನು ಪಡೆದಿರುವುದು. ಅದನ್ನು ಇತಿಹಾಸ ಎಂದು ಕರೆಯಲಾಗುತ್ತಿತ್ತು. ಹಾಗಾಗಿ ಕಾವ್ಯದ ಇನ್ನಿತರ ಕೃತಿಗಳಿಂದ ಭಿನ್ನವಾಗಿ ತೋರಿಸಲು ರಾಮಾಯಣ ಮತ್ತು ಮಹಾಭಾರತವನ್ನು ಇತಿಹಾಸ ಎಂದು ಕರೆಯಲಾಯಿತು. ಇತಿಹಾಸವು ಪ್ರಾಚೀನದಲ್ಲಿ ನಡೆದ ಘಟನೆಗಳ ವಿವರಣೆಯಾಗಿದ್ದು, ಆ ಕಥಾನಕವನ್ನು ಅದರ ಕಥಾ ಮಹತ್ತ್ವದಿಂದ, ಧಾರ್ಮಿಕ, ಆಧ್ಯಾತ್ಮಿಕ, ಮೌಲಿಕ ಮಹತ್ತ್ವದಿಂದ ಸಾಹಿತ್ಯದ ಕೃತಿಯಾಗಿ ಮೂಡಿಸುವುದಾಗಿತ್ತು. ರಾಮಾಯಣ ಮತ್ತು ಮಹಾಭಾರತ ಈ ದೃಷ್ಟಿಯಿಂದ ಬೃಹತ್ ಪ್ರಮಾಣದಲ್ಲಿ ಒಡಮೂಡಿದ್ದ ಬೃಹತ್ತಾದ ಗುರಿ ಹೊಂದಿದ್ದ ಕೃತಿಗಳಾಗಿದ್ದವು. ಇದನ್ನು ಬರೆದ ಕವಿಗಳು ಕೇವಲ ಪ್ರಾಚೀನವಾದ ಕಥೆಯನ್ನು

ಹೇಳುವುದಷ್ಟನ್ನೇ ಗುರಿಯಾಗಿಸಿಕೊಂಡಿರಲಿಲ್ಲ. ಅವರು ಅರ್ಥಗರ್ಭಿತವಾದ, ಸುಂದರವಾದ, ಗಾಂಭೀರ್ಯವಾಗಿ ಕಥೆಯನ್ನು ಹೇಳಿದರಾದರೂ, ಅವರ ದೃಷ್ಟಿ ಒಬ್ಬ ಶಿಲ್ಪಕಾರನ ದೃಷ್ಟಿಯಾಗಿತ್ತು. ಜೀವನ, ಸೃಷ್ಟಿಯ ಅಂಶಗಳು, ರಾಷ್ಟ್ರೀಯ ಮನೋಭಾವ, ಧರ್ಮ, ಮೌಲಿಕ ವಿಷಯಗಳು ಹಾಗೂ ಸಂಸ್ಕೃತಿಯನ್ನು ವಿಶಾಲವಾಗಿ ಈ ಕೃತಿಗಳಲ್ಲಿ ಸೇರಿಸುವುದಾಗಿತ್ತು. ಜೀವನದ ಬಗ್ಗೆ ಅವರು ಹೊಂದಿದ್ದ ಗಂಭೀರ ಆಲೋಚನೆಗಳು, ಧರ್ಮ ಹಾಗೂ ಸಮಾಜದ ವಿಶಾಲವಾದ ಅರ್ಥ ಹಾಗೂ ತತ್ತ್ವಶಾಸ್ತ್ರದ ಮಹತ್ತರ ವಿಷಯಗಳನ್ನು ಜನಸಾಮಾನ್ಯರಿಗೆ ತಿಳಿಹೇಳುವಂತೆ ಈ ಕಾವ್ಯಗಳ ಮೂಲಕ ಪ್ರಯತ್ನಿಸಲಾಯಿತು. ಹಾಗಾಗಿ ಇಡೀ ಪ್ರಾಚೀನ ಭಾರತೀಯ ಸಂಸ್ಕೃತಿಯು ಇದರಲ್ಲಿ ಪ್ರತಿಬಿಂಬಿತವಾಗಿದ್ದು, ಇವುಗಳನ್ನು ಕಾವ್ಯಗಳು ಎಂದು ಮಾತ್ರ ಹೇಳದೆ ಇವುಗಳನ್ನು ಧರ್ಮಶಾಸ್ತ್ರ ಗ್ರಂಥಗಳೆಂದು, ಧರ್ಮ, ಮೌಲಿಕ, ಸಾಮಾಜಿಕ, ರಾಜಕೀಯ ವಿಷಯಗಳನ್ನು ಒಳಗೊಂಡ ಅವುಗಳು ಜನರ ಮೇಲೆ ಸಾಧಿಸಿರುವ ಪ್ರಭಾವವನ್ನು ಪ್ರತಿಬಿಂಬಿಸಲ್ಪಟ್ಟಿದೆ. ಭಾರತೀಯ ಜನರಿಗೆ ಇವು ಬೈಬಲ್ ಮಾದರಿಯ ಗ್ರಂಥಗಳು. ಈ ಹೋಲಿಕೆ ಬಹುಶಃ ಸರಿಯಲ್ಲ. ಕಾರಣ ಭಾರತೀಯ ಜನರ ಬೈಬಲ್ ಎನ್ನುವ ಈ ಕಾವ್ಯಗಳು ವೇದ, ಉಪನಿಷತ್, ಪುರಾಣ, ತಂತ್ರ, ಧರ್ಮಶಾಸ್ತ್ರ, ಹಾಗೂ ಭಾರತೀಯ ಭಾಷೆಗಳಲ್ಲಿರುವ ಅನೇಕ ಧರ್ಮಗ್ರಂಥಗಳ ಸಾರವನ್ನು ಒಳಗೊಂಡಿವೆ. ಈ ಕೃತಿಗಳ ಗುರಿಯು ಭಾರತೀಯ ಜೀವನದಲ್ಲಿ ಜನಸಮಾನ್ಯರಲ್ಲಿ ತಾತ್ತ್ವಿಕ, ಮೌಲಿಕ, ಸಾಂಸ್ಕೃತಿಕ ವಿಷಯಗಳನ್ನು ಜನಪ್ರಿಯವಾಗಿಸುವುದೇ ಆಗಿತ್ತು. ಜನಸಾಮಾನ್ಯರಲ್ಲಿ ಗಂಭೀರವಾದ ವಿಷಯಗಳನ್ನು ಮಹಾಕಾವ್ಯದಂಥ ವಸ್ತುವನ್ನು, ಕಾವ್ಯದ ಹಿನ್ನೆಲೆಯಲ್ಲಿ, ಒಂದು ಹಿರಿಯ ಕಥೆಯನ್ನು ಹೇಳುವ ಉದ್ದೇಶವನ್ನು, ಒಂದು ಮಹತ್ತರವಾದ ನೆನಪನ್ನು, ಎಂದಿಗೂ ನೆನಪಿನಲ್ಲಿ ಉಳಿಯುವ ವ್ಯಕ್ತಿಗಳನ್ನು, ವ್ಯಕ್ತಿತ್ವಗಳನ್ನು, ಇದೇ ಸಾಮಾಜಿಕ, ಮೌಲಿಕ, ರಾಜಕೀಯ, ಧಾರ್ಮಿಕ ಸಂಸ್ಕೃತಿಯ ಹಿನ್ನೆಲೆಯಲ್ಲಿ ಪರಿಚಯಿಸುವುದೇ ಆಗಿತ್ತು. ಈ ಎಲ್ಲವನ್ನೂ ಸಮಗ್ರವಾಗಿ ತಂದು ಕಾವ್ಯವಾಗಿ ಒಗ್ಗೂಡಿಸಿ ಅರ್ಧ ಇತಿಹಾಸವನ್ನು, ಅರ್ಧ ಕಾಲ್ಪನಿಕ ಘಟನೆಗಳನ್ನು ಹೇಳುತ್ತಾ ಅವುಗಳು ಆಳವಾದ ನೆನಪಿನಲ್ಲಿ ಉಳಿಯುವಂತೆ ಮಾಡಿ ಭಾರತೀಯ ಜನರ ಧರ್ಮದ ಭಾಗವಾಗಿಸಿದರು. ಹೀಗೆ ಸೃಷ್ಟಿಯಾದ ಮಹಾಭಾರತ ಹಾಗೂ ರಾಮಾಯಣವು, ಮೂಲ ಸಂಸ್ಕೃತದಲ್ಲೇ ಆಗಿರಲಿ ಅಥವಾ ಇನ್ನಾವುದೇ ದೇಶೀಯ ಭಾಷೆಯಲ್ಲಾಗಲೀ, ನೃತ್ಯ ಶೈಲಿಯಾದ ಕಥಕ ಮೂಲಕವಾಗಲೀ, ಜನಸಾಮಾನ್ಯರಿಗೆ ತಲುಪುವಂತೆ ಮಾಡಿ ಜನರ ಶಿಕ್ಷಣಕ್ಕೆ, ಸಂಸ್ಕೃತಿಗೆ, ಆಲೋಚನೆಗಳಿಗೆ ಕಾರಣರಾಗಿ, ಓದುಬರಹ ತಿಳಿಯದವರ ಮನಸ್ಸಿನಲ್ಲೂ ನೆಲೆಸುವಂತೆ ಮಾಡಿ ಅವರಿಗೆ ತತ್ತ್ವಶಾಸ್ತ್ರದ, ಮೌಲಿಕ, ಸಾಮಾಜಿಕ, ರಾಜಕೀಯ ವಿಷಯಗಳನ್ನು ಕಾವ್ಯದ ಸುಂದರ ಚೌಕಟ್ಟಿನಲ್ಲಿ ಕಲಿಸುವ ಕೆಲಸವನ್ನು ಈ ಕಾವ್ಯಗಳು

ಮಾಡಿದವು. ಯಾವುದು ಹಿರಿಯ ಮಟ್ಟದ ವಿದ್ಯೆಗೆ ಮಾತ್ರ ದೊರಕುತ್ತಿತ್ತು ಅಂತಹ ವೇದ, ಉಪನಿಷತ್ತುಗಳಲ್ಲಿ ಇದ್ದ ವಿಷಯವನ್ನು ಧರ್ಮಶಾಸ್ತ್ರ, ಅರ್ಥಶಾಸ್ತ್ರದಂತಹ ಗಹನ ಗಂಭೀರ ವಿಷಯಗಳನ್ನು ಈ ಕೃತಿಗಳಲ್ಲಿ ಕ್ರಿಯಾತ್ಮಕವಾಗಿ ಪಾತ್ರಗಳ ಮೂಲಕ ಹಾಕಲಾಯಿತು. ಈ ಪಾತ್ರಗಲು, ಜನಪ್ರಿಯವಾದ ಕಥೆಯ ಹಂದರದ ಜೊತೆ ಸೇರಿಕೊಂಡು, ಜೀವನದ ಘಟನೆಗಳಿಗೆ ಕಾರಣವಾಗಿ, ಎಲ್ಲರ ಮನಸ್ಸನ್ನು ಆಕ್ರಮಿಸಿತ್ತು. ಇವು ಜೀವನವನ್ನೇ ಪ್ರತಿನಿಧಿಸುವಂತಹ ಕಾವ್ಯಗಳಾಗಿ ಪದಗಳ ಮೂಲಕ ಮನಸ್ಸನ್ನು ತಟ್ಟುವ ಸಾಮಾನ್ಯರನ್ನು ಬುದ್ಧಿವಂತರನ್ನು ಸಮಾನವಾಗಿ ಪ್ರಭಾವಗೊಳಿಸುವಂತಹ ಕೃತಿಗಳಾಗಿ ಮೂಡಿದ್ದವು.

* * * *

೪. ಭಾರತೀಯ ಆತ್ಮ ಹಾಗೂ ಶಕ್ತಿಯ ಪುನಶ್ಚೇತನ

ಪ್ರಾಚೀನ ಭಾರತವು ಇತಿಹಾಸಗರ್ಭದಲ್ಲಿ ಕಳೆದುಹೋಗಿಲ್ಲ. ಅದು ತನ್ನ ಕ್ರಿಯಾತ್ಮಕ ಪ್ರಪಂಚವನ್ನು ಮುಚ್ಚಿಹೋಗಿಲ್ಲ. ಭಾರತ ಜೀವಂತವಾಗಿದೆ. ಅದು ತನಗೂ, ತನ್ನ ಜನಸಮುದಾಯಕ್ಕೂ ಮಾಡುವುದು ಇನ್ನೂ ತುಂಬಾ ಇದೆ. ಈಗ ಎಚ್ಚೆತ್ತುಕೊಳ್ಳಬೇಕಾಗಿರುವುದು ಆಂಗ್ಲೀಕೃತ ಪೌರ್ವಾತ್ಯ ಜನರಲ್ಲ, ಪಾಶ್ಚಾತ್ಯರಲ್ಲ, ಪಾಶ್ಚಾತ್ಯರು ತಮ್ಮ ಯಶಸ್ಸು ಮತ್ತು ವೈಫಲ್ಯದ ನಡುವೆ ಮೇಲೆಕೆಳಗೆ ಏಳುತ್ತಾ ಬೀಳುತ್ತಿದ್ದಾರೆ. ಆದರೆ ಬೇಕಾಗಿರುವುದು ಪ್ರಾಚೀನವಾದ, ಮರೆಯಲಾಗದ ಶಕ್ತಿಯನ್ನು ಮತ್ತೆ ಚೇತನಗೊಳಿಸುವುದು. ಮತ್ತೆ ಧೈರ್ಯದಿಂದ ತಲೆಯೆತ್ತಿ ನಿಲ್ಲುವುದು. ಕಡೆಗೆ ಕಾಣುವ ಬೆಳಗನ್ನು ಧೈರ್ಯವಾಗಿ ನೋಡುವುದು, ಧರ್ಮವನ್ನು ವಿಶಾಲವಾದ ಅರ್ಥದಲ್ಲಿ ಕಾಣುವುದು.

ಭಾರತದ ಪುನರ್ಜನ್ಮ

ಈ ಹೊಸಹುಟ್ಟು ನಿಜವೇ ಆದರೆ, ಭಾರತಕ್ಕೆ ಇದು ತನಗೂ ಹಾಗೂ ಈ ಪ್ರಪಂಚಕ್ಕೆ ಮುಖ್ಯವಾದ ವಿಷಯವೇ ಆಗಿದೆ. ತನಗೆ, ಯಾಕೆಂದರೆ, ತನ್ನ ಪ್ರಾಚೀನವಾದ ಆತ್ಮಕ್ಕೆ ಮರುಜೀವನ ಪಡೆದು ರಾಷ್ಟ್ರೀಯ ಚಿಂತನೆ ಉದ್ದೀಪನವಾಗುವುದರಿಂದ; ಈ ಪ್ರಪಂಚಕ್ಕೆ, ಯಾಕೆಂದರೆ, ಮತ್ತೆ ಚೇತನ ಪಡೆಯುವ ಶಕ್ತಿಯು ಈಗಿರುವ ಪ್ರಾಪಂಚಿಕ ಆಲೋಚನೆಗಳಿಂದ, ಬುದ್ಧಿವಂತಿಕೆಯಿಂದ, ಆಲೋಚನೆ ಮಾಡುವ ಶೈಲಿಯಲ್ಲಿ ಬದಲಾವಣೆಯಾಗಿ ಭವಿಷ್ಯತ್ತನ್ನು ಆಳುವ ರೀತಿಯಲ್ಲಿ ವಿಭಿನ್ನವಾಗಿರುವುದು ಎಂಬುದಾದ ಕಾರಣದಿಂದ.

ಅನೇಕರು ತಮ್ಮ ಪ್ರಾಚೀನ ಕಾಲದ ವೈಭವವನ್ನು ದುಃಖದಿಂದ ನೆನಪಿಸಿಕೊಂಡು, ಆ ಕಾಲದ ಋಷಿಮುನಿಗಳು ಈ ಸಂಸ್ಕೃತಿಯ ಸೃಷ್ಟಿಕರ್ತರಾಗಿ, ನಾಗರಿಕತೆಯ ಹುಟ್ಟಿಗೆ ಕಾರಣರಾಗಿ ಪವಾಡಸದೃಶರಾಗಿದ್ದು, ಈಗಿನ ವಿನಾಶದ ಹಿನ್ನೆಲೆಯಲ್ಲಿ ಆ ವೈಭವ ಮರುಕಳಿಸುವುದಿಲ್ಲ ಎಂದು ಭಾವಿಸುತ್ತಾರೆ. ಇದೊಂದು ತಪ್ಪು. ಮೂರು ಬಾರಿ ತಪ್ಪು. ನಮ್ಮದು ಅನಂತವಾದ ಭೂಭಾಗ, ನಮ್ಮ ಜನರು ಅನಂತವಾದವರು. ನಮ್ಮ ಧರ್ಮ ಅನಂತವಾಗಿದ್ದು ಅದರ ಶಕ್ತಿ, ಹಿರಿಮೆ, ಪೂಜ್ಯಭಾವ ಇವುಗಳಲ್ಲಿ ಸ್ವಲ್ಪ ಕಡಿಮೆಯಾಗಿದೆ ಎನಿಸಿದರೂ, ಆದರೆ ಅವು ನಾಶವಾಗಿಲ್ಲ. ಈ

ಭೂಮಿಯ ಋಷಿಮುನಿಗಳು ನಮ್ಮ ವೀರರು ಹಾಗೂ ಅವರು ನಮ್ಮ ಭಾರತೀಯ ಮಣ್ಣಿನವರೇ ಆದವರು. ಅವರು ಹುಟ್ಟಿ ಬೆಳಕು ಬೀರದ ಕಾಲವು ಯಾವುದೂ ಇರಲಿಲ್ಲ.

ಈಗಿರುವ ಪರಿಸ್ಥಿತಿಯ ವೈಷಮ್ಯವನ್ನು ಗಮನದಲ್ಲಿಟ್ಟುಕೊಂಡು, ಪುನರುಜ್ಜೀವನವಾದಾಗ ಹೇಗೆ ಇರುತ್ತದೆ ಎಂದು ಊಹಿಸುವುದು ಸಂದೇಹಾತ್ಮಕ ಪ್ರಯತ್ನವಾಗಿದೆ. ಒಂದು ಸಂಗೀತ ವಾದ್ಯವನ್ನು ಶ್ರುತಿಗೂಡಿಸಲು ಪ್ರಯತ್ನಿಸುತ್ತಿರುವಾಗ ಅದರ ಧ್ವನಿಯಲ್ಲಿ ಸಾಮರಸ್ಯವನ್ನು ಹುಡುಕಿದಂತೆ ಈ ಪ್ರಯತ್ನ. ಒಂದಲ್ಲ ಒಂದು ದಿಕ್ಕಿನಲ್ಲಿ ನಮಗೆ ಅದು ನಿರ್ಧಾರಯುತವಾಗಿ ಮುಂದುವರೆಯುವುದು ಕಾಣಬಹುದು. ಆದರೆ ಇವು ಸಹ ನಮಗೆ ಕಾಣುತ್ತಿರುವ ಮೊದಲ ಇಂಗಿತಗಳು. ಇದಕ್ಕಿಂತ ಹೆಚ್ಚಿನದಾಗಿ ಕಾಣುವ ಸಾಧ್ಯತೆಯಿದೆ ಎಂದೂ, ನಾವು ಊಹಿಸಿರುವುದಕ್ಕಿಂತ ಮಿಗಿಲಾದ್ದು ಆಗಬಹುದು ಎಂಬುದನ್ನು ನಾವು ನಿರ್ಧರಿಸಬಹುದು. ಇದು ಧರ್ಮ ಅಥವಾ ಆಧ್ಯಾತ್ಮದ ವಿಷಯದಲ್ಲಿರಬಹುದು, ಆಲೋಚನೆ ಹಾಗೂ ವಿಜ್ಞಾನದ, ಕವಿತೆ ಮತ್ತು ಕಲೆ ಅಥವಾ ಸಮಾಜ ಹಾಗೂ ರಾಜಕೀಯ ವಿಷಯಗಳಲ್ಲಿ ಬೇಕಾದರೂ ಆಗಬಹುದು. ಎಲ್ಲಾ ಕಡೆ, ಅತಿ ಹೆಚ್ಚಾಗಿ, ಆರಂಭದ ಆರಂಭವೇ ಕಾಣಿಸುತ್ತಿದೆ.

ಒಂದು ವಿಷಯವಂತೂ ನಿರ್ಧಾರಿತವಾದಂತೆ ಅನಿಸುತ್ತದೆ. ಪೂರ್ವದಲ್ಲಿ ಆದಹಾಗೆ ಭಾರತದ ಭವಿಷ್ಯದಲ್ಲೂ ಆಧ್ಯಾತ್ಮಿಕ ಗುರಿಯು ಪ್ರಧಾನವಾಗಿರುತ್ತದೆ. ಅದೇ ಅದರ ನಿಜವಾದ ಮೂಲ ಹಾಗೂ ಪ್ರಭಾವಶಾಲಿ ವ್ಯಕ್ತಿತ್ವವಾಗಿರುತ್ತದೆ. ಆಧ್ಯಾತ್ಮಿಕತೆ ಎಂದಾಕ್ಷಣ ನಾವು ಯಾವುದೋ ದೂರದ ಅಭೌತಿಕ ಮನಸ್ಸಿನ ಅಥವಾ ಕನಸು ಕಾಣುವ ಮಾತನ್ನು ಆಡುತ್ತಿಲ್ಲ. ಆ ಕಾಲದ ಭಾರತ ಆ ಭವ್ಯತೆಯಿಂದ ಮೆರೆದ ಭಾರತ ಹಾಗಿರಲಿಲ್ಲ – ಯೂರೋಪಿಯನ್ ಚಿಂತಕರು ಯಾವುದೇ ವಿಧವಾಗಿ ವಿಶ್ಲೇಷಿಸಿರಲಿ – ಅದು ಭವಿಷ್ಯ ಭಾರತವೂ ಆಗಿರುವುದಿಲ್ಲ. ಅಭೌತಿಕ ಆಲೋಚನೆ ಭಾರತದ ಮನಸ್ಸಿನಲ್ಲಿ ಯಾವಾಗಲೂ ಪ್ರಧಾನವಾಗಿರುತ್ತದೆ ಎಂಬುದನ್ನು ಒಪ್ಪಲೇಬೇಕು.

ಆ ದಿಕ್ಕಿನಲ್ಲಿ ಅದು ತನ್ನನ್ನು ಕಳೆದುಕೊಳ್ಳುವುದಿಲ್ಲ ಎಂಬ ಆಶೆಯನ್ನು ಇಟ್ಟುಕೊಳ್ಳಬೇಕಾಗುತ್ತದೆ. ಆದರೆ ಭಾರತದ ಅಭೌತಿಕವಾದವು ಫ್ರೆಂಚ್ ಮತ್ತು ಜರ್ಮನ್ ಮನಸ್ಸಿನಂತೆ ಭಾವನೆಗಳ ಬುಗುರಿಯಲ್ಲ. ಈ ಯೂರೋಪಿನ ಚಿಂತಕರ ಪ್ರಕಾರ ಜನಸಾಮಾನ್ಯರ ಬುದ್ಧಿವಂತಿಕೆಯ ಸಾಮಾನ್ಯೀಕರಣವನ್ನು ದೈಹಿಕ ವಿಜ್ಞಾನದ ಆಧಾರದ ಮೇಲೆ ಮಾಡಬಹುದು. ಇದರರ್ಥ ಅದರ ದೃಷ್ಟಿ ಆಧ್ಯಾತ್ಮಿಕ ಸಾಕ್ಷಾತ್ಕಾರಕ್ಕೆ ಒಂದು ಬೌದ್ಧಿಕ ಉತ್ತರವನ್ನು ಕಂಡುಹಿಡಿಯುವ ಪ್ರಯತ್ನವೇ ಆಗಿದೆ. ನಂತರದ ದಿನಗಳಲ್ಲಿ ಭಾರತದ ದೃಷ್ಟಿಯು ಜೀವನದಿಂದ ದೂರವಾಗುತ್ತಾ ಹೋಯಿತಾದರೂ,

ಅದು ಅದರ ಮೂಲ ರೂಪವಾಗಿರಲಿಲ್ಲ. ಅದರ ಮೂಲ ವೇದಾಂತದ ಸ್ಫೂರ್ತಿಯ ರೂಪದಲ್ಲೊ ಅಥವಾ ನಂತರದ ಬೆಳೆದ ರೂಪವಾದ ಗೀತೆಯಲ್ಲಿರುವಂತೆ ಆಗಿದ್ದಿರಬಹುದು. ಗೀತೆಯ ಉದ್ಭವದ ವೇಳೆಗೆ ಭಾರತೀಯ ಚಿಂತನೆಯು ಸೃಷ್ಟಿಯು ಗರಿಷ್ಠ ಪ್ರಮಾಣವನ್ನು ಮುಟ್ಟಿತ್ತು. ಜೀವನದ ಮೌಲ್ಯದ ಬಗ್ಗೆ ಮೊದಲ ಬಾರಿಗೆ ಅನುಮಾನವನ್ನು ತೋರಿಸಿದ ಬೌದ್ಧ ಧರ್ಮವೇ ಇದನ್ನು ಕೇವಲ ತನ್ನ ಚಿಂತನೆಯ ವಿಷಯವಾಗಿ ಆರಿಸಿಕೊಂಡಿತ್ತು. ಅದರ ಜಂಗಮಸ್ಥಿತಿಯಲ್ಲಿ, ಅದು ಮೌಲಿಕ ಹಾಗೂ ಆಧ್ಯಾತ್ಮಿಕ ಪದ್ಧತಿಗಳಿಗೆ ಶರಣಾಗಿತ್ತು. ಅದು ಹೊಸ ಮೌಲ್ಯಗಳನ್ನು, ದೃಢ ಶಕ್ತಿಯನ್ನು ಕೊಟ್ಟಿತ್ತು. ಆದರೂ ಅದು ಮಾನವನ ಜೀವನಕ್ಕೆ ಮೃದುವಾದ ಆದರ್ಶವನ್ನು ಕೊಟ್ಟಿತ್ತು. ಹಾಗಾಗಿ ಬೌದ್ಧಧರ್ಮವು ಕಲೆಯಲ್ಲೂ, ಜೀವನವನ್ನು ಅರ್ಥೈಸುವುದರಲ್ಲೂ ಸೃಷ್ಟ್ಯಾತ್ಮಕವಾದ ಅರ್ಥವನ್ನು ನೀಡಿತ್ತು. ಆತ್ಮದ ಸತ್ಯವನ್ನು ಆಳವಾಗಿ ಅರಿಯುವುದರಲ್ಲಿ ಹಾಗೂ ವೇಗವಾಗಿ ಜೀವನವನ್ನು ಹೊಸ ಮೂಸೆಯಲ್ಲಿ ಹಾಕುವುದರಲ್ಲಿ ಭಾರತೀಯ ಮನಸ್ಸಿನ ಶಕ್ತಿಯನ್ನು ನಾವು ಕಾಣಬಹುದು. ಹಾಗಾಗಿ ಭಾರತೀಯ ಆಲೋಚನೆಯು ಆರೋಗ್ಯ, ಹಿರಿಮೆ ಹಾಗೂ ದೃಢತೆಗೆ ಕಾರಣವಾಗಿತ್ತು.

ಭಾರತದಲ್ಲಿ ಎಲ್ಲಾ ಜೀವನದ ಹಿರಿಯ ಆಂದೋಲನಗಳು ಒಂದು ಹೊಸ ಆಧ್ಯಾತ್ಮಿಕ ಆಲೋಚನೆಯ ಮೂಲಕ ಹುಟ್ಟಿಕೊಂಡಿದೆ. ಹಾಗೂ ತನ್ಮೂಲಕ ಹೊಸ ಧಾರ್ಮಿಕ ಕ್ರಿಯೆಯ ಜನ್ಮವಾಗಿದೆ. ಇದಕ್ಕಿಂತ ಮಹತ್ತರವಾದ ವಿಷಯ ಮತ್ತೊಂದು ಆಗಿರಲು ಸಾಧ್ಯವಿಲ್ಲ. ಹೊಸ ಯೂರೋಪಿಯನ್ ಪ್ರಭಾವವೂ ಬೌದ್ಧಿಕವಾಗಿ, ತಾರ್ಕಿಕವಾಗಿ, ಅನೇಕಬಾರಿ ಧರ್ಮಕ್ಕೆ ವಿರುದ್ಧವಾಗಿ, ೧೮–೧೯ನೇ ಶತಮಾನದಲ್ಲಿ ಆವಿರ್ಭವಿಸಿದ ಸರ್ವಜನಾಂಗೀಯ ಪ್ರಭಾವ ಭಾರತದಲ್ಲಿ ಮೊದಲಿಂದಲೂ ಇದ್ದು ಧಾರ್ಮಿಕ ಬದಲಾವಣೆಗಳಿಗೆ ಹೇಗೆ ಕಾರಣವಾಗಿತ್ತು? ಭಾರತೀಯ ಮನಸ್ಸಿನಲ್ಲಿ ಇರುವ ವಿಚಾರವೆಂದರೆ ಭಾವನೆಗಳ ಪುನರ್ನಿರ್ಮಾಣವಾಗಬೇಕಾದರೆ ಅದಕ್ಕೆ ಆಧ್ಯಾತ್ಮಿಕ ಅಡಿಪಾಯವಿರಬೇಕು, ಅದು ಮೊದಲಿಂದಲೂ ಧಾರ್ಮಿಕ ಗುರಿಯನ್ನು, ರೂಪವನ್ನು ಹೊಂದಿರಬೇಕು. ಬ್ರಾಹ್ಮೋಸಮಾಜವು ಹುಟ್ಟಿಕೊಂಡಾಗ ಅದರಲ್ಲಿ ಈ ಸಾರ್ವರೂಪಿಕ ಅಭಿಪ್ರಾಯವಿತ್ತು. ಅದು ತಾನು ಆರಿಸಿಕೊಂಡ ಗುರಿಗೆ ಇಂತಹದೇ ಅಭೌತಿಕ ರೂಪವಿತ್ತು. ಅದಕ್ಕೆ ವೇದಾಂತೀಯ ಸ್ಫೂರ್ತಿಯು, ಹೊರಾವರಣದಲ್ಲಿ ಇಂಗ್ಲಿಷ್ ಏಕಾತ್ಮಕತೆಯ ಭಾವವೂ, ಸ್ವಲ್ಪ ಕ್ರಿಶ್ಚಿಯನ್ ಪ್ರಭಾವವೂ, ಗಟ್ಟಿಯಾದ ಧಾರ್ಮಿಕ ತಾರ್ಕಿಕವಾದವು ಹಾಗೂ ಬೌದ್ಧಿಕವಾದವೂ ಇದ್ದಿತು. ಅದು ವೇದಾಂತವನ್ನು ಮತ್ತೊಂದು ರೂಪದಲ್ಲಿ ಕಾಣಲು ನಡೆಸಿದ ಪ್ರಯತ್ನವಾಗಿತ್ತು. ಅದು ಪ್ರಾಟೆಸ್ಟೆಂಟ್ ಚಳುವಳಿಯಂತೆ ವಿರೋಧ ದಾರಿಯನ್ನು ಹಿಡಿಯುವಂತೆ ಕಂಡರೂ ಅದು ಭಾರತೀಯ ತಾರ್ಕಿಕ ಪದ್ಧತಿಯನ್ನೇ ಅಳವಡಿಸಿಕೊಂಡಿತ್ತು,

ಭಾರತೀಯ ಸಹನೆಯನ್ನು ತನ್ನದಾಗಿಸಿಕೊಂಡಿತ್ತು. ಅದರ ಪ್ರಗತಿಯ ಮೂರು ಹಂತಗಳು ಮೂರು ದಾರಿಗಳಾಗಿ ಒಡೆದುಕೊಂಡು ಭಾರತೀಯ ಮನಸ್ಸಿನ ಮೂರು ಗುರಿಗಳೇ ಆಗಿದ್ದವು– ಜ್ಞಾನ, ಭಕ್ತಿ ಮತ್ತು ಕರ್ಮ, ಆಲೋಚನೆ ಮಾಡುವ ತಾತ್ತ್ವಿಕವಾದ, ಭಾವನಾತ್ಮಕವಾದ ಪ್ರಪತ್ತಿವಾದ ಹಾಗೂ ಪ್ರಾಯೋಗಿಕ ಆಧ್ಯಾತ್ಮಿಕ ಚಿಂತನವೇ ಅದಾಗಿತ್ತು. ಪಂಜಾಬಿನಲ್ಲಿ ಆರ್ಯಸಮಾಜವು ವೇದದ ಅರ್ಥವನ್ನು ತಿಳಿಯಲು ಪ್ರಯತ್ನಪಟ್ಟು ಹಳೆಯ ವೈದಿಕ ತಥ್ಯಗಳನ್ನು ಈಗಿನ ಪ್ರಸಕ್ತ ಸಮಾಜಕ್ಕೆ ಬದಲಾಯಿಸಲು ಪ್ರಯತ್ನಿಸಿತ್ತು. ಇನ್ನು ವಿಶಾಲವಾಗಿ ಬೆಳೆದು ನಿಂತ ರಾಮಕೃಷ್ಣ–ವಿವೇಕಾನಂದರ ಚಳವಳಿಯು ಭಾರತೀಯ ನೆಲದ ಧಾರ್ಮಿಕ ಗುರಿಗಳು ಹಾಗೂ ಆಧ್ಯಾತ್ಮಿಕ ಅನುಭವಗಳ ರೂಪವೇ ಆಗಿತ್ತು. ಇವೆಲ್ಲದರಲ್ಲೂ ಪ್ರಾಚೀನ ಸಂನ್ಯಾಸಾಶ್ರಮದ ಗರಿಮೆ, ಏಕದೇವತಾವಾದವು ಇದ್ದಿತಾದರೂ ಹೊಸ ಮಾನವೀಯ ಅರ್ಥಗಳನ್ನು ಒಂದು ಕೆಲಸವನ್ನು ಎತ್ತಿಕೊಂಡು ಕೈಗೂಡಿಸಬೇಕೆಂಬ ಉತ್ಸಾಹವನ್ನು ಕಾಣುತ್ತೇವೆ. ಅದೇ ಸಂದರ್ಭದಲ್ಲಿ, ಸಂಪ್ರದಾಯವಾದಿ ಹಿಂದೂ ಸಭ್ಯತೆಯ ಪುನರುಜ್ಜೀವನಕ್ಕೆ ಪ್ರಯತ್ನಗಳು ನಡೆದವು. ಇದು ಇಂದಿಗಿಂತ ಹಿಂದಿನ ಎರಡು ಮೂರು ದಶಕಗಳಲ್ಲಿ ಬಹಳ ಶಕ್ತಿಯುತವಾಗಿತ್ತು. ಭಾರತದ ಇತರ ಭಾಗಗಳಲ್ಲಿ ಈ ದೇಶೀಯ ಚಳವಳಿಗಳ ಪ್ರಭಾವ ಕಂಡುಬಂದು, ಕೆಲವು ಕಡೆ ತಮ್ಮದೇ ಸಣ್ಣ ಚಳವಳಿಗಳಿಗೆ ಕಾರಣವಾಯಿತು. ಬಂಗಾಳದಲ್ಲಿ ಇತ್ತೀಚೆಗೆ ನವ–ವೈಷ್ಣವ ಪಂಥದ ಉದಯವಾಗಿ ಇಂತಹ ಚಳವಳಿಗಳು ಹುಟ್ಟುತ್ತಲೇ ಇವೆ ಎಂಬುದನ್ನು ತೋರಿಸುತ್ತದೆ. ಭಾರತದ ಉದ್ದಗಲಕ್ಕೂ ಪ್ರಾಚೀನ ಧಾರ್ಮಿಕ ಪಂಗಡಗಳು ಮತ್ತು ಪದ್ಧತಿಗಳು ಮತ್ತೆ ಪುನಶ್ಚೇತನಗೊಂಡು ಅವು ಕೇಳಿಬರುತ್ತಿವೆ, ಕಾಣಬರುತ್ತಿವೆ. ಇಸ್ಲಾಂ ಧರ್ಮವು ಜನಸಾಮಾನ್ಯರ ಚಳವಳಿಯಲ್ಲಿ ತಾನೂ ಪಾತ್ರ ವಹಿಸಿ, ಮೂಲ ಇಸ್ಲಾಮಿಕ್ ಆದರ್ಶಗಳನ್ನು ಮೇಲಕ್ಕೆ ಹಿಡಿದು ಭಾರತದಲ್ಲಿ ಮುಸಲ್ಮಾನ್ ಆಂದೋಲನಕ್ಕೆ ಅವಕಾಶ ಮಾಡಿಕೊಟ್ಟಿದೆ.

ಬಹುಶಃ ಇವೆಲ್ಲಕ್ಕೂ ಅರ್ಥವಿದೆ ಎಂದಲ್ಲ, ಅರ್ಥವಿಲ್ಲ ಎಂದಲ್ಲ. ಬಹುಶಃ ಇವೆಲ್ಲವೂ ಪ್ರಾರಂಭಿಕ ದೆಸೆಯಲ್ಲಿದ್ದು ಭವಿಷ್ಯದ ಕಡೆ ನೋಡುತ್ತಿರುವ ಪ್ರಾಚೀನತೆಯ ಹಿನ್ನೆಲೆಯಿರುವ ಭವಿಷ್ಯತ್ತಿನ ಆಶೋತ್ತರಗಳಿರಬಹುದು. ಭಾರತವು ಧರ್ಮಗಳ ಸಂಗಮದ ದೇಶ. ಹಿಂದೂ ಧರ್ಮ ಎಂಬುದೇನಿದೆ ಅದು ಬಹಳ ಸಂಕ್ಲಿಷ್ಟ ಹಾಗೂ ವಿಶಾಲವಾದ ವಿಷಯ. ಅದು ಧರ್ಮ ಎಂಬ ವಿಭಿನ್ನತೆಯಿಂದ ಕೂಡಿದೆ ಎಂದಲ್ಲ, ಆಧ್ಯಾತ್ಮಿಕ ಆಲೋಚನೆ, ಸಾಕ್ಷಾತ್ಕಾರ ಹಾಗೂ ಆಶೋತ್ತರಗಳನ್ನು ಒಳಗೊಂಡ ಒಂದು ವಿಷಯ. ಈ ಆಂದೋಲನದಿಂದ ಏನೆಲ್ಲಾ ಹುಟ್ಟುತ್ತದೆ ಎಂಬುದು ಭವಿಷ್ಯತ್ತನ್ನು ನಿರ್ಧರಿಸುತ್ತದೆ. ಕ್ರಿಯಾತ್ಮಕವಾಗಿ ಹೊಸ ಸಫಲತಾತ್ಮಕ ಯತ್ನಗಳು ನಡೆದು, ಪ್ರಾಚೀನ ಪದ್ಧತಿಗಳಿಗೆ ಹೊಸ ಅರ್ಥ ದೊರಕುತ್ತಿದೆ. ಹೊಸ

ಅಧ್ಯಯನ, ಪುನರ್ವಸತಿ, ಹಳೆಯ ಶಿಸ್ತಿನ ಜೀವನದ ಬಗ್ಗೆ ಪ್ರೀತಿ, ಹಳೆಯ ಆದೇಶಗಳ ಮರುಸೂಚನೆ – ವೇದಾಂತ, ವೇದ, ಪುರಾಣ, ಯೋಗ ಮತ್ತು ಇತ್ತೀಚೆಗೆ ತಂತ್ರ, ಇವುಗಳೆಲ್ಲಕ್ಕೂ ಹೊಸ ಅರ್ಥ, ಹೊಸ ಆಯಾಮ ದೊರಕುತ್ತಿದೆ. ಈ ಅರ್ಥ ಯಾವಾಗಲೂ ಸರಿಯಾಗಿದೆ ಎಂದೇನಲ್ಲ. ಆದರೆ ಪ್ರಾಯೋಗಿಕವಾಗಿ, ಆಲೋಚನೆ ಹಾಗೂ ಜೀವನದಲ್ಲಿ ಚಾಲನೆಗೆ ತರುವುದು, ಪ್ರಾಚೀನ ತತ್ತ್ವದ ಮೇಲೆ ಹೊಸ ಅನುಭವಗಳನ್ನು ಪಡೆಯುವ ಕುತೂಹಲ ಎದ್ದುಕಾಣುತ್ತಿದೆ. ಇದೆಲ್ಲದರ ಫಲ ಏನೇ ಆಗಿರಲಿ, ಈ ಆಧ್ಯಾತ್ಮಿಕ ಹಾಗೂ ಧಾರ್ಮಿಕ ಚಳುವಳಿಯು ಆಧುನಿಕ ಭಾರತದ ಪ್ರಧಾನಸೂಚಿಯಾಗಿ ಎದ್ದುನಿಲ್ಲುತ್ತದೆ. ಮತ್ತೆ ಬೇರೆ ಕ್ಷೇತ್ರಗಳಲ್ಲಿ ಕ್ರಿಯಾತ್ಮಕವಾಗುವುದಕ್ಕಿಂತ ಹೆಚ್ಚಾಗಿ ವಿಮರ್ಶೆ ಮಾಡುವುದೇ ಆಗಿದ್ದರೆ, ಈ ಕ್ಷೇತ್ರದಲ್ಲಿ ಪ್ರತಿಯೊಂದೂ ಸುದೃಢವಾಗಿ ಕ್ರಿಯಾತ್ಮಕವಾಗಿದೆ. ವಿಶೇಷವಾಗಿ ನಾವು ಎಲ್ಲಾ ಕಡೆ ಜೀವನದಲ್ಲಿ ಚೇತನವು ಹಿಂತಿರುಗಿರುವುದನ್ನು ಕಾಣುತ್ತೇವೆ. ಹೊಸ ಜೀವನಕ್ಕೆ ನಾಂದಿಯಾಗಿ ಆಧ್ಯಾತ್ಮಿಕ ಜೀವನವು ಹೊಸ ಜೀವನದ ಬುನಾದಿಯಾಗಿರುವುದು ಕಂಡುಬರುತ್ತದೆ. ವಾನಪ್ರಸ್ಥಾಶ್ರಮವಾಗಲೀ ಸಂನ್ಯಾಸಾಶ್ರಮವಾಗಲೀ ತನ್ನೊಳಗೆ ಚಿಂತನೆ ನಡೆಸುವ ಏಕಾಂಗಿ ಅವಸ್ಥೆಗಳಾಗಿ ಉಳಿದಿಲ್ಲ. ಆದರೆ ಅವು ಸಮಾಜಮುಖಿಯಾಗಿ, ವಿದ್ಯೆಯ ಪರವಾಗಿ, ಮಾನವೀಯವಾಗಿ ಆಗಿವೆ. ಇತ್ತೀಚಿನ ದಿನಗಳಲ್ಲಿ ನಾಯಕರು ಹೇಳುವ ಮಾತುಗಳನ್ನು ಕೇಳಿದರೆ, ಜೀವನದ ಬಗ್ಗೆ ಬಲಬಿಟ್ಟು ಮಾತನಾಡುತ್ತಿರುವುದು ಬೆಳೆಯುತ್ತಿರುವುದು ನೋಡಬಹುದು. ಇದು ಆತ್ಮಪ್ರಜ್ಞೆಯೂ ಹೌದು, ಧನಾತ್ಮಕವೂ ಹೌದು. ಇದು ಈಗಿನ ಪರಿಸ್ಥಿತಿಯಲ್ಲಿ ಭವಿಷ್ಯದ ಬಗ್ಗೆ ತಿಳಿಯಬೇಕಾದ ಮಾತು. ಇಲ್ಲಿ ಭಾರತೀಯ ಪುನರುಜ್ಜೀವನದ ಕೀಲಿಕೈ ಇದೆ. ರೂಪಗಳಿಂದ ಹಿಂತಿರುಗಿ ಸ್ವತಂತ್ರವಾದ ಆಧ್ಯಾತ್ಮಿಕತೆಯತ್ತ ಸಾಗುವುದು ಜೀವನದಲ್ಲಿ ಆಧ್ಯಾತ್ಮಿಕತೆಗೆ ಬೆಲೆ ನೀಡಿದಂತೆ...

ಹೀಗಾಗಿ ಪುನರುಜ್ಜೀವನವು, ಇದು ಹೀಗೆ ಎಂದು ಹೇಳಬಾರದಿದ್ದರೂ, ಅದರ ಹೆಸರನ್ನು, ಗಮನಿಸಿದ್ದೇ ಆದರೆ, ಭಾರತದ ಪುನರ್ಜನ್ಮವೇ ಆಗಿ ಈ ದೇಹಕ್ಕೆ ಹೊಸ ಶಕ್ತಿಯನ್ನು ಅದರ ಪ್ರಾಚೀನ ಆತ್ಮಕ್ಕೆ ಹೊಸ ಚೇನತವನ್ನು (ಪ್ರಜ್ಞಾ ಪುರಾಣೀ) ನೀಡುವ ಸಂಕೇತವಾಗಿ ಕಂಡುಬರುತ್ತಿದೆ. ಅದರ ಪ್ರಾಚೀನ ಜೀವನದ ಪ್ರತಿ ಹಂತದಲ್ಲಿ ಆಧ್ಯಾತ್ಮಿಕ ಗುರಿ ಕಂಡುಬರುತ್ತಿದೆ.

...ಆಧ್ಯಾತ್ಮಿಕತೆ ಎಂಬುದು ಯಾವುದೇ ಧರ್ಮಕ್ಕಿಂತ ವಿಶಾಲವಾದದ್ದು. ಈಗ ಪ್ರಕಟವಾಗುತ್ತಿರುವ ವಿಷಯಗಳನ್ನು ಅರ್ಥ ಮಾಡಿಕೊಂಡರೆ, ಅತಿ ದೊಡ್ಡ ಧರ್ಮವೂ ಸಹ ಒಂದು ವಿಶಾಲವಾದ ಪಂಗಡವಾಗಿ ವಿಶ್ವಧರ್ಮದ ಒಂದು ಅಂಗವಾಗಿ ಕಂಡುಬರುತ್ತದೆ. ಅದರ ಮೂಲಕ ನಾವು ಅನಂತವನ್ನು ದೈವೀಶಕ್ತಿಯನ್ನು ಹಿರಿದಾದ ಆತ್ಮವನ್ನು ಅರಿಯಲು ಭವಿಷ್ಯತ್ತಿನಲ್ಲಿ ಪ್ರಯತ್ನಿಸುತ್ತೇವೆ. ಏಕತೆಯ ಮೂಲ, ಒಂದು

ಸಮೀಕರಣವನ್ನು ಕಂಡುಹಿಡಿಯುವ ಪ್ರಯತ್ನ, ಮಾನವೀಯ ಜೀವನದ ಮೌಲ್ಯವೃದ್ಧಿ – ಇವುಗಳನ್ನು ಸಹ ಅರಿಯಲು ಪ್ರಯತ್ನಿಸುತ್ತೇವೆ.

ಇದರರ್ಥ ನಾವು ನಮ್ಮ ದೃಷ್ಟಿಯಿಂದ ಅನೇಕವನ್ನು ಬಿಟ್ಟುಬಿಡತ್ತೇವೆ ಎಂದಲ್ಲ. ಹಿರಿದಾದ ಮಾನವೀಯ ಜೀವನವನ್ನು, ಈ ಆಧುನಿಕ ಜಗತ್ತಿನ ಸಮಸ್ಯೆಗಳನ್ನು, ಮಾನವನ ಕ್ರಿಯಾತ್ಮಕ ಚಟುವಟಿಕೆಗಳನ್ನು ಅಥವಾ ಮನುಷ್ಯನ ಆತ್ಮದಲ್ಲಿ ಸಹಜವಾಗಿ ಇರುವ ಆಸೆ ಆಕಾಂಕ್ಷೆಗಳನ್ನು, ಸಂತೋಷ, ಬೆಳಕು, ಶಕ್ತಿ, ಉತ್ತಮತೆ – ಇವುಗಳನ್ನು ಬಿಟ್ಟುಬಿಡುತ್ತೇವೆ ಎಂದಲ್ಲ. ಮನಸ್ಸಿಲ್ಲದ ಚೇತನ, ದೇಹವಿಲ್ಲದ ಚೇತನ– ಇದು ಮನುಷ್ಯನಲ್ಲ. ಹಾಗಾಗಿ ಮಾನವೀಯ ಆಧ್ಯಾತ್ಮಿಕತೆಯು ಮನಸ್ಸು, ಜೀವನ ಹಾಗೂ ದೇಹಕ್ಕೆ ನೀಡಬೇಕಾದ ಗೌರವವನ್ನು ನೀಡಲೇಬೇಕು. ಅವನ್ನು ಕೀಳಾಗಿ ಕಾಣಬಾರದು. ಅವುಗಳನ್ನು ಉನ್ನತವಾಗಿ ನಾವು ಗಮನಿಸಬೇಕು. ಕಾರಣ, ಅವುಗಳ ಮೂಲಕವೇ ಆತ್ಮನು ಮನುಷ್ಯನಲ್ಲಿ ಜೀವನ ನಡೆಸುತ್ತಾನೆ. ಪ್ರಾಚೀನ ಭಾರತೀಯ ಸಂಸ್ಕೃತಿಯು ಮನಸ್ಸು, ಜೀವನ ಮತ್ತು ದೇಹಕ್ಕೆ ಪ್ರಾಚೀನ ಹೆಲ್‌ನಿಕ್ ಅಥವಾ ಆಧುನಿಕ ವೈಜ್ಞಾನಿಕ ಚಿಂತನೆ ನೀಡುವಷ್ಟೇ ಪ್ರಾಮುಖ್ಯತೆಯನ್ನು ನೀಡಿತ್ತು. ಹಾಗೆ ಪ್ರಾಮುಖ್ಯತೆಯನ್ನು ನೀಡಲು ಅದಕ್ಕೆ ಬೇರೆಯದೇ ಆದ ಕಾರಣವಿತ್ತು, ಹಿರಿದಾದ ಗುರಿಯಿತ್ತು. ಹಾಗಾಗಿ ಯಾವುದು ಸೇವೆ ಮಾಡುತ್ತದೊ, ಆರೋಗ್ಯಕವಾದದ್ದೊ ಅದೆಲ್ಲಕ್ಕೂ ಸ್ವಾತಂತ್ರ್ಯವನ್ನು ನೀಡಲಾಗಿತ್ತು. ತರ್ಕಕ್ಕೆ, ವಿಜ್ಞಾನಕ್ಕೆ, ತತ್ತ್ವಶಾಸ್ತ್ರಕ್ಕೆ, ಸೌಂದರ್ಯಪ್ರಜ್ಞೆಗೆ ಅನೇಕ ಕಲೆಗಳಿಗೆ– ಇವು ಸಣ್ಣದಾಗಿರಲಿ, ದೊಡ್ಡದಾಗಿರಲಿ – ಎಲ್ಲಕ್ಕೂ, ದೇಹದ ಆರೋಗ್ಯಕ್ಕೆ ದೇಹದ ಶಕ್ತಿಗೆ, ದೈಹಿಕ ಹಾಗೂ ಆರ್ಥಿಕ ಸುಸ್ಥಿತಿಗೆ, ಜನಾಂಗದ ಮುನ್ನಡೆಗೆ – ಎಲ್ಲಕ್ಕೂ ಸ್ವಾತಂತ್ರ್ಯವನ್ನು ನೀಡಲಾಗಿತ್ತು. ಭಾರತದಲ್ಲಿ ಎಂದೂ ರಾಷ್ಟ್ರೀಯ ಬಡತನ ಎಂಬ ಮಾದರಿಯಿರಲಿಲ್ಲ. ಕೆಲವರು ಹಾಗೊಂದು ಇತ್ತು ಎಂಬಂತೆ ಮಾತನಾಡುತ್ತಾರೆ ಅಥವಾ ಅದರ ಆಧ್ಯಾತ್ಮಿಕತೆಗೆ ನಗ್ನತೆಯೂ ಇರಲಿಲ್ಲ. ಹಾಗೆಯೇ ಅದರ ಸೈನಿಕ, ರಾಜಕೀಯ, ಸಾಮಾಜಿಕ ಶಕ್ತಿ ಸುದೃಢವಾಗಿತ್ತು. ಅವರ ಗುರಿ ಮೇಲಿತ್ತು, ಆದರೆ ಅದರ ಅಡಿಪಾಯ ಅಗಲವಾಗಿದ್ದು, ಭದ್ರವಾಗಿತ್ತು. ಈ ಮೊದಲ ತತ್ತ್ವಗಳ ಮೇಲೆ ಅವರು ಹೆಚ್ಚಿನ ಒತ್ತನ್ನು ನೀಡಿದ್ದರು. ಆವಶ್ಯಕವಾಗಿ ಹೊಸ ಭಾರತವು ಇದನ್ನೇ ಇಚ್ಛಿಸಿ, ಹೊಸ ವಿಶಾಲವಾದ ಭಾವನೆಗಳ ಅಡಿಯಲ್ಲಿ ಸಂಕ್ಲಿಷ್ಟವಾದ ಪರಿಸ್ಥಿತಿಗೆ ಅಳವಡಿಸಲು ಪ್ರಯತ್ನಿಸುತ್ತದೆ. ಈ ರೀತಿ ಮಾಡುವ ಭಾರತದ ಮನಸ್ಸು ಪ್ರಾಚೀನ ಭಾರತದ ಮನಸ್ಸಿಗಿಂತ ಹಿರಿಯದಾಗಿರುತ್ತದೆ. ಆಧ್ಯಾತ್ಮಿಕತೆ ಎಂಬುದು ವಿಶೇಷ ಎಂದೇನು ಎಣಿಸಬೇಕಾಗಿಲ್ಲ. ಅದು ಎಲ್ಲವನ್ನು ಸೇರಿಸಿಕೊಂಡಂತೆ ಇರಬೇಕು.

* * *

ನಮ್ಮ ಮುಂದೆ ಇಟ್ಟುಕೊಂಡಿರುವ ಕೆಲಸ ಯಾಂತ್ರಿಕವಲ್ಲ, ಅದು ಮೌಲಿಕವಾದದ್ದು. ಆಧ್ಯಾತ್ಮಿಕವಾದದ್ದು. ನಮ್ಮ ಗುರಿ ಸರಕಾರವನ್ನು ಬದಲಾಯಿಸುವುದಿಲ್ಲ, ಒಂದು ರಾಷ್ಟ್ರವನ್ನು ಕಟ್ಟುವುದಾಗಿದೆ. ಆ ಕೆಲಸದ ಒಂದು ಭಾಗ ರಾಜಕಾರಣ, ಒಂದು ಭಾಗ ಮಾತ್ರ. ನಾವು ರಾಜಕಾರಣಕ್ಕಾಗಲೀ, ಸಾಮಾಜಿಕ ಪ್ರಶ್ನೆಗಳಿಗಾಗಲೀ, ತತ್ತ್ವಕ್ಕಾಗಲೀ, ಸಾಹಿತ್ಯಕ್ಕಾಗಲೀ, ವಿಜ್ಞಾನಕ್ಕಾಗಲೀ ನಮ್ಮನ್ನು ಸೀಮಿತಗೊಳಿಸಿಕೊಂಡಿಲ್ಲ. ಆದರೆ ಇವೆಲ್ಲವನ್ನು ಒಳಗೊಂಡ ಒಂದು ತತ್ತ್ವಕ್ಕೆ ಅದನ್ನು ಧರ್ಮ ಎನ್ನಬಹುದು. ಅದು ರಾಷ್ಟ್ರೀಯ ಧರ್ಮ. ಅದು ವಿಶ್ವವ್ಯಾಪಿಯೂ ಹೌದು. ಜೀವನಕ್ಕೆ ಒಂದು ಅಗಾಧವಾದ ಕಾನೂನು ಇದೆ. ಮಾನವನ ವಿಕಾಸದ ಹಿರಿಯ ತತ್ತ್ವವಿದೆ. ಆಧ್ಯಾತ್ಮಿಕ ಜ್ಞಾನದ ಒಂದು ಖಜಾನೆ ಇದೆ. ಮತ್ತೆ ಅನುಭವ. ಇದೆಲ್ಲಕ್ಕೂ ಭಾರತವು ಪೋಷಕ, ರಕ್ಷಕ. ಇದೇ ಅನಂತವಾದ ಸನಾತನ ಧರ್ಮ. ವಿದೇಶೀ ಪ್ರಭಾವದಿಂದಾಗಿ ಭಾರತದ ಧರ್ಮಸಂರಕ್ಷಣೆಯ ಕಟ್ಟಡದಲ್ಲಿ ಬಿರುಕು ಉಂಟಾಗಿದೆ, ನಿಜ. ಆದರೆ ಅದರ ಬದುಕಿನಲ್ಲಿ ಯಾವುದೇ ವ್ಯತ್ಯಾಸವಾಗಿಲ್ಲ. ಕಾರಣ ಭಾರತದ ಧರ್ಮ ಪಾಲಿಸದೆ ಹೋದರೆ ಅದು ಧರ್ಮವೇ ಅಲ್ಲ. ಜೀವನಕ್ಕೆ ಮಾತ್ರ ಅದು ಒಪ್ಪುವಂತಹದಲ್ಲ, ಇಡೀ ಜೀವನವನ್ನು ಆಕ್ರಮಿಸುವಂತಹದು. ಅದರ ಚೇತನ ಪ್ರವೇಶ ಮಾಡಿ ಸಮಾಜವನ್ನು ಎರಕ ಹುಯ್ಯಬೇಕು. ನಮ್ಮ ರಾಜಕಾರಣವನ್ನು, ನಮ್ಮ ಸಾಹಿತ್ಯವನ್ನು, ನಮ್ಮ ವಿಜ್ಞಾನವನ್ನು, ನಮ್ಮ ವೈಯಕ್ತಿಕ ಗುಣವನ್ನು, ಪ್ರೀತಿ–ವಿಶ್ವಾಸಗಳನ್ನು ಎರಕ ಹುಯ್ಯಬೇಕು. ಈ ಧರ್ಮದ ಅಂತರಾಳವನ್ನು ತಿಳಿಯಬೇಕಾದರೆ ಅದರ ಸತ್ಯವನ್ನು ಅನುಭವಿಸಬೇಕಾದರೆ, ಅದರ ಉನ್ನತ ಭಾವನೆಗಳ ಪರಿಚಯ ಮಾಡಿಕೊಳ್ಳಬೇಕಾದರೆ, ನಾವು ಕರ್ಮಯೋಗವನ್ನು ಅರಿಯಬೇಕು. ಯೋಗವನ್ನು ಮಾನವ ಜೀವನದ ಆದರ್ಶವಾಗಿಸಲು ಇಂದು ಭಾರತ ಏಳುತ್ತಿದೆ ಎಂಬುದು ನಮ್ಮ ನಂಬಿಕೆ. ಯೋಗದಿಂದ ಭಾರತವು ತನ್ನ ಸ್ವಾತಂತ್ರ್ಯವನ್ನು ಪಡೆಯಲು ಶಕ್ತಿಯನ್ನು ಪಡೆಯುತ್ತದೆ. ತನ್ನ ಏಕತೆಯನ್ನು ತನ್ನ ಹಿರಿಮೆಯನ್ನು ಹಿಂಪಡೆಯಲು ಯೋಗವು ಅದಕ್ಕೆ ಬಲವನ್ನು ನೀಡುತ್ತದೆ. ನಾವು ಕಾಣುತ್ತಿರುವುದು ಆಧ್ಯಾತ್ಮಿಕ ಆಂದೋಲನ, ಭೌತಿಕವಾಗಿ ಕಾಣುತ್ತಿರುವುದು ಅದರ ಛಾಯೆ ಮತ್ತು ಪ್ರತಿಬಿಂಬ.

ಯೂರೋಪಿನ ವ್ಯಕ್ತಿಗೆ ಯಂತ್ರದ ಮೇಲೆ ವಿಪರೀತ ವಿಶ್ವಾಸ. ಆತ ಮಾನವ ಕುಲವನ್ನು ಪುನರ್ನವೀಕರಣ ಮಾಡಲು ಸಮಾಜ ಮತ್ತು ಸರಕಾರದ ವ್ಯವಸ್ಥೆಗಳನ್ನು ಉಪಯೋಗಿಸುತ್ತಾನೆ. ಹೊಸ ಶತಮಾನವನ್ನು ಹುಟ್ಟುಹಾಕಲು ಪಾರ್ಲಿಮೆಂಟ್‌ನ ನಿರ್ಣಯವನ್ನು ಆತ ಎದುರುನೋಡುತ್ತಾನೆ! ಯಂತ್ರವು ದೊಡ್ಡದು ನಿಜ. ಅದರೆ ನಮ್ಮೊಳಗಿರುವ ಆತ್ಮನಿಗೆ ಸಹಕಾರ ಮಾಡುವಷ್ಟು ಮಾತ್ರ. ಅದಕ್ಕೆ ಒತ್ತಾಸೆಯಾಗಿದ್ದಾಗ ಮಾತ್ರ. ಭಾರತದಲ್ಲಿ ಹತ್ತೊಂಬತ್ತನೆಯ ಶತಮಾನವು ರಾಜಕೀಯ ಆಶೋತ್ತರಗಳ

ಚಳವಳಿಯಾಗಿತ್ತು. ಸಾಮಾಜಿಕ ನವೀಕರಣ ಮಾಡುವ ಕೆಲಸವಾಗಿತ್ತು. ಧಾರ್ಮಿಕ ಮರುಹುಟ್ಟು ಹಾಗೂ ದೃಷ್ಟಿಯನ್ನು ಹೊಂದಿತ್ತು. ಆದರೆ ಅದು ಸೋತಿತು. ಅದಕ್ಕೆ ಕಾರಣ ಅದು ಪಾಶ್ಚಿಮಾತ್ಯ ಪದ್ಧತಿಗಳನ್ನು ಅಳವಡಿಸಿಕೊಂಡಿತು. ಆತ್ಮವನ್ನು ನಿರಾಕರಿಸಿತು. ನಮ್ಮ ಇತಿಹಾಸದಲ್ಲಿ ಏನು ನಡೆಯಿತು ಅದನ್ನು ಮರೆತುಬಿಟ್ಟಿತು. ಯೂರೋಪಿನ ಸಂಸ್ಥೆಗಳನ್ನು ಇಲ್ಲಿ ಪುನರಾವರ್ತನೆಗೊಳಿಸುವುದರಿಂದ ತಾನು ಸಫಲನಾಗಬಹುದು ಎಂದು ಯೂರೋಪಿನ ಪ್ರಗತಿ, ಐಶ್ವರ್ಯ, ಶಕ್ತಿಯನ್ನು ಪಡೆಯಬಹುದು ಎಂದು ತಪ್ಪಾಗಿ ಭಾವಿಸಿತು. ಇಪ್ಪತ್ತನೆಯ ಶತಮಾನದ ನಾವು ಹತ್ತೊಂಬತ್ತನೆಯ ಶತಮಾನದ ಆಂಗ್ಲೀಕರಣವಾಗಿದ್ದ ಗುರಿ, ಆದರ್ಶ ಮತ್ತು ಪದ್ಧತಿಗಳನ್ನು ತಿರಸ್ಕರಿಸುತ್ತೇನೆ. ಅದಕ್ಕೆ ಕಾರಣವೆ, ಆ ಅನುಭವವನ್ನು ನಾವು ಅಂಗೀಕರಿಸಿರುವುದರಿಂದ, ಈಗಿನ ವರ್ತಮಾನವನ್ನು ಆದರ್ಶವಾಗಿಸಿಕೊಳ್ಳುವುದಿಲ್ಲ. ನಾವು ಹಿಂದೆ ಮತ್ತು ಮುಂದೆ ನೋಡುತ್ತೇವೆ. ನಮ್ಮ ಕುಲದ ದೊಡ್ಡ ಇತಿಹಾಸವನ್ನು ನಾವು ನೋಡುತ್ತೇವೆ. ಅದರ ಆಧಾರದ ಮೇಲೆ ನಾವು ಕಟ್ಟುವ ಬೃಹತ್ ಇತಿಹಾಸದ ಕಡೆ ನಮ್ಮ ದೃಷ್ಟಿಯಿದೆ.

ಭಾರತ ಮತ್ತು ಮನುಕುಲದ ಭವಿಷ್ಯ

ಪ್ರಸಕ್ತ ಪ್ರಪಂಚದ ಕಾಲವು ಅನೇಕ ವಿಧವಾದ ಬದಲಾವಣೆಗಳನ್ನು ಕಾಣುತ್ತಿರುವ ರಂಗಮಂದಿರ. ಒಂದು ಎಂದಲ್ಲ, ಅನೇಕ ವಿರೋಧಾತ್ಮಕ ಆದರ್ಶಗಳು ಮನುಕುಲದಲ್ಲಿ ಕೆಲಸ ಮಾಡುತ್ತಿದ್ದು, ಅದು ಬದಲಾವಣೆಗೆ ಹಾತೊರೆಯುತ್ತಿರುವ ಚಿತ್ರವನ್ನು ನೀಡುತ್ತಿದೆ. ಈ ಚಳವಳಿಯ ಕೇಂದ್ರ ಸ್ಥಾನ ಯೂರೋಪೇ ಆದರೂ, ಪೂರ್ವ ದೇಶಗಳನ್ನು ಈ ಆಲೋಚನೆಗಳ ಸಮುದ್ರಮಂಥನ ತನ್ನತ್ತ ಸೆಳೆಯುತ್ತಿದೆ. ಇದರಿಂದ ಹಳೆಯ ಆದರ್ಶಗಳು ನುಚ್ಚು ನೂರಾಗುತ್ತಿವೆ. ಹಳೆಯ ಸಂಸ್ಥೆಗಳು ಮುರಿದುಬೀಳುತ್ತಿವೆ. ಯಾವುದೇ ದೇಶವಾಗಲೀ ಅಥವಾ ಸಮುದಾಯವಾಗಲೀ ಆಧುನಿಕ ಪ್ರಪಂಚದಲ್ಲಿ ಮಾನಸಿಕವಾಗಿ ಗುಂಪುಗಾರಿಕೆಯನ್ನು ಮತ್ತು ತಾನೇ ಬೇರೆ ಎಂದು ತೋರಿಸಲು ಸಾಧ್ಯವಿಲ್ಲ. ಇನ್ನೂ ಹೇಳುವುದಾದರೆ, ಮನುಕುಲದ ಭವಿಷ್ಯತ್ತು ಆಧುನಿಕ ಸ್ಫಿಂಕ್ಸ್ ಸಮ್ಯೆಯನ್ನು ವಿಶೇಷವಾಗಿ ಭಾರತವು ಬಿಡಿಸುವ ರೀತಿಯಲ್ಲಿ ಕುಳಿತಿದೆ. ಭಾರತವು ಏಷಿಯಾ ಖಂಡದ ಪ್ರಾಚೀನ ಭಾವನೆಗಳ ಭಂಡಾರವಾಗಿದ್ದು, ಅದರ ಆಧ್ಯಾತ್ಮಿಕ ರಹಸ್ಯಗಳನ್ನು ತಳೆದಿದೆ. ಮುಖ್ಯವಾದ ಪ್ರಶ್ನೆ ಯಾವುದೆಂದರೆ ಮನುಕುಲದ ಮುಂದಿನ ಪ್ರಗತಿಯು ಪಾಶ್ಚಿಮಾತ್ಯರ ಆಧುನಿಕ ಆರ್ಥಿಕ ಹಾಗೂ ಭೌತಿಕ ನಿಯಮಗಳ ಮೇಲೆ ನಿಲ್ಲಬೇಕೆ, ಅಥವಾ ಉನ್ನತ ಆದರ್ಶದಿಂದ ಪ್ರೇರಿತವಾಗಿ, ಮೇಲಕ್ಕೆ ಎತ್ತಿ ಒಯ್ಯುವ, ಆಧ್ಯಾತ್ಮಿಕ ಸಂಸ್ಕೃತಿ ಮತ್ತು ಪಾಶ್ಚಿಮಾತ್ಯರ ತಿಳುವಳಿಕೆಯಿಂದ ಪ್ರೇರಿತವಾದ ವಿಷಯಗಳ ಮೇಲೆ ನಿಲ್ಲಬೇಕೇ ಎಂಬುದಾಗಿದೆ. ಪಶ್ಚಿಮವು ಹಿಂದೆಂದೂ ತನ್ನನ್ನು

ಆಧ್ಯಾತ್ಮಿಕವಾಗಿ ಮೇಲೆತ್ತುವುದರಲ್ಲಿ ಸಫಲವಾಗಿಲ್ಲ. ಇತ್ತೀಚಿನ ದಿನಗಳಲ್ಲಂತೂ ಅದು ಹೊರಪ್ರಪಂಚದ ರಾಜಕೀಯ ಪ್ರಭಾವಗಳಿಂದ ಆರ್ಥಿಕ ಪ್ರಭಾವಗಳಿಂದ ಪ್ರಪಂಚವನ್ನು ಆಳಲು ನೋಡುತ್ತಿದೆ. ಧರ್ಮದ ಪುನರುಜ್ಜೀವನವಾಗಿದ್ದರೂ ಮತ್ತು ಆಧ್ಯಾತ್ಮದ ಬಗ್ಗೆ ವಿಶಾಲವಾಗಿ ಜನರಲ್ಲಿ ತಿಳುವಳಿಕೆ ಬಂದಿರುವುದಾದರೂ ಅದು ಆಳವಾದ ತಿಳುವಳಿಕೆಯಾಗಿಲ್ಲದೆ ಇರುವುದರಿಂದ, ಪ್ರಕಾಶಮಾನವಾದ ಆಧ್ಯಾತ್ಮ ಕಾಣಿಸದೆ ಇರುವುದರಿಂದ ಅದು ಈ ಪ್ರಪಂಚದ ವಸ್ತು ವಿಷಯದಲ್ಲೇ ಆಲೋಚಿಸಿ ಸಮಸ್ಯೆಗಳನ್ನು ಬಿಡಿಸಬೇಕಾಗಿದೆ. ಅದಕ್ಕೆ ಯಾಂತ್ರಿಕ ಸಲಕರಣೆಗಳನ್ನು ಉಪಯೋಗಿಸಬೇಕಾಗಿದೆ. ಅದೊಂದು ಆಲೋಚಿಸುವ ರಾಜಕೀಯ ಹಾಗೂ ಯಾಂತ್ರಿಕ ಪ್ರಾಣಿಯಾಗಿಬಿಟ್ಟಿದೆ. ಅದಕ್ಕೆ ಕಾರಣ ಅದಕ್ಕೆ ಬೇರೆ ರೀತಿ ಗೊತ್ತಿಲ್ಲದಿರುವುದು. ಬೇರೆ ಉತ್ತರ ಕಂಡುಹಿಡಿಯಲು ಸಾಧ್ಯವಾಗದಿರುವುದು. ಇದಕ್ಕೆ ವಿರುದ್ಧವಾಗಿ ಪೂರ್ವವು, ತಾನು ಆಧ್ಯಾತ್ಮಿಕ ಭಾವವನ್ನು ನಿದ್ರೆ ಹೋಗಲುಬಿಟ್ಟಿರುವುದೇ ಆದರೂ, ಶವಗಳಲ್ಲಿ ಸತ್ಯವನ್ನು ಹುಡುಕಲು ಹೊರಟಿರುವುದೇ ಆದರೂ, ಯಾವಾಗಲೂ ಮುಕ್ತ ಚಿಂತನೆಗೆ ಅವಕಾಶವನ್ನು, ಜಾಗ್ರತಿಗೆ ತನ್ನನ್ನು ಒಡ್ಡಿರುವುದನ್ನೂ ಕಾಣಿಸುತ್ತದೆ. ಹಾಗಾಗಿ ಅದರ ಆಧ್ಯಾತ್ಮಿಕ ಶಕ್ತಿ ಹಾಗೆಯೇ ಉಳಿದಿದೆ. ಅದು ಅಷ್ಟು ಕ್ರಿಯಾತ್ಮಕವಾಗಿಲ್ಲದಿದ್ದರೂ ಅದು ಉಳಿದಿದೆ. ಹಾಗಾಗಿ ಪ್ರಪಂಚದ ಆಸಕ್ತಿಯ ಕೇಂದ್ರ ಈಗ ಪೂರ್ವವಾಗಿದೆ. ಅಲ್ಲಿ ಹಳೆಯ ಆಧ್ಯಾತ್ಮಿಕ ಪ್ರಯೋಗಗಳು ಪುಟಿದೆದ್ದು ವಿಶಾಲವಾದ ದೃಷ್ಟಿಯನ್ನು ಅಳವಡಿಸಿಕೊಂಡು ಸಂಸ್ಥೆಗಳು ಪಶ್ಚಿಮದೊಂದಿಗೆ ಸಂಬಂಧವನ್ನು ಉಳಿಸಿಕೊಂಡು ಹಾಗೂ ಪೌರ್ವಾತ್ಯದಲ್ಲಿ ಏಷಿಯಾದ ಬೆಳಕಿನ ಸಮೃದ್ಧಿ ಅರಿವಿಗೆ ಬಂದು, ಸ್ಥಾವರವಾಗಿರುವ ಶಕ್ತಿಗಳು ಜಂಗಮವಾಗುತ್ತವೆ ಎಂಬುದಾಗಿ ಹೇಳಬಹುದು.

ಪೌರ್ವಾತ್ಯದ ಕೇಂದ್ರಬಿಂದುವಾದ ಭಾರತವು ಇಡೀ ಪಶ್ಚಿಮವು ಬದಲಾಗುತ್ತಿರುವಂತೆ ಇಡೀ ಪೂರ್ವವು ಬದಲಾಗುತ್ತಿರುವಂತೆ ತಾನೂ ಬದಲಾಗ ಬೇಕಾಗಿದೆ. ಯೂರೋಪ್ ಅದರ ಮೇಲೆ ಹಾಕಿರುವ ಭಾರದಿಂದಾಗಿ ಬದಲಾವಣೆಯ ಅಗತ್ಯವಿದೆ. ಹೀಗಾಗಿ ಹೊಸ ಪೌರ್ವಾತ್ಯವು ಆವಶ್ಯಕವಾಗಿ, ತುಲನಾತ್ಮಕವಾಗಿ ಹೋರಾಟದ ಫಲವಾಗಿ ಹುಟ್ಟಿಕೊಂಡ ಸಂಪ್ರದಾಯ ಹಾಗೂ ಪ್ರಗತಿಪರ ಶಕ್ತಿಗಳ ನಡುವೆ ನಡೆಯುವ ಜಗ್ಗಾಟದ ಫಲವಾಗಿ ಹುಟ್ಟಿಕೊಂಡ ಸಂಸ್ಕೃತಿಯಾಗಿ ಕಾಣಿಸುತ್ತದೆ. ಹೀಗಾಗಿ ಇಲ್ಲಿಯ ಸಂಪ್ರದಾಯವಾದಿಗಳು ತಮ್ಮ ಮನಸ್ಸನ್ನು ಬಿಚ್ಚಿ ಆಲೋಚಿಸಿದ್ದೇ ಆದರೆ ಪ್ರಪಂಚದ ಭವಿಷ್ಯತ್ ಸಭ್ಯತೆಗೆ ಒಂದು ನೀಲಿನಕಾಶೆ ಸಿದ್ಧವಾಗುತ್ತದೆ. ಆದರೆ ಅದೇ ತನ್ನ ಬಾಗಿಲನ್ನು ಮುಚ್ಚಿಕೊಂಡು ಸತ್ತ ಕಥೆಗಳನ್ನು ಹೇಳುತ್ತಾ ಕುಳಿತರೆ, ಅಥವಾ ಶಾಲೆಯ ಮಾಸ್ತರಂತೆ ಹೊಸ ಅಗತ್ಯಗಳಿಗೆ ಮನಸ್ಸನ್ನು ಮುಚ್ಚಿಕೊಂಡರೆ, ಅಥವಾ ಕೇವಲ ಪದಗಳ ಜಗ್ಗಾಟದಲ್ಲಿ ಭಾವನೆಗಳನ್ನು

ತೂರಿಬಿಡುವಂತಾದರೆ, ನಿಜವಾದ ವಿಷಯಕ್ಕೆ ತೆರೆದುಕೊಳ್ಳದೇ ಹೋದರೆ, ಅಥವಾ ತೀರಾಕಡಿಮೆ ಬದಲಾವಣೆಯನ್ನು ಮಾತ್ರ ಒಪ್ಪಿಕೊಳ್ಳುವುದೇ ಆದರೆ, ಭವಿಷ್ಯದ ಭಾರತವು ಬದಲಾದ ಯೂರೋಪಿನ ತತ್ತ್ವಗಳ ಆಧಾರದ ಮೇಲೆ ತನ್ನನ್ನು ರೂಪಿಸಿಕೊಳ್ಳುತ್ತದೆ. ಅದು ಕೇವಲ ಯೂರೋಪ್ ಹೇಳುವ ಮಾತುಗಳನ್ನೆ ಭಾವನೆಗಳನ್ನೆ ಮರುನುಡಿಯುತ್ತದೆ. ನಾವೆಲ್ಲಾ ಯೂರೋಪನ್ನು ಪ್ರತಿಬಿಂಬಿಸುವಂತಹ ಕೋತಿಗಳ ತರಹ ಆಗಿಬಿಡುತ್ತೇವೆ. ಅಥವಾ, ಇದು ಬಹುಶಃ ಆದರೆ ಒಳ್ಳೆಯದೇನೋ, ಹೊಸ ಆಧ್ಯಾತ್ಮಿಕ ಎಚ್ಚರ ಇಡೀ ಜನ ಸಮುದಾಯದಲ್ಲಾಗಿ, ಜೀವನದ ಅಂತರಾಳದಲ್ಲಿ ನಡೆದ ಸಮುದ್ರ ಮಂಥನದಿಂದಾಗಿ ಆತ್ಮ ಹಾಗೂ ದೈಹಿಕ ಗುರಿಗಳನ್ನು ಪೂರ್ಣವಾಗಿ ಉತ್ತರಿಸಬಲ್ಲ ಶಕ್ತಿಯ ಉದಯವಾಗಬಹುದು. ಅದು ಪಶ್ಚಿಮದ ಆಧ್ಯಾತ್ಮಿಕ ಹುಡುಕಾಟವೂ ಆಗಬಹುದು. ಅದರಲ್ಲಿ ಮನುಕುಲದ ಶುದ್ಧತೆಗೆ ನಡೆಯುವ ಅನ್ವೇಷಣೆಯೂ ಇದೆ. ಮೂರನೆಯ ಅಂಶವು, ಇನ್ನೂ ತಿಳಿದಿಲ್ಲದ ಪ್ರಮಾಣವು ಪೂರ್ವದ ಶಕ್ತಿಯೇ ಆಗಿದೆ. ಕಾರಣ ಪ್ರಸಕ್ತ ಸನ್ನಿವೇಶದಲ್ಲಿ ನಮ್ಮ ಮುಂದೆ ಎರಡು ವಿರುದ್ಧಾತ್ಮಕ ಅತಿರೇಕಗಳು ಇವೆ. ಒಂದು ಸಂಪ್ರದಾಯದಿಂದ ಆಗಿರುವ ಸ್ಥಾವರತ್ವ, ಹಿಂದಿನ ಮಾತುಗಳನ್ನು ಮೆಲುಕುಹಾಕುತ್ತಾ ನಮ್ಮನ್ನು ನಾವು ಬಂದಿಯಾಗಿಸಿಕೊಂಡಿರುವ ಸ್ಥಾವರತ್ವವಾದರೆ, ಮತ್ತೊಂದು ಪ್ರಗತಿಪರ ವಿಚಾರಧಾರೆ ಕುರುಡನಾಗುವಷ್ಟು ಪ್ರಬಲವಾಗಿ ಬೆಳೆದಿರುವುದು. ಈ ಪ್ರಗತಿಪರ ವಿಚಾರಧಾರೆ ಕೇವಲ ಯೂರೋಪಿನ ಆಲೋಚನೆಗಳನ್ನು ಮರುಕಳಿಸುತ್ತಾ ಇನ್ನೊಬ್ಬರಿಂದ ಕಡ ಪಡೆದ ಆಲೋಚನೆಯಾಗಿ ದೂಷಿತವಾಗಿದೆ. ಇದರ ಫಲಿತಾಂಶ ನಿತಾಂತವಾದ ಕೋಲಾಹಲ. ಈ ಕೋಲಾಹಲದಿಂದಾಗಿ ಯಾವುದೇ ಮಹತ್ತರವಾದದ್ದು ಹೊರಬೀಳುವುದಿಲ್ಲ. ಪ್ರಬಲವಾದದ್ದು, ದೃಢವಾದದ್ದು, ಶಕ್ತಿಯುತವಾದದ್ದು ಹೊರಬೀಳುವುದಿಲ್ಲ. ಇದರಿಂದ ಸಮಸ್ಯೆಯ ಕೇಂದ್ರಸ್ಥಾನವನ್ನು ಮುಟ್ಟುವಲ್ಲಿ ನಾವು ವಿಫಲರಾಗುತ್ತೇವೆ. ಈ ಸಮಸ್ಯೆಗಳು ನಮ್ಮ ಜೀವನದ ಬಾಗಿಲ ಬಳಿ ಬಂದು ನಿಂತ ಸಮಸ್ಯೆಗಳು. ಹುಟ್ಟನ್ನು ಪಡೆಯುವಂತಹ ಆವಶ್ಯಕತೆ ಅಲ್ಲಿದೆ. ವೇದದ ಮಾತನ್ನೇ ಹೇಳುವುದಾದರೆ, ತಾಯಿ ತನ್ನನ್ನು ಕುಗ್ಗಿಸಿ ಇಟ್ಟುಕೊಂಡಿದ್ದಾಳೆ. ಹುಟ್ಟನ್ನು ತನ್ನೊಳಗೆ ಅಡಗಿಸಿಕೊಂಡಿದ್ದಾಳೆ. ತಂದೆಗೆ ಸಹ ಅದನ್ನು ತೋರಿಸಿಲ್ಲ. ತಾಯಿ ಹಿರಿಯಳಾದಾಗ ನಮಗೆ ಮಗು ಹುಟ್ಟಿರುವುದು ತಿಳುವಳಿಕೆಗೆ ಬರುತ್ತದೆ.

ಭಾರತ ಹಾಗೂ ಆಧುನಿಕ ಪ್ರಪಂಚ

ಯೂರೋಪಿನ ದಾಳಿ ಆಗುವುದಕ್ಕೆ ಮೊದಲು ಇದ್ದಂತೆ ಈಗಲೂ ಇರಲು ಪ್ರಯತ್ನಿಸುವುದು ಭವಿಷ್ಯತ್ತಿನ ಆಧುನಿಕ ವಾತಾವರಣ ಹಾಗೂ ಆವಶ್ಯಕತೆಗಳಿಗೆ ಸೋಲನ್ನು ತಂದ ಹಾಗೆ. ನಾವು ಈ ಮಧ್ಯಂತರ ಕಾಲದಲ್ಲಿ ನಮ್ಮ ಮೇಲೆ ನಡೆದ

ಪಾಶ್ಚಿಮಾತ್ಯರ ಅಭಿಪ್ರಾಯ ಹೇರುವಿಕೆಯಿಂದ ದೂರ ಹೋಗಿ ನಮ್ಮದೇ ಮಾದರಿಯಲ್ಲಿ ಜೀವನವನ್ನು ಕಾಣಲು ಪ್ರಯತ್ನಿಸುವುದು, ನಮ್ಮ ಮೇಲೆ ಆದ ಪ್ರಭಾವವನ್ನು ಕಡೆಗಾಣಿಸಿದಂತೆ. ಇದು ಒಬ್ಬ ಮನುಷ್ಯ ತನ್ನ ಜೀವನದ ಹಿಂದಿನ ಕಾಲವನ್ನು ಮತ್ತೆ ಚಾಲತಿಗೆ ತಂದು ಮಧ್ಯಂತರ ಕಾಲವನ್ನು ಮರೆತು ಏನೂ ಆಗದಂತೆ ಮಾಡಿದಂತೆ. ಕಾಲ ಮತ್ತು ಅದರ ಪ್ರಭಾವ ಆತನ ಮೇಲೆ ಹಾಯ್ದುಹೋಗಿ ಆತನನ್ನು ಮುಂದೆ ನಡೆಸಿದಂತೆ. ನಾವು ಭೂತಕಾಲಕ್ಕೆ ನಮ್ಮದೇ ರೂಪಕ್ಕೆ ಹೋಗಲಾರೆವು. ಆದರೆ ನಾವು ಮುಂದೆ ಹೋಗಿ ನಮ್ಮನ್ನು ಹೊಸ ರೂಪದಲ್ಲಿ ಮೂಡಿಸಬಹುದು. ಹಾಗಾದಾಗ ನಾವು ಒಂದು ಉತ್ತಮ, ಪೂರ್ಣಜೀವನದ, ಹೆಚ್ಚು ನಿಜದ, ಮಧ್ಯಂತರ ಕಾಲದ ಅನುಭವವನ್ನು ಉಪಯೋಗಿಸಿರುತ್ತೇವೆ. ನಾವು ನಮ್ಮ ಭೂತಕಾಲದ ಆದರ್ಶವನ್ನು ಖಂಡಿತ ಆಲೋಚಿಸಬಹುದು. ಆದರೆ ಆಲೋಚನೆಯ ರೂಪ, ಮಾತಿನ ವರಸೆ, ಅವುಗಳ ಪ್ರಗತಿ ಇವೆಲ್ಲವೂ ಹೊಸ ಆಲೋಚನೆ ಮತ್ತು ಅನುಭವದಿಂದ ಬದಲಾಗಿದೆ ಎಂಬುದನ್ನು ಗಮನಿಸಬೇಕು. ನಾವು ಅವುಗಳನ್ನು ಪ್ರಾಚೀನ ಮಾತ್ರವಲ್ಲದೆ, ನೂತನ ಚಿಂತನಶೈಲಿಯಲ್ಲಿಯೂ ನೋಡಬೇಕಾಗುತ್ತದೆ. ಈ ನೂತನ ಚಿಂತನ ಶೈಲಿಯಿಂದಾಗಿ ನಾವು ಅವುಗಳಿಗೆ ಬೆಂಬಲ ನೀಡುತ್ತೇವೆ. ನಾವು ಉಪಯೋಗಿಸುವ ಹಳೆಯ ಪದಗಳು ಸಹ ಹೆಚ್ಚಿನ ಆಳವಾದ, ಐಶ್ವರ್ಯವಂತವಾದ ಅಭಿವ್ಯಕ್ತಿಯನ್ನು ನೀಡುತ್ತವೆ. ಮತ್ತೆ ಹೇಳುವುದಾದರೆ, ನಾವು 'ಒಬ್ಬರೇ ಏಕಾಂತ'ವಾಗಿ ಆ ಪದದ ಅರ್ಥದಲ್ಲಿ ಇರಲು ಸಾಧ್ಯವಿಲ್ಲ. ಕಾರಣ ನಾವು ನಮ್ಮ ಸುತ್ತ ಇರುವ ಪ್ರಪಂಚವನ್ನು ಲೆಕ್ಕಕ್ಕೆ ತೆಗೆದುಕೊಳ್ಳಲೇಬೇಕು. ಅದರ ಪೂರ್ಣ ಅರಿವನ್ನು ಪಡೆಯಲೇಬೇಕು, ಇಲ್ಲವಾದರೆ ನಾವು ಬಾಳಲು ಸಾಧ್ಯವಿಲ್ಲ. ಆದರೆ ಈ ಎಲ್ಲದರ ಒಟ್ಟು ಅಂಶವೆಂದರೆ ನಮ್ಮನ್ನೇ ಈ ವಿಷಯಗಳು ಬದಲಾಯಿಸುತ್ತವೆ. ನಮ್ಮ ಮನಸ್ಸು, ಅದರ ಮೇಲೆ ಯಾವುದು ಎಷ್ಟೇ ನಿರ್ಭರವಾಗಿದ್ದರೂ, ತಾನು ನೋಡುವುದರಿಂದ ಪ್ರಭಾವಕ್ಕೆ ಒಳಗಾಗುತ್ತದೆ. ಹೊಸ ಆಲೋಚನೆಯ ವಸ್ತುಗಳನ್ನು ಪಡೆದಾಗ, ಹೊಸ ಕ್ರಿಯೆಗಳನ್ನು ಮಾಡಿದಾಗ ಬದಲಾವಣೆ ಹೊಂದುತ್ತದೆ, ಅದು ಬೇಡ ಎಂದು ತಳ್ಳಿ ಹಾಕಿದಾಗಲೂ ಬದಲಾಗುತ್ತದೆ. ಒಂದು ಹಳೆಯ ಆಲೋಚನೆಯನ್ನು ಸತ್ಯವನ್ನು, ಅದರ ವಿರುದ್ಧ ಬರುವ ಆಲೋಚನೆಯಿಂದ ತಳ್ಳಿ ಸುದೃಢಗೊಳಿಸಲಾದರೂ ಸಹ, ಅದು ಹೊಸದರ ಅಂಗೀಕಾರ ಮತ್ತು ನಿರಾಕರಣೆ ಯಾವುದು ಬೇಕಾದರೂ ಆಗಿ ಹೊಸ ರೂಪದಲ್ಲಿ ಕಾಣಿಸಿಕೊಳ್ಳುತ್ತದೆ. ನನ್ನ ಜೀವನವೂ ಎದುರಿಸಿದ ಇಂತಹದೇ ಜೀವನದ ಅನುಭವಗಳಿಂದಾಗಿ ಬದಲಾವಣೆಗೊಂಡಿದೆ. ಕಡೆಯಲ್ಲಿ, ನಾವು ಆಧುನಿಕ ಜಗತ್ತಿನಲ್ಲಿ ಉನ್ನತ ರೀತಿಯಲ್ಲಿ ನಿರ್ಧಾರವಾಗುವ ಭಾವನೆಗಳು ಮತ್ತು ಸಮಸ್ಯೆಗಳನ್ನು ಎದುರಿಸದೆ ಇರಲು ಸಾಧ್ಯವಿಲ್ಲ. ಆಧುನಿಕ ಜಗತ್ತು ಇನ್ನೂ ವಿಶೇಷವಾಗಿ

ಯೂರೋಪಿಯನ್ ಮಾದರಿಯದಾಗಿದೆ. ಪಾಶ್ಚಿಮಾತ್ಯ ನಾಗರಿಕತೆಯಿಂದ ಪ್ರಭಾವಿತವಾಗಿದೆ. ನಾವು ಈ ತುಲನಾತ್ಮಕ ಅಸಮತೆಯನ್ನು ಸರಿಮಾಡಿ ಏಷಿಯಾದ ಪ್ರಾಧಾನ್ಯತೆಯನ್ನು ಎತ್ತಿ ತೋರಿಸಿ, ಭಾರತದ ಮನಸ್ಸು ಭಾರತೀಯ ಹಾಗೂ ಏಷಿಯಾದ ಸಭ್ಯತೆಯನ್ನು ಎತ್ತಿ ತೋರಿಸುವುದೇ ಆಗಿದೆ. ಆದರೆ ಭಾರತೀಯ ಹಾಗೂ ಏಷಿಯಾದ ಮನಸ್ಸು ಈ ದಿಸೆಯಲ್ಲಿ ಸಫಲವಾಗಬೇಕಾದರೆ ಅದು ತನ್ನ ಆದರ್ಶ ಹಾಗೂ ಚೇತನದ ಮೂಲಕ ಮಾತ್ರ ಸಾಧ್ಯ.

ನಾನು ಹೇಳಿರುವ ತತ್ತ್ವ ನಮ್ಮ ಪ್ರಕೃತಿಯ ಅಗತ್ಯದಿಂದಾಗಿ, ಜೀವನದ ಆವಶ್ಯಕತೆಯಿಂದಾಗಿ ನಮ್ಮ ಚೇತನಕ್ಕೆ, ಪ್ರಕೃತಿಗೆ, ಆದರ್ಶಕ್ಕೆ, ನಿಷ್ಠೆ ಇರಬೇಕಾಗುತ್ತದೆ. ಹೊಸ ಯುಗದಲ್ಲಿ ನಮ್ಮದೇ ರೂಪದ ಸೃಷ್ಟಿ ಹಾಗೂ ಹೊಸ ವಾತಾವರಣ ಮಾತ್ರವಲ್ಲದೆ, ಗಟ್ಟಿಯಾದ ನಿರ್ಧಾರಯುತವಾದ ಬಾಹ್ಯ ಪ್ರಭಾವಗಳು ಒಂದು ಪರಿಸ್ಥಿತಿಯಲ್ಲಿ ಪೂರ್ತ ನಿರಾಕರಣೆಯಲ್ಲ. ಹಾಗಾಗಿ ಅಲ್ಲಿ ಆವಶ್ಯಕವಾಗಿ ಸೇರಿಸಿಕೊಂಡರೆ ಸಫಲವಾಗುತ್ತದೆ. ಒಂದು ಕಠಿಣವಾದ ಪ್ರಶ್ನೆ ಉಳಿದುಹೋಗುತ್ತದೆ. ಅದರ ಸ್ತರ, ನಮ್ಮ ಮಾರ್ಗದರ್ಶಿ ಸೂತ್ರಗಳ ಅದನ್ನು ಆಲೋಚಿಸಲು, ನಾವು ಪ್ರತಿಯೊಂದು ಸಂಸ್ಕೃತಿಯ ಭಾಗವನ್ನು ನೋಡಬೇಕು. ಭಾರತೀಯ ಚೇತನ ಯಾವುದು ಎಂಬ ಬಗ್ಗೆ ಹೊಂದುವ ದೃಷ್ಟಿ, ಅವು ಪ್ರಸಕ್ತ ಸನ್ನಿವೇಶದಲ್ಲಿ ಹೇಗೆ ಕೆಲಸ ಮಾಡುತ್ತದೆ, ಹಾಗೂ ಪ್ರತಿ ಭಾಗದಲ್ಲೂ ಅದರ ಸಾಧ್ಯತೆಗಳೇನು ಎಂಬುದು ಹೊಸ ಸೃಷ್ಟಿಗೆ ಕಾರಣವಾಗುತ್ತದೆ. ಈ ರೀತಿಯ ಆಲೋಚನೆಯಲ್ಲಿ ನಾವು ತೀರಾ ತತ್ತ್ವಸಿದ್ಧಾಂತಗಳಿಗೆ ಅಂಟಿಕೊಂಡು ಇರಬೇಕಾಗಿಲ್ಲ. ಪ್ರತಿಯೊಂದು ಭಾರತೀಯ ಮನಸ್ಸು ಈ ಬಗ್ಗೆ ಆಲೋಚನೆ ಮಾಡಬೇಕು– ಬಂಗಾಳದ ಕಲಾಕಾರರು ತಮ್ಮ ಕ್ಷೇತ್ರದಲ್ಲಿ ಉಳಿಸಿಕೊಳ್ಳುತ್ತಿರುವಂತೆ – ತನ್ನ ಶಕ್ತಿ ಮತ್ತು ಬೆಳಕಿನ ಪರಿಸ್ಥಿತಿಯಲ್ಲಿ ಉಳಿಸಿಕೊಳ್ಳಬೇಕು. ಭಾರತೀಯ ಪುನರುಜ್ಜೀವನದ ಚೇತನ ಮಿಕ್ಕೆಲ್ಲವನ್ನು ಸಂಭಾಳಿಸುತ್ತದೆ. ಇದೊಂದು ವಿಶ್ವ ಸಮಯ– ಚೇತನ ನಮ್ಮ ನಡುವೆ ಇದ್ದು ಹೊಸದಾದ, ಹಿರಿಯದಾದ ಭಾರತವನ್ನು ಸೃಷ್ಟಿಸುತ್ತದೆ.

ಭಾರತೀಯತೆಯ ಪುನಶ್ಚೇತನ

...ನಾವು ಭಾರತದ ಕೆಲಸ ಮಾಡುತ್ತಿರುವ ವ್ಯಕ್ತಿಗಳಿಗೆ ವಿಶೇಷವಾಗಿ ಯುವಕರಿಗೆ ಹೇಳುತ್ತೇವೆ. ಭಾರತದ ಕೆಲಸ ಮಾಡಲು, ಪ್ರಪಂಚದ ಕೆಲಸ ಮಾಡಲು ದೇವರ ಕೆಲಸ ಮಾಡಲು ಹೇಳುತ್ತೇವೆ: “ನೀವು ಈ ಆದರ್ಶಗಳನ್ನು ಮನಸಾರೆ ಒಪ್ಪಲಾರಿರಿ. ಅದನ್ನು ಆಚರಣೆಗೆ ತರಲಾರಿರಿ. ನೀವು ಯೂರೋಪಿಯನ್ ಆದರ್ಶಗಳನ್ನು ಒಪ್ಪಿಕೊಂಡಿದ್ದರೆ ಅಥವಾ ಜೀವನವನ್ನು ಭೌತಿಕವಾದದ ಮೇಲೆ ನೋಡುವುದಾದರೆ ನೀವು ಈ ಆದರ್ಶಗಳನ್ನು ಆಚರಣೆಗೆ ತರಲಾರಿರಿ. ಭೌತಿಕವಾಗಿ ನೀವು ಏನೂ

ಅಲ್ಲ. ಆಧ್ಯಾತ್ಮಿಕವಾಗಿ ನೀವು ಎಲ್ಲವೂ ಹೌದು. ಭಾರತೀಯ ಮಾತ್ರ ಎಲ್ಲವನ್ನೂ ನಂಬಬಲ್ಲ. ಎಲ್ಲವನ್ನು ಎದುರಿಸಬಲ್ಲ. ಆತ್ಮಾರ್ಪಣೆ ಮಾಡಬಲ್ಲ. ಹಾಗಾಗಿ ನೀವು ಮೊದಲು ಭಾರತೀಯರಾಗಬೇಕು. ನಿಮ್ಮ ಹಿಂದಿನ ತಲೆಮಾರಿನವರ ಪಿತ್ರಾರ್ಜಿತ ಸಂಪತ್ತನ್ನು ಹೊರತನ್ನಿ. ಆರ್ಯನ್ ಆಲೋಚನೆಯನ್ನು, ಆರ್ಯನ್ ಶಿಸ್ತನ್ನು, ಆರ್ಯನ್ ಗುಣವನ್ನು, ಆರ್ಯನ್ ಚೇನತವನ್ನು ತನ್ನಿ. ವೇದಾಂತ, ಗೀತೆ, ಯೋಗವನ್ನು ಮತ್ತೆ ಬಳಸಿಕೊಳ್ಳಲು ಆರಂಭಿಸಿ. ಅವುಗಳನ್ನು ಬರೀ ಬುದ್ಧಿವಂತಿಕೆಯಲ್ಲಿ ಮತ್ತು ಭಾವನೆಯಲ್ಲಿ ಆಚರಣೆಗೆ ತರದೆ, ನಿಮ್ಮ ಜೀವನದಲ್ಲೂ ಆಚರಿಸಿ. ಅದನ್ನೇ ಜೀವನವನ್ನಾಗಿಸಿ, ಆಗ ನೀವು ಗಟ್ಟಿಮುಟ್ಟಾಗುತ್ತಿರಿ, ಸದೃಢರಾಗುತ್ತೀರಿ, ನಿಮ್ಮನ್ನು ಯಾರಿಂದಲೂ ಸೋಲಿಸಲಾಗುವುದಿಲ್ಲ, ಭಯರಹಿತರಾಗುತ್ತೀರಿ. ಜೀವನವಾಗಲೀ, ಸಾವಾಗಲೀ ನಿಮಗೆ ಭಯವನ್ನು ತರುವುದಿಲ್ಲ. ಕಷ್ಟ ಹಾಗೂ ಅಸಾಧ್ಯ ಎಂಬ ಪದಗಳು ಮಾಯವಾಗಿಬಿಡುತ್ತವೆ. ಆತ್ಮಶಕ್ತಿ ನಿತಾಂತವಾದದ್ದು. ನೀವು ನಿಮ್ಮ ಹೊರಗಿನ ಚಕ್ರಾಧಿಪತ್ಯವನ್ನು ಮತ್ತೆ ಹಿಂದೆ ಪಡೆಯಿರಿ. ಅಲ್ಲಿ ನಿಮ್ಮ ತಾಯಿ ಬರುತ್ತಾಳೆ. ಅವಳು ನಿಮ್ಮ ಪೂಜೆಗಾಗಿ ಕಾದಿರುತ್ತಾಳೆ – ನಿಮಗೆ ಶಕ್ತಿ ನೀಡಲು. ಅವಳನ್ನು ನಂಬಿ, ಸೇವೆ ಮಾಡಿ, ಆಕೆಯಲ್ಲಿ ಮನಸ್ಸನ್ನು ನಾಟಿ, ನಿಮ್ಮ ಅಹಂ ದೇಶದ ದೊಡ್ಡ ಅಹಂ. ಮನುಕುಲಕ್ಕೆ ಸಲ್ಲಿಸಿದ ನಿಸ್ವಾರ್ಥ ಸೇವೆ. ನಿಮ್ಮಲ್ಲಿರುವ ಎಲ್ಲಾ ಶಕ್ತಿಯ ಸ್ರೋತವನ್ನು ಒಗ್ಗೂಡಿಸಿ ನಿಮ್ಮಲ್ಲಿ ಸೇರಲಿ. ಸಾಮಾಜಿಕ ಗಟ್ಟಿತನ, ಬೌದ್ಧಿಕ ಔನ್ನತ್ಯ, ರಾಜಕೀಯ ಸ್ವಾತಂತ್ರ್ಯ, ಮಾನವೀಯ ಆಲೋಚನೆಯ ಮೇಲೆ ಹಿಡಿತ, ಜಗತ್ತನ್ನು ಆಳುವಂತಹ ಶಕ್ತಿ ಬರಲಿ.”

ಭಾರತದ ಭವಿಷ್ಯತ್ತಿನ ಉದಯ ಸೂರ್ಯ

ಭಾರತೀಯ ಪುನರ್ನವೀಕರಣ ಕಣ್ಣಿಗೆ ಕಾಣುತ್ತಿದೆ. ಅದು ಅದರ ಭವಿಷ್ಯತ್ತಿನ ರೂಪರೇಷೆಗಳನ್ನು ನಿರ್ಧರಿಸಬೇಕು. ಅದರ ಮೊದಲನೆ ಕೆಲಸ ಎಂದರೆ ಪ್ರಾಚೀನ ಆಧ್ಯಾತ್ಮಿಕ ಜ್ಞಾನ ಮತ್ತು ಅನುಭವವನ್ನು ಅದರೆಲ್ಲ ವೈಭವ, ಆಳ, ಪೂರ್ಣತೆಯಲ್ಲಿ ಮತ್ತೆ ಪಡೆಯುವುದು. ಈ ಆಧ್ಯಾತ್ಮಕತೆಯ ಹರಿವು ಹೊಸ ರೂಪಗಳಾಗಿ ತತ್ತ್ವಶಾಸ್ತ್ರ, ಸಾಹಿತ್ಯ, ಕಲೆ, ವಿಜ್ಞಾನ ಮತ್ತು ಗಂಭೀರವಾಗಿ ವಿಷಯಗಳಲ್ಲಿ ಧಾರೆಯಾಗಿ ಹಿಡಿದಿರುವುದನ್ನು ಮತ್ತೆ ಪಡೆಯುವುದು ಎರಡನೆಯದು. ಮೂರನೆಯದು ಮತ್ತು ಕಠಿಣವಾದದ್ದು ಎಂದರೆ ಭಾರತೀಯ ಚೇತನವನ್ನು ಗಮನದಲ್ಲಿಟ್ಟು ಆಧ್ಯಾತ್ಮಿಕ ಸಮಾಜವೊಂದರ ನಿರ್ಮಾಣಕ್ಕಾಗಿ ಪ್ರಯತ್ನಿಸುವುದು. ಈ ಮೂರು ವಿಷಯಗಳನ್ನು ಅದರ ಯಶಸ್ಸು ಅದು ಮನುಕುಲಕ್ಕೆ ನೀಡುವ ಭವಿಷ್ಯವನ್ನು ನಿರ್ಧರಿಸುತ್ತದೆ.

...ಭಾರತದ ಸೂರ್ಯನ ಭವಿಷ್ಯತ್ತು ಉಜ್ವಲವಾಗಿದ್ದು, ಅದು ಇಡೀ ಭಾರತವನ್ನು ತುಂಬುತ್ತದೆ. ಅದರ ಬೆಳಕು ಉಕ್ಕಿ ಹರಿದು ಏಷಿಯಾ ಖಂಡವನ್ನು

ಉಕ್ಕಿ ಹರಿಯುತ್ತದೆ. ಪ್ರಪಂಚದಲ್ಲೂ ಉಕ್ಕಿ ಹರಿಯುತ್ತದೆ. ಪ್ರತಿ ಗಂಟೆಯೂ, ಪ್ರತಿಕ್ಷಣವೂ ಅವರನ್ನು ದೇವರು ನೇಮಿಸಿರುವ ಬೆಳಕಿನ ಗುರಿಯ ಹತ್ತಿರ ಬರುವಂತೆ ಮಾಡುತ್ತಿದೆ.

...ಭಾರತದ ಕೆಲಸ ಇಷ್ಟೇ – ಪ್ರಪಂಚಕ್ಕೆ ಅನಂತವಾದ ಬೆಳಕನ್ನು, ಪುನರ್ನವೀಕರಣವನ್ನು ನೀಡುವುದೇ ಆಗಿದೆ. ಪ್ರಪಂಚ ಹಳತಾದಂತೆ, ಸುಸ್ತಾದಂತೆ, ಅದರ ಭೌತಿಕ ವಿಷಯಗಳಲ್ಲಿ ಕುಂದು ಬರಲಾರಂಭಿಸಿದಂತೆ, ತನ್ನ ಸಮಸ್ಯೆಗಳಿಗೆ ಉತ್ತರ ಕಂಡುಹಿಡಿದುಕೊಳ್ಳಲು ಸಾಧ್ಯವಾಗದಾಗ, ಭಾರತದ ಕೆಲಸ ಮಹತ್ತರವಾಗಿ ಯುವಕರನ್ನು ಮನುಕುಲಕ್ಕೆ ಮರಳಿಸುವ ಹಾಗೂ ಅದರ ಅಮರತೆಯ ನೆನಪನ್ನು ಮಾಡಿಕೊಡುವ ಕೆಲಸ ಮಾಡಬೇಕಾಗುತ್ತದೆ. ಅದು ತನ್ನ ಎದೆಯಿಂದ ಕಳುಹಿಸುವ ಬೆಳಕು ಭೂಮಿಯನ್ನು ತುಂಬಿ, ಆಕಾಶವನ್ನು ತುಂಬಿ, ಮನುಕುಲವು ಅದರಲ್ಲಿ ಈಜಾಡುವಂತಾಗುತ್ತದೆ – ಸೇಂಟ್ ಜಾರ್ಜ್‌ನು ಜೀವನದ ಬಾವಿಯಲ್ಲಿ ಮುಳುಗಿ ಹಾಕಿ ತನ್ನ ಶಕ್ತಿಯನ್ನು ಮತ್ತೆ ಪಡೆದುಕೊಂಡಂತೆ. ಹಾಗೆಯೇ ಭಾರತವು ಪ್ರಪಂಚಕ್ಕೆ ಶಕ್ತಿಯನ್ನು, ಆಸೆಯನ್ನು, ವೀರ್ಯವನ್ನು ನೀಡಿ ಅದರ ದೀರ್ಘ ಪ್ರಯಾಣಕ್ಕೆ ಸಹಾಯ ಮಾಡುತ್ತದೆ. ಅಂತಹ ಸಮಯ ಈಗ ನಮ್ಮ ಬಳಿ ಬಂದಿದೆ.

* * * *